ಓದು, ಬರಹ ಬಲ್ಲವರ ಮಾಸಪತ್ರಿಕೆ

- ವಿಶ್ವ ಕನ್ನಡದ ತಿಳುವಳಿಕೆ
- ಮಕ್ಕಳ ರಾಷ್ಟ್ರಗೀತೆ: ನಮ್ಮ ಕನಸು
- ನ್ಯಾಯದಾನದ ವಿಳಂಬಕ್ಕೆ ಪರಿಹಾರ ಏನು
- ಸ್ತ್ರೀವಾದದ ಮೂಲ : ಅಬಲೋನ್ನತಿಲೇಖಮಾಲಾ
- ಅವಿವಾಹಿತ ಮಹಿಳೆಯರು
- ಮಹಿಳೆ ಎಷ್ಟು ಸುರಕ್ಷಿತಳು
- ಕಾಲಸೆಂಟರ್ ನೋಟ
- ಕನ್ನಡ ವಿದ್ವಾಂಸರಿಗಲ್ಲ ಸಾಮಾನ್ಯರಿಗೆ
- ಸರ್ವಸಮ್ಮತ ಸಮಗ್ರ ವ್ಯಾಕರಣ ರಚನೆ
- ನಾಟಕಲೋಕಕ್ಕೆ ಒಳ್ಳೆಯ ಸೇರ್ಪಡೆ
- ಕನ್ನಡ ಸಂಸ್ಕೃತಿ ಇಲಾಖೆಯ ಕುಸಂಸ್ಕೃತಿ
- ಕಾರ್ಪೋರೇಟ್ ಕಾವ್ಯರೋದನ

ಜನವರಿ ೨೦೦೭

ಸಂಪಾದಕ
ಪುಸ್ತಕಮನೆ ಹರಿಹರಪ್ರಿಯ

ಸಂಚಿಕೆ : ೫ | ಓದು, ಬರಹ ಬಲ್ಲವರ ಮಾಸಪತ್ರಿಕೆ | ಜನವರಿ ೨೦೦೭

ಒಳಪುಟಗಳಲ್ಲಿ....

೧. ವಿಶ್ವ ಕನ್ನಡದ ತಿಳುವಳಿಕೆ .... ಸಂಪಾದಕೀಯ ೧

೨. ಮಕ್ಕಳ ರಾಷ್ಟ್ರಗೀತೆ: ನಮ್ಮ ಕನಸು .... ಶಂ.ಗು. ಬಿರಾದಾರ ೪

೩. ನ್ಯಾಯದಾನದ ವಿಳಂಬಕ್ಕೆ ಪರಿಹಾರ ಏನು .... ಕೋ. ಚೆನ್ನಬಸಪ್ಪ ೬

೪. ಸ್ತ್ರೀವಾದದ ಮೂಲ : ಅಬಲೋನ್ನತಿಲೇಖಮಾಲಾ .... ಮ॥ ಸೂರ್ಯನಾರಾಯಣರಾವ್ ೧೦

೫. ಅವಿವಾಹಿತ ಮಹಿಳೆಯರು .... ಬಿ.ಎಂ. ರೋಹಿಣಿ ೧೩

೬. ಮಹಿಳೆ ಎಷ್ಟು ಸುರಕ್ಷಿತಳು .... ಕಮಲಾ ಹಂಪನಾ ೧೬

೭. ಕಾಲಸೆಂಟರ್ ನೋಟ .... ಸಾತವಲ್ಲಿ ಜಾಗೃತಿಪ್ರಿಯ ೧೯

೮. ಕನ್ನಡ ವಿದ್ವಾಂಸರಿಗಲ್ಲ ಸಾಮಾನ್ಯರಿಗೆ .... ಡಿ.ಎನ್. ಶಂಕರ ಭಟ್ ೨೩

೯. ಸರ್ವಸಮ್ಮತ ಸಮಗ್ರ ವ್ಯಾಕರಣ ರಚನೆ .... ಬಿ. ಬಿ. ರಾಜಪುರೋಹಿತ ೨೬

೧೦. ನಾಟಕಲೋಕಕ್ಕೆ ಒಳ್ಳೆಯ ಸೇರ್ಪಡೆ .... ಜಯಪ್ರಕಾಶ ಮಾವಿನಕುಳಿ ೨೯

೧೧. ಕನ್ನಡ ಸಂಸ್ಕೃತಿ ಇಲಾಖೆಯ ಕುಸಂಸ್ಕೃತಿ .... ಆರ್.ವಿ. ಭಂಡಾರಿ ೩೨

೧೨. ಕಾರ್ಪೊರೆಟ್ ಕಾವ್ಯರೋದನ .... ತಲಸ್ಪರ್ಶಿ ೩೪

ಬಿಡಿಪ್ರತಿ : ೧೫/- ರೂ. | ಖಾಸಗಿ ಪ್ರಸಾರಕ್ಕಾಗಿ ಮಾತ್ರ | ವಾರ್ಷಿಕ ಚಂದಾ : ೧೫೦/- ರೂ.

ಚಂದಾದಾರರ ಹಾಗೂ ಜಾಹೀರಾತುದಾರರ ಗಮನಕ್ಕೆ

ಹಣವನ್ನು ಎಂ.ಓ./ಡಿ.ಡಿ./ಚೆಕ್‌ಗಳಲ್ಲಿ (ಬೆಂಗಳೂರಿನ ಹೊರಗಿನವರು ೨೫/- ರೂ. ಸೇರಿಸಿ) ಪುಸ್ತಕಮನೆ ಹೆಸರಿಗೆ ಕಳಿಸಿಕೊಡಬೇಕಾಗಿ ವಿನಂತಿ.

ಪ್ರಕಾಶನ

ಪುಸ್ತಕಮನೆ

೭೦೨, ಬಿ.ಸಿ.ಸಿ.ಹೆಚ್.ಎಸ್. ಲೇಔಟ್, ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು ೫೬೦೦೬೨
ಮೊಬೈಲ್ : ೯೮೪೫೮೬೭೧೮೪ / ೯೨೪೨೨೨೧೫೦೬

ಮುದ್ರಣ

ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು ೫೬೦ ೦೨೬. ದೂರವಾಣಿ : ೩೨೭೧೫೭೭೩ / ೨೬೭೫೭೧೯೫

ವಿಶ್ವ ಕನ್ನಡದ ತಿಳುವಳಿಕೆ

ಸಂಪಾದಕೀಯ

ನನ್ನ ಜೀವಮಾನದಲ್ಲಿಯೇ ಎರಡನೇ ಸಲ ನಡೆಯಲಿರುವ ಸಮ್ಮೇಳನ ಇದು. ಮೊದಲಿನದು, ೧೯೮೫ರಲ್ಲಿ ಕೊನೆಗೂ ಮುಂದೂಡಿ ೩ ವರ್ಷಗಳ ಕಾಲಕ್ಕೆ ಮೈಸೂರಿನಲ್ಲಿ ನಡೆದೇ ಹೋಯಿತು. ಕನ್ನಡಿಗರ, ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಯೆಂದೋ, ರಾಷ್ಟ್ರಕವಿ ಕುವೆಂಪು ಅವರ ನೇತೃತ್ವದಲ್ಲಿ ನಡೆಯಬೇಕು ಎಂದೋ ಅಂತೂ ಮೈಸೂರನ್ನು ಆರಿಸಿದ್ದಿರಬೇಕು. ಗುಂಡೂರಾವ್ ಅವರ ಅಧಿಕಾರ ಉರುಳಿ, ರಾಮಕೃಷ್ಣ ಹೆಗಡೆ ಆಡಳಿತ ಕಾಲದಲ್ಲಿ ಇದು ಈಡೇರಿತು. ಆದರೆ ಅರ್ಥಪೂರ್ಣ ಆಚರಣೆಗೆ ಆರ್ಥಿಕ ಪೂರ್ಣ ಮುಗ್ಗಟ್ಟಿನಲ್ಲಿಯೇ ಮುಗಿಸಬೇಕಾದ ಅಂದಿನ ಆಡಳಿತ ಸರ್ಕಾರದ ಪರಿಸ್ಥಿತಿ ಆಗಿತ್ತು. ಜೊತೆಗೆ ಗೋಕಾಕ್ ವರದಿ ಚಳುವಳಿ ರೂಪತಾಳಿ, ಸಂಸ್ಕೃತ-ಕನ್ನಡ ಭಾಷೆಗಳ, ಮೇಲು-ಕೆಳ ವರ್ಗಗಳ, ಶಿಕ್ಷಣ-ಸಂಸ್ಕೃತಿಗಳ ಸಂಘರ್ಷಕ್ಕೆ ತಿರುಗಿತ್ತು. ಇಂತಹ ಕಾಲಘಟ್ಟದಲ್ಲಿ ಕನ್ನಡಿಗರ ಸರ್ವತೋಮುಖ ಬೆಳವಣಿಗೆಗೆ, ಕನ್ನಡ ಸಂಸ್ಕೃತಿಯ ಪ್ರತೀಕವಾಗಬೇಕೆಂದು ಭವ್ಯ ಪರಂಪರೆಯುಳ್ಳ ಮೈಸೂರಿನಲ್ಲಿ ನಡೆದೇ ನಡೆಯಿತು.

ಸಾಹಿತ್ಯ ಪರಿಷತ್ತಿನ ಸಮ್ಮೇಳನಕ್ಕೆ ಯಾವ ರೀತಿಯಲ್ಲಿ ವಿಭಿನ್ನವಾಗದೆ, ಅಬ್ಬಬ್ಬಾ ಎಂದರೆ ಖ್ಯಾತನಾಮರ ಒಂದಷ್ಟು ಪುಸ್ತಕಗಳು, ಸಾಹಿತ್ಯವೇ ಅಲ್ಲದೆ ಕೆಲವು ಪ್ರತಿಷ್ಠಿತರ ಗೋಷ್ಠಿಗಳು, ರಂಗಮಂದಿರಗಳ ನಿರ್ಮಾಣಗಳು, ಕುವೆಂಪು – ಶಿವರಾಮಕಾರಂತರ ಸಮಾಗಮದಂತಹ ಸಂಗತಿಗಳು ಬಿಟ್ಟರೆ ಮಿಕ್ಕವೆಲ್ಲ ಕ್ಷುಲ್ಲಕವಾದ ಪ್ರಸಂಗಗಳೇ. ನಗರಪಾಲಿಕೆ ಸದಸ್ಯರಿಗೆ ಆಹ್ವಾನವಿಲ್ಲ, ಆಹ್ವಾನಿತರಿಗೆ ಹೋಟೆಲುಗಳಲ್ಲಿ ವ್ಯವಸ್ಥೆಯಿಲ್ಲ ಇತ್ಯಾದಿ ರಂಪರಾಡಿ. ಇದು, ಇದಿಷ್ಟಕ್ಕಾಗಿ ವಿಶ್ವ ಕನ್ನಡವೆ? ಮತ್ತೆ ಎರಡನೇ ಬಾರಿ ನಡೆಯಲಿರುವ ಸಮ್ಮೇಳನಕ್ಕೆ ಅಬ್ಬಬ್ಬಾ ಎಂದರೆ, ಬೆಳಗಾವಿಯನ್ನು ಮಹಾರಾಷ್ಟ್ರಿಗರಿಂದ, ಕೇಂದ್ರ ಸರ್ಕಾರದಿಂದ ಕಾಪಾಡಿಕೊಳ್ಳಲು ಮಾಡುತ್ತಿರುವ ಪ್ರಯತ್ನ ಒಂದೇ ಕಾರಣ ಬಿಟ್ಟರೆ, ಮತ್ತಿನ್ನೇನು ಎನ್ನುವಂತಾಗಿದೆ. ಹಾಗಿದ್ದರೆ ಈ ವಿಶ್ವ – ಕನ್ನಡವೆಂದರೆ ಏನು?

ತಮಿಳರು, ತೆಲುಗರು ಕೈಗೊಂಡರು, ಆಚರಿಸಿದರು ಎಂಬ ಉಮೇದುಬಿಟ್ಟರೆ, ಕನ್ನಡಿಗರ ಕರ್ನಾಟಕ ಸರ್ಕಾರದ ಮುಂದೆ ಅಂದು ಇಂದು ಇರುವ ಉದ್ದೇಶ, ಆಶಯಗಳಾದರು ಏನು? ರಾಷ್ಟ್ರಕವಿ, ಶಾಸ್ತ್ರೀಯ ಭಾಷೆ ಎಂಬ ಅಬದ್ಧ ಶಬ್ದ, ಅರ್ಥ ಪ್ರಯೋಗಗಳಂತೆಯೇ ವಿಶ್ವಕ್ಕು ಕನ್ನಡಕ್ಕು ಕೂಡುವಳಿ ಮಾಡಿದಂತಿದೆ, ಮಾಧ್ಯಮದವರು. ವಿಶ್ವ ಎನ್ನುವುದು ದೇಶ ವಿಶೇಷಣ. ಕನ್ನಡ ಎನ್ನುವುದು ಭಾಷಾವಾಚಿಕ. ಪರಸ್ಪರ ಏನು ಸಂಬಂಧ? ಎಲ್ಲಿಯ ಸಂಬಂಧ? ಕೊನೆಗೆ ಹಿರಿಯರು ಹಿಂದೆಯೇ ಗುರುತಿಸಿದಂತೆ ವಿಶ್ವ ಕರ್ನಾಟಕ ಪರಿಕಲ್ಪನೆಯೇ ಮಹತ್ತ್ವದ್ದು ಎನ್ನಿಸುವುದಿಲ್ಲವೆ?

ಕೇವಲ ಅಥವಾ ಬರಿ ಸಾಹಿತ್ಯ, ಸಾಹಿತಿಗಳು, ಅಭಿಮಾನಿಗಳ ಮೆರವಣಿಗೆಗೆ, ಜಾತ್ರೆಗೆ ವಿಶ್ವ ಕನ್ನಡವನ್ನು ಊರು, ಬೀದಿ, ಕೇರಿಯಲ್ಲಿ ನಡೆಸುವ ಧ್ಯೇಯೋದ್ದೇಶವೇ ಆದರೆ, ಸದನಗಳನ್ನು ಬೆಳಗಾವಿಯಲ್ಲಿ ನಡೆಸಿ ಮೇಲು ನೋಟಕ್ಕೆ ೫೦ ಕೋಟಿ ಸುರಿದು ಕರಿದಂಟು ತಿಂದು, ಕೋರೆಯಂತಹ ಶಿಕ್ಷಣ ತಜ್ಞರನ್ನು ಗುಂಡಿಗೆ ಗುರಿಮಾಡಿದ ಸಾರ್ಥಕ್ಯವೇ ನಮ್ಮ-ನಮ್ಮ ಕಾಲದ ಘನಸಾಧನೆಯಾದೀತಷ್ಟೆ!

ಸರಿಸುಮಾರು ೫೦ ಕೋಟಿ ತಲುಪುತ್ತಿರುವ ಕನ್ನಡಿಗರ, ವಿಶ್ವವನ್ನೇ ಕಣ್ಣಮುಂದಿರಿಸಿಕೊಂಡರೆ ಕೆಲವೇ ಲಕ್ಷ ಪ್ರಜೆಗಳಿರುವ ರಾಷ್ಟ್ರಗಳೇ ಬದುಕಿನ ಹಲವು ಕ್ಷೇತ್ರಗಳಲ್ಲಿ ಇಟ್ಟಿರುವ ಹೆಜ್ಜೆಗಳನ್ನು ನೆನೆಸಿಕೊಂಡರೆ, ಕರ್ನಾಟಕ ಇರಲಿ ಭಾರತವೇ ತಲೆತಗ್ಗಿಸಬೇಕಾದ ಸ್ಥಿತಿ ನಮ್ಮ ಎದುರಿಗೆ ಇದೆ.

ಕೇಂದ್ರ–ರಾಜ್ಯ ಸಂಘರ್ಷ, ಶಿಕ್ಷಣ–ಉದ್ಯೋಗಗಳಲ್ಲಿ ಮೀಸಲಾತಿ ಸಮಸ್ಯೆ, ಗಡಿ–ಜಲ ವಿವಾದ, ಕೋಮು ಸಂಘರ್ಷ, ಭಾಷಾ ಸಮಸ್ಯೆ, ಭಯೋತ್ಪಾದನೆ, ಜಾಗತೀಕರಣ, ಪ್ರತ್ಯೇಕತಾವಾದ, ಪ್ರಾದೇಶಿಕ ಅಸಮತೋಲನ, ಮತೀಯತೆ, ಗಂಡು ಹೆಣ್ಣಿನ ಶೋಷಣೆ.... ಹೀಗೆ ಕಳೆದ ೨೫ ವರ್ಷಗಳಲ್ಲಿ ಏಳಿಗೆ ಇರಲಿ ಸುಧಾರಿಸಿಕೊಳ್ಳುವುದಕ್ಕೂ ಸಹಜವಾಗಿ ಬದುಕುವುದಕ್ಕೂ ಅಸಾಧ್ಯವಾದ ಪರಿಸ್ಥಿತಿ ನಾವು ತಂದುಕೊಂಡಿದ್ದೇವೆ.

ಹೆಸರಿಗಷ್ಟೇ ವಿಜ್ಞಾನದಲ್ಲಿ ಸಿಎನ್‌ಆರ್ ರಾವ್ ಅವರಿಗೆ, ಶಾಂತಿ ಸ್ಥಾಪನೆಗಾಗಿ ರವಿಶಂಕರ್ ಅವರಿಗೆ, ಸಾಹಿತ್ಯಕ್ಕಾಗಿ ಯು.ಆರ್. ಅನಂತಮೂರ್ತಿ ಅವರಿಗೆ, ಸಮಾಜ ಸೇವೆಗಾಗಿ ಸುದರ್ಶನ್ ಅವರಿಗೆ ನೊಬೆಲ್ ಬಹುಮಾನ ಬರಲಿದೆ, ನಾಮಕರಣಗೊಂಡಿದ್ದಾರೆ ಎಂಬ ವದಂತಿಗಳನ್ನು ಬಿಟ್ಟರೆ; ಕನ್ನಡ, ಕರ್ನಾಟಕ, ಕನ್ನಡಿಗ, ವಿಶ್ವಮಟ್ಟದಲ್ಲಿ ಸಾಧಿಸಿದ ಘನ ಸಾಧನೆಯಾದರು ಏನು?

'ಮರಳಿ ಮಣ್ಣಿಗೆ' ಕಾದಂಬರಿ ಬರೆಯುವ ಕಾಲಕ್ಕೆ, ಬರೆದಾದ ಮೇಲೆ ಶಿವರಾಮಕಾರಂತರು ಪರ್ಲ್‌ಬಕ್ ಅವರ 'ಗುಡ್‌ಅರ್ತ್' ಓದಿದ್ದಿರಬಹುದು. ಆದರೆ ಬಿಜಾಪುರದ ಪ್ರೊಫೆಸರ್ ಒಬ್ಬರು, ಇದು ಅನುವಾದ ಇರಬೇಕು ಎಂಬ ಅನುಮಾನಗೊಂಡಾಗ, ಎ.ಎನ್. ಮೂರ್ತಿರಾಯರಿಂದ ಅನುವಾದಿಸಿ, ಲಂಡನ್ನಿನ ಪ್ರಕಾಶಕರಿಗು ಸ್ವತಃ ಪರ್ಲ್‌ಬಕ್ ಅವರಿಗು ಕಾರಂತರು ಕಳಿಸಿಕೊಟ್ಟರು. ಆ ಪ್ರಕಾಶನ ಸಂಸ್ಥೆಯವರು ಇದರಲ್ಲಿ "ಹೈಲೈಟ್ಸ್ ಯಾವುದೂ ಇಲ್ಲ" ಎಂದರೆ, ಬಕ್ ಅವರು "ಯೂನಿವರ್ಸಲ್ ಅಪ್ಪೀಲ್ ಕಾಣಿಸುವುದಿಲ್ಲವಲ್ಲ" ಎಂದರಂತೆ.

ವಿಶ್ವವನ್ನೆಲ್ಲ ಕನ್ನಡದಲ್ಲಿ ತಂದುಕೊಳ್ಳುವ, ಕನ್ನಡವನ್ನೇ ವಿಶ್ವಕ್ಕೆ ಮುಖಾಮುಖಿಯಾಗಿಸುವ ಪ್ರಯತ್ನದಲ್ಲಿ, ಶಿವರಾಮಕಾರಂತರ ಸ್ಥಿತಿಗಿಂತ ನಾವು ಮುಂದೆ ಹೆಜ್ಜೆ ಇಡಲಾದೀತೆ? ೧೯೫೦ರ ಸ್ವಾತಂತ್ರ್ಯದ ದಿನ, ಇಟಲಿಯ ಇಗ್ನೇಜಿಯೊಸಿಲೋನೆ ಅವರ "ಫಂಟಮಾರಾ" ಕಾದಂಬರಿ ಅನುವಾದಿಸಿ ಕು.ಶಿ. ಹರಿದಾಸಭಟ್ಟರು ಮಾಡಿಕೊಂಡ 'ಅರಿಕೆ' ಇವತ್ತಿಗೂ ಈಡೇರಿದೆ ಅನ್ನಿಸುತ್ತಿದೆಯೆ?

"ಕಾರಂತ, ಅನಕೃ ಅವರ ಕಾದಂಬರಿಗಳೇ ಕನ್ನಡದ ಪರಮಾವಧಿಯಾಗಲಾರವು, ಅವೇ ನಮ್ಮ ಮಾನ(Standard)ವಾಗಿ ಬಹುಕಾಲ ಉಳಿಯಲಾರವು, ಉಳಿಯಬಾರದು. ವಿದ್ಯುತ್ತಿನ ಯುಗದಲ್ಲಿಯೂ ಎತ್ತಿನಗಾಡಿಯಂತೆ ನಡೆದ ನಮ್ಮ ವಾಙ್ಮಯ ಈ ಪರಮಾಣುಯುಗದಲ್ಲಾದರೂ ಕ್ಷಿಪ್ರಗತಿಯಿಂದ ಸಾಗೀತೇನೋ? ಎಂಬ ಶಂಕೆ ಉದಿಸುವಂತೆ ವಿಶ್ವಸಾಹಿತ್ಯದ ಇಂಥ ಕೃತಿರತ್ನಗಳು ನೆರವಾಗಲಿ – ಎಂಬಲ್ಲಿಯವರೆಗೆ ಸ್ಫೂರ್ತಿರಹಿತವಾದ ನನ್ನ ಕ್ಷಣಿಕ ಯೋಚನಾಲಹರಿ ಒಮ್ಮೊಮ್ಮೆ ಮುಂದುವರಿಯುವುದುಂಟು."

ಸಾಹಿತ್ಯ, ಅಭಿನಯದಲ್ಲಿ ಸುಧಾಮೂರ್ತಿಯವರೇ ನಮ್ಮ ನಾಡಿನ ಪ್ರತಿಭಾ ಪ್ರದರ್ಶನವಾದಂತೆ, ವಿಶ್ವದ ಮುಂದೆ ಎನ್.ಆರ್. ನಾರಾಯಣಮೂರ್ತಿಯವರ ಐಟಿಬಿಟಿ ಸಾಧನೆಯೇ ಶಿಕ್ಷಣ–ಅಭಿವೃದ್ಧಿ–ಉದ್ಯೋಗ ನಿರ್ಮಾಣ–ಬಡತನ ನಿವಾರಣೆಯ ಶಾಂತಿ ಸಂಕೇತವಾಗಿ ನೊಬೆಲ್ ಬಹುಮಾನ ಘೋಷಣೆಗೊಂಡು, ಇಡೀ ದೇಶ–ರಾಜ್ಯ ದಿಕ್ಕುಗೆಡುವ ಪರಿಸ್ಥಿತಿಯನ್ನು ಆಳುವ ನಮ್ಮ ಪ್ರಭುತ್ವ ತಂದುಕೊಳ್ಳುವ ಹುನ್ನಾರದಲ್ಲಿದೆಯೋ ಎಂಬ ಅನುಮಾನ ನನ್ನದಾಗಿದೆ. ನೆಲ್ಸನ್ ಮಂಡೇಲ ಅವರಿಗೆ ಬಸವಶ್ರೀ ಪ್ರಶಸ್ತಿ ಕೊಡುವುದು, ನಾರಾಯಣಮೂರ್ತಿ ಅವರಿಗೆ ನೊಬೆಲ್ ಬರುವುದು ಯಾವುದು ದೊಡ್ಡದು ಎಂಬುದನ್ನು ಎಂ.ಪಿ. ಪ್ರಕಾಶ್ ಅಂತಹ ಬುದ್ಧಿಜೀವಿ ರಾಜಕಾರಣಿಗಳು ಒಂದು ಕ್ಷಣ ಯೋಚಿಸಬೇಕು.

ಒಮ್ಮೆ (೧೯೬೬ರಲ್ಲಿ) ಪತಿದೇವ ಸದಾಶಿವಂ ಅವರ, ಅವರ ಹಿಂದೆ ಚತುರ ರಾಜಕಾರಣಿ ಚಕ್ರವರ್ತಿ ರಾಜಗೋಪಾಲಾಚಾರಿ, ಜನರಲ್ ಕಾರಿಯಪ್ಪ ಅವರ ಹುನ್ನಾರದಿಂದ ಎಂ.ಎಸ್. ಸುಬ್ಬುಲಕ್ಷ್ಮಿ ಅವರು ವಿಶ್ವಸಂಸ್ಥೆಯ ಕಾರ್ಯಕ್ರಮದಲ್ಲಿ ಎದ್ದು ನಿಂತು ಇಂಗ್ಲಿಷ್‌ನಲ್ಲಿ

ಹಾಡಿದರು. ಎಂ.ಎಸ್. ಇರಲಿ, ಭಾರತೀಯರು, ಕರ್ನಾಟಕ ಸಂಗೀತಪ್ರಿಯರು ಸಂಗೀತ ಸಾಮ್ರಾಜ್ಞಿಯ ಈ ಹೆಜ್ಜೆಯಿಂದ ನಾಚಿ, ನೀರಾಗುವಂತಾಯಿತು.

ಹೀಗೆ ವಿಶ್ವಮುಖಿಯಾದಾಗ, ಉಂಟಾಗುವ, ಆಭಾಸಗಳು ಒಂದೆರಡಲ್ಲ. ಭೂಗರ್ಭಶಾಸ್ತ್ರಜ್ಞ, ನಾಟಕಕಾರ, ಕೈಲಾಸಂ ಅವರು ವಿಶ್ವವನ್ನು ಕರ್ನಾಟಕವನ್ನು ಬಲ್ಲವರು. ಆದರೂ ಕನ್ನಡದ ಶಕ್ತಿಶಾಲಿ ಬರಹಗಾರ ಲಂಕೇಶ್ ಅವರು ಎತ್ತುವ ಪ್ರಶ್ನೆ, ಕೈಲಾಸಂ ಇರಲಿ ಲಂಕೇಶ್ ಅವರನ್ನೂ ಒಳಗೊಂಡು ನಮಗೆ ಎಷ್ಟು ಪ್ರಸ್ತುತ ಎಂಬುದು ಇಲ್ಲಿ ಮುಖ್ಯ :

"ಕೈಲಾಸಂ ಅವರಿಗೆ ಗೌರವ ತೋರುವುದಕ್ಕಾಗಿಯೇ, ನಾವು ಮೂಲಭೂತ ಪ್ರಶ್ನೆಯೊಂದನ್ನು ಕೇಳಿಕೊಳ್ಳಬೇಕು : ಕೈಲಾಸಂ ಇಷ್ಟೆಲ್ಲ ಬರೆದಿದ್ದಾರೆ. ಅವರ ದೃಶ್ಯಗಳು, ವಿಚಾರಗಳು, ಜೋಕುಗಳು ನಮ್ಮ ಮನಸ್ಸು ಸೆರೆ ಹಿಡಿದಿವೆ – ಸರಿ; ಆದರೆ ಇದೇ ಕೈಲಾಸಂ ಅವರನ್ನು ಜಗತ್ತಿನ ಅತ್ಯುತ್ತಮ ನಾಟಕಕಾರರೊಂದಿಗೆ ಹೋಲಿಸಿದಾಗ, ಒಬ್ಬ ಷೇಕ್ಸ್‌ಪಿಯರ್, ಒಬ್ಬ ಮೋಲಿಯಾರ್, ಒಬ್ಬ ಸಾಫೋಕ್ಲಿಸ್ ಜೊತೆಗೆ ಅವರನ್ನು ಇಟ್ಟಾಗ ಕೈಲಾಸಂ ಅವರಿಗೆ ನಾವು ಅನ್ಯಾಯಮಾಡಿದಂತಾಗುತ್ತದೆ. ಬೆಂಗಳೂರಿನ, ಬಸವನಗುಡಿಯ, ಕರ್ನಾಟಕ ಏಕಮೇವಾದ್ವಿತೀಯ ಕೈಲಾಸಂ ಎಂದು ಹೆಮ್ಮೆ ಪಟ್ಟು ಕೊಳ್ಳುವ ಅಗತ್ಯವಿಲ್ಲ; ಹಾಗೆ ಅಂದುಕೊಳ್ಳುವ ಹೆಮ್ಮೆಗೆ ಕಿಮ್ಮತ್ತಿಲ್ಲ. ಯಾಕೆಂದರೆ ಕನ್ನಡ ಜನರೊಂದಿಗೆ ಅಡ್ಡಾಡಿ, ಬದುಕಿ ಕನ್ನಡ ಮಾತಿನಿಂದ ಅಪೂರ್ವ ಅರ್ಥ ಹೊರಡಿಸಿ ಜಗತ್ತಿನ ಅತ್ಯುತ್ತಮ ಕೃತಿಕಾರರೊಂದಿಗೆ ನಿಲ್ಲಬಲ್ಲ ಲೇಖಕನನ್ನು ಕಂಡು ನನ್ನಷ್ಟು ಹೆಮ್ಮೆಪಡುವಾತ ಇನ್ನೊಬ್ಬನಿರಲಾರ. ಅಷ್ಟೇ ಮುಖ್ಯವೆಂದರೆ ಸುಳ್ಳು ಹೇಳಿಕೊಂಡು ಹಿಗ್ಗುವ ಜನರ ಬಗ್ಗೆ ಅಸಹ್ಯ ನನಗೆ. ಈಗ ನನ್ನ ಪ್ರಶ್ನೆಯನ್ನು ಕೆಣಕುವ : ಕವಿ ಏಟ್ಸ್ ಒಂದು ಕಡೆ ನಾವು ಬದುಕಿನ ಪರಿಪೂರ್ಣತೆಗಾಗಿ ಅಥವಾ ಕಲೆಯ ಪರಿಪೂರ್ಣತೆಗಾಗಿ ಪ್ರಯತ್ನಿಸುವುದು ಸಾಧ್ಯ. ಎರಡೂ ಸಾಧ್ಯವಾಗುವುದಿಲ್ಲವೇನೋ – ಅಂದ."

ಈ ಎಲ್ಲದರ ಅರ್ಥ ಇಷ್ಟೆ : ಶತಮಾನಗಳಿಂದ ನಾವು ಜಗದ್ಗುರುಗಳನ್ನು ಸೃಷ್ಟಿಸುತ್ತಿದ್ದೇವೆ. ಯಾವ ಜಗತ್ತು – ಯಾವ ಗುರು ಎಂದು ಎಂದೂ ಅವರೂ ಕಂಡುಕೊಂಡಿಲ್ಲ ನಾವು ಕೇಳಿಲ್ಲ. ಹಾಗೆಯೇ ಇತ್ತೀಚೆಗೆ ಅಂಗಡಿಗಳಲ್ಲಿ, ಮನೆಗಳಲ್ಲಿ, ಬೀದಿಗಲ್ಲಿಗಳಲ್ಲಿ ಪುಸ್ತಕ ಬಿಡುಗಡೆ ಸಮಾರಂಭದ 'ಲೋಕಾರ್ಪಣೆ" ಪ್ರಾರಂಭಿಸಿದ್ದೇವೆ. ಯಾವ ಲೋಕ, ಯಾರ ಲೋಕ ಎಂದು ಯಾರೂ ಪ್ರಶ್ನಿಸಿಲ್ಲ.

ಇಂತಹ ಕನ್ನಡ, ಕರ್ನಾಟಕ, ಕನ್ನಡಿಗರ ಮಧ್ಯೆ ಧೂಮಕೇತುವಿನಂತೆ ಹೆಚ್.ಡಿ. ಕುಮಾರಸ್ವಾಮಿ, ಯಡಿಯೂರಪ್ಪ ಸರ್ಕಾರ ಮೇಲುನೋಟಕ್ಕೆ ವಿಠಲಮೂರ್ತಿ, ಶ್ರೀನಿವಾಸ ಜಿ. ಕಪ್ಪಣ್ಣ ಒಳನೋಟಕ್ಕೆ ಅದ್ವಿತೀಯ ವಿಶ್ವಕನ್ನಡ ಸಮ್ಮೇಳನ ಕೈಗೊಳ್ಳುತ್ತಿದ್ದಾರೆ. ಇವರೆಲ್ಲರಿಗೂ ಊಟತಿಂಡಿ, ನಾಟಕ ಕುಣಿತ, ತಾರೆಯರು ತಂದಾನಗಳು ಬಿಟ್ಟು ವಿಶ್ವದ ಯಾವ ಕಾಲದೊಂದಿಗೆ ಯಾರೊಂದಿಗೆ ಯಾವ ಕ್ಷೇತ್ರದೊಂದಿಗೆ-ಕನ್ನಡಿಗರು ಮುಖಾಮುಖಿಯಾಗಿಸಲು ಸಾಧ್ಯ ಎಂಬುದನ್ನು ಆಲೋಚಿಸ ಬೇಕಾಗಿದೆ.

೩ನೇ ಸಮ್ಮೇಳನದ ಹೊತ್ತಿಗೆ ನನ್ನಂತಹವರು ಬದುಕಿರುತ್ತೇವೆಯೋ ಇಲ್ಲವೊ, ಆ ಸಮ್ಮೇಳನದ ಹೊತ್ತಿಗಾದರೂ ವಿಶ್ವದ ರಣರಂಗದ ಮಧ್ಯೆ, ಕರ್ನಾಟಕ ತನ್ನ ರಥವನ್ನು ನಿಲ್ಲಿಸಿ, ತನ್ನ ಶಕ್ತಿ ಸಾಮರ್ಥ್ಯ ಯೋಗ್ಯತೆಗಳನ್ನು ಧ್ಯಾನಿಸುವಂತಾಗಲಿ. ಆ ದಿಕ್ಕಿನಲ್ಲಿ ನಮ್ಮೆಲ್ಲರ ಪ್ರಯತ್ನ, ತಮ್ಮ ತಮ್ಮ ಕ್ಷೇತ್ರಕಾರ್ಯಗಳಲ್ಲಿ ಸಕ್ರಿಯವಾಗಿ, ಜೀವಂತವಾಗಿ, ಅರ್ಥಪೂರ್ಣವಾಗಿ ತೊಡಗಿಸಿ ಕೊಳ್ಳುವಂತಾಗಲಿ. □

ಮಕ್ಕಳ ರಾಷ್ಟ್ರಗೀತೆ: ನಮ್ಮ ಕನಸು

ಶಂ.ಗು. ಬಿರಾದಾರ

ಕೆಲವು ವರ್ಷಗಳ ಹಿಂದೆ ಆಂಧ್ರಪ್ರದೇಶಕ್ಕೆ ಹೋಗಿದ್ದಾಗ, ಆಕಾಶವಾಣಿಯಲ್ಲಿ "ಪಿಲ್ಲಲ್ಲಾರ ಪಾಪಲ್ಲಾರ ಭಾವೀ ಭಾರತ ಪೌರುಲ್ಲಾರ" ಎಂಬ ಕವಿತೆ ಕಿವಿಗೆ ತೂರಿತು. ಸುಮಾರು ೪೦-೫೦ ವರ್ಷಗಳ ಹಿಂದೆ ಶಾಲೆಯಲ್ಲಿ ಓದಿದ್ದ ಕನ್ನಡ ಕವಿತೆಯ ಸಾಲುಗಳು ಅಸ್ಪಷ್ಟವಾಗಿ ಉಕ್ಕಿಬಂದವು. ಯಾರಾದರೂ ಕನ್ನಡದಿಂದ ಅನುವಾದಿಸಿದ್ದೇ, ಪ್ರೇರಣೆ ಪಡೆದದ್ದೇ ಅನ್ನಿಸಿತು. ಕವಿಯ ಹೆಸರು ಇವರೇ ಎಂದು ನೆನಪಾಗಲಿಲ್ಲ.

'ಪುಸ್ತಕಮನೆ'ಗೆ ಬಂದ ಕೂಡಲೇ ಬೊಳುವಾರು ಮಹಮದ್ ಕುಂಞ ಅವರ "ತಟ್ಟು ಚಪ್ಪಾಳೆ ಪುಟ್ಟ ಮಗು" ಸಂಕಲನವನ್ನು ಕಣ್ಣಾಡಿಸಿದೆ. ಕಾಣಲಿಲ್ಲ. ಬೊಳುವಾರರನ್ನೇ ಒಮ್ಮೆ ಕಂಡು, ಬರುವಷ್ಟೇ ಸಾಲುಗಳನ್ನು ಹಾಡಿ ತೋರಿಸಿದೆ. ನನಗೂ ಸಿಗಲಿಲ್ಲ ಎಂದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯವರ, ಶತಮಾನದ ಮಕ್ಕಳ ಸಾಹಿತ್ಯದಲ್ಲಾದರೂ ಕಂಡೀತೆ ಎಂದು ಬಗೆದೆ. ನೋವು ರೋಗವಾಯಿತು. ಸಿಕ್ಕ ಸಿಕ್ಕವರನ್ನು ಕೇಳಿದೆ, ಕಾಡಿದೆ. ಇತ್ತೀಚೆಗೆ ದೂರವಾಣಿಯಲ್ಲಿ ಆತ್ಮೀಯ ಈಶ್ವರ ಕಮ್ಮಾರರನ್ನು "ಇದು ಯಾರದು, ಇದು ಯಾರದು" ಎಂದು ಕೋರಿದೆ. "ನಮ್ ಬಿರಾದಾರ ಅವರದ್ರೀ" ಅಂದರು. ಬಾಯಾರಿಕೆಗೆ ಬೆಲ್ಲ ಸಿಕ್ಕಿತು. "ಯಾವ ಬಿರಾದಾರ ಸ್ವಾಮಿ" ಎಂದೆ. "ಶಂಗು" ಅಂದರು. "ಇದ್ದಾರಾ, ಆ ಕವಿತೆ ಸಿಕ್ಕೀತಾ" ಎಂದೆ, ಅನುಮಾನದಲ್ಲಿ. ಓ ಎಂದು, ತಿಂಗಳುಗಳು ಕಳೆದ ಮೇಲಾದರೂ ಕವಿ, ಕವಿತೆ ಎಲ್ಲವನ್ನು ದೊರಕಿಸಿಕೊಟ್ಟರು.

ವ್ಯತ್ಯಾಸ ಇಷ್ಟೇ! "ಪಿಲ್ಲಲ್ಲಾರ ಪಾಪಲ್ಲಾರ" ಬರೆದ ಕವಿ ದಾಶರಥಿ, ಆಂಧ್ರಪ್ರದೇಶದ ರಾಷ್ಟ್ರಕವಿ. "ನಾವು ಎಳೆಯರು" ಬರೆದ ಕವಿ ಶಂ.ಗು. ಬಿರಾದಾರರು ಕರ್ನಾಟಕದ ಪಾಲಿಗೆ ಅನಾಮಧೇಯರಾದರೆ? ಕರ್ನಾಟಕ, ಆಂಧ್ರಪ್ರದೇಶ ಮಾತ್ರವೇ ಅಲ್ಲ, ಭಾರತದ ಯಾವ ಮೂಲೆಯಲ್ಲೂ ಮಕ್ಕಳು ಅನುದಿನವೂ ಹಾಡಬಹುದಾದ, ಹಾಡಬೇಕಾದ ಮಕ್ಕಳ ರಾಷ್ಟ್ರಗೀತೆ ಇದಲ್ಲವೇ? *ಸಂಪಾದಕ*

ನಾವು ಎಳೆಯರು ನಾವು ಗೆಳೆಯರು
ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು
ನಮ್ಮ ಕನಸದೊ ಸುಂದರ

ಹಿಂದು ಮುಸ್ಲಿಂ ಕ್ರೈಸ್ತರೆಲ್ಲರಿ
ಗೊಂದೆ ಭಾರತ ಮಂದಿರ
ಶಾಂತಿದಾತನು ಗಾಂಧಿತಾತನು
ಎದೆಯ ಬಾನಿನ ಚಂದಿರ

ಜಾತಿ ರೋಗದ ಭೀತಿ ಕಳೆಯುತ
ನೀತಿ ಮಾರ್ಗದಿ ನಡೆವೆವು
ಒಂದೆ ಮಾನವ ಕುಲವು ಎನ್ನುತ
ವಿಶ್ವ ಧರ್ಮವ ಪಡೆವೆವು

ವೈರ ಮತ್ಸರ ಸ್ವಾರ್ಥವಂಚನೆ
ಕ್ರಿಮಿಗಳೆಲ್ಲವ ತೊಡೆವೆವು
ದೇಶ ಸೇವೆಗೆ ದೇಹ ಸವೆಸುವ
ದೀಕ್ಷೆ ಇಂದೇ ತೊಡುವೆವು

ನಮ್ಮ ಸುತ್ತಲು ಹೆಣೆದುಕೊಳ್ಳಲಿ
ಸ್ನೇಹಪಾಸದ ಬಂಧನ
ಬೆಳಕು ಬೀರಲಿ ಗಂಧ ಹರಡಲಿ
ಉರಿದು ಪ್ರೇಮದ ಚಂದನ

ನಮ್ಮ ಶಕ್ತಿಗೆ ದಿವ್ಯಭಕ್ತಿಗೆ
ದೇಶವಾಗಲಿ ನಂದನ
ಅಂದು ಪ್ರೇಮದಿ ಎತ್ತಿಕೊಳ್ಳಲಿ
ಭೂಮಿ ತನ್ನಯ ಕಂದನ

ಶ್ರೀ ಹರಿಹರಪ್ರಿಯ ಅವರಿಗೆ ವಂದನೆಗಳು

ಸಹೃದಯರೆ,

ನೀವು ಶ್ರೀ ಈಶ್ವರ ಕಮ್ಮಾರ ಅವರಿಗೆ ತಿಳಿಸಿದ ಮೇರೆಗೆ ಅವರು ನನಗೆ ಕಾಗದ ಬರೆದು ನನ್ನ 'ನಮ್ಮ ಕನಸು' (ನಾವು ಎಳೆಯರು ನಾವು ಗೆಳೆಯರು) ಕವಿತೆಯನ್ನು ತಮಗೆ ಕೂಡಲೇ ಕಳಿಸುವಂತೆ ಸೂಚಿಸಿದರು. ಅದಕ್ಕಾಗಿ 'ನಮ್ಮ ಕನಸು' ಕವಿತೆಯ ಪ್ರತಿಯೊಂದನ್ನು ಇದರ ಜೊತೆಗಿಟ್ಟು ಕಳುಹಿರುವೆ. ಈ ಕವಿತೆ ಈಗ ೫ನೆಯ ವರ್ಗದ ಪಠ್ಯಪುಸ್ತಕದಲ್ಲಿದೆ. ಈ ಕವಿತೆ ತಮಗೆ ಏಕೆ ಬೇಕು? ತಿಳಿಯಲಿಲ್ಲ.

೧೯೫೯-೬೦ನೆಯ ಸಾಲಿನಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸಂಯುಕ್ತ ಆಶ್ರಯದಲ್ಲಿ 'ಮಕ್ಕಳ ಸಾಹಿತ್ಯ ರಚನಾಲಯ' ಆರುವಾರಗಳ ಕಾಲ ಏರ್ಪಡಿಸಿದ್ದರು. ನನ್ನ ಜೊತೆಗೆ 'ಸಿಸು', ಮಿರ್ಜಿ ಅಣ್ಣಾರಾಯ, ಭಾರತೀಸುತ, ಪಂಚಾಕ್ಷರಿ ಹಿರೇಮಠ ಮೊದಲಾದ ಸಾಹಿತಿಗಳು ಇದ್ದರು. ಶ್ರೀ ಎನ್.ಆರ್. ಹಿರೇಮಠ, ಶ್ರೀ ರಾಮಯ್ಯ(?) ಅವರುಗಳು ಕಮ್ಮಟದ ನಿರ್ದೇಶಕರಾಗಿದ್ದರು. ಈ ರಚನಾಲಯದಿಂದ ಮಕ್ಕಳ ಸಾಹಿತ್ಯದ ಬಗೆಗೆ ಚೆನ್ನಾಗಿ ಅರಿವು ಮೂಡಿತು.

ರಚನಾಲಯದಿಂದ ಮರಳಿ ಬಂದಮೇಲೆ – ನನಗೆ ಶ್ರೀ ಎನ್.ಆರ್. ಹಿರೇಮಠ ಅವರಿಂದ (ಪಠ್ಯ ಪುಸ್ತಕ ನಿರ್ದೇಶನಾಲಯ) ಕಾಗದ ಬಂತು. ನೀವು ಐದನೆಯ ವರ್ಗಕ್ಕೆ ಯೋಗ್ಯವಾದ ಭಾವೈಕ್ಯತೆಯ ಕವಿತೆಯೊಂದನ್ನು ಬರೆದು ಕೂಡಲೇ ಕಳಿಸಬೇಕೆಂದು ತಿಳಿಸಿದ್ದರು. ಆಮೇರೆಗೆ 'ನಮ್ಮ ಕನಸು' (ನಾವು ಎಳೆಯರು) ಕವಿತೆ ಬರೆದು ಕಳಿಸಿದೆ. ಅಂದಿನ ಪಠ್ಯಪುಸ್ತಕದಲ್ಲಿ ಪ್ರಕಟವಾದ ಕವಿತೆ – ಈಗ ಕೂಡ ೫ನೆಯ ವರ್ಗದ ಪಠ್ಯಪುಸ್ತಕದಲ್ಲಿದೆ. ಮಹಾರಾಷ್ಟ್ರ ರಾಜ್ಯದ ಪಠ್ಯಪುಸ್ತಕ, ಕೇಂದ್ರೀಯ ವಿದ್ಯಾಲಯದ ಪುಸ್ತಕಗಳಲ್ಲಿ, ಆಕಾಶವಾಣಿ, ದೂರದರ್ಶನಗಳಲ್ಲಿ ಪ್ರಸಾರವಾಗಿದೆ. ತಂದೆ ಕಲಿತ ಈ ಕವಿತೆಯನ್ನೇ ಮಕ್ಕಳೂ ಕಲಿಯುತ್ತಿದ್ದಾರೆಂದು ಹಲವರಿಂದ ಕಾಗದಗಳು ಬಂದಿವೆ. ಇದಿಷ್ಟು ಸಂಕ್ಷಿಪ್ತ ಹಿನ್ನೆಲೆ.

ನನಗೀಗ ೮೧ ವರ್ಷ. ಅನಾರೋಗ್ಯ ಬೇರೆ. ಹೀಗಾಗಿ ಬರೆಯುವುದು ತೊಂದರೆಯಾಗಿದೆ ಯಾದರೂ ಕಾರ್ಯಕ್ರಮಕ್ಕಾಗಿ – ಲೇಖನಗಳಿಗಾಗಿ ಒತ್ತಡ ಬರುತ್ತಲೇ ಇವೆ. ಬಹಳ ದಿನಗಳ ಹಿಂದೆ ನೀವು ವಿಜಾಪುರಕ್ಕೆ ಬಂದಾಗ ಭೆಟ್ಟಿಯಾಗಿದ್ದಿರಿ. ಈಗ ನೀವು ಆರೋಗ್ಯವಾಗಿದ್ದೀರೆಂದು ಭಾವಿಸಿರುವೆ. ವಿಶೇಷಕ್ಕೆ ಬರೆದು ತಿಳಿಸಬೇಕಾಗಿ ಕೋರಿಕೆ – ವಂದನೆಗಳು.

ತಮ್ಮ ವಿಶ್ವಾಸದ

ಶಂ.ಗು. ಬಿರಾದಾರ

ಮಾನ್ಯ ಹರಿಹರಪ್ರಿಯ ಅವರಿಗೆ ನಮಸ್ಕಾರ,

ತಾವು ಹೊರತರುತ್ತಿರುವ 'ಪ್ರಜಾಸಾಹಿತ್ಯ' ಕನ್ನಡದ ಮಟ್ಟಿಗೆ ಅನನ್ಯವಾದದ್ದು. ಎಲ್ಲೂ ಚರ್ಚಿತವಾಗದ ಸಂಗತಿಗಳಿಗೆ ವೇದಿಕೆ ಒದಗಿಸುತ್ತಿರುವುದು ನನಗೆ ಮೆಚ್ಚುಗೆಯಾಗಿದೆ. ನಾಲ್ಕನೇ ಸಂಚಿಕೆಯಲ್ಲಿ 'ಕರ್ನಾಟಕಕ್ಕೆ ಸುವರ್ಣ, ಭಾರತಕ್ಕೆ ವಜ್ರ ಸಮಸ್ಯೆ' ನನ್ನಂತಹ ಕನ್ನಡ ಕಾರ್ಯಕರ್ತರಿಗೆ ಮಾರ್ಗಸೂಚಿ ಆಗಿದೆ. ಕನ್ನಡದ ಪ್ರಾಚೀನತೆಯನ್ನು 'ಮೃಚ್ಛಕಟಿಕ'ದಲ್ಲಿ ಗುರುತಿಸಿ ಚರ್ಚಿಸಿರುವುದು ಇದೇ ಮೊದಲು. ಕನ್ನಡ ಸಮಸ್ಯೆಗೆ ಭಾವನಾತ್ಮಕ ನೆಲೆಯ ಜೊತೆಗೆ ವೈಚಾರಿಕ ನೆಲೆಯಲ್ಲಿ ನೋಡುವ ಪತ್ರಿಕೆಯ ಮಾರ್ಗ ಅಭಿನಂದನೀಯ.

ರಾ.ನಂ. ಚಂದ್ರಶೇಖರ

ನ್ಯಾಯದಾನದ ವಿಳಂಬಕ್ಕೆ ಪರಿಹಾರ ಏನು

ಕೋ. ಚೆನ್ನಬಸಪ್ಪ

"It is my conviction that Judges who do not pronounce judgements on time commit turpitude. It has be come common these days, for the highest to the lowest courts judges, after the arguments are closed take months and years to pronounce judgments even in inter-locutory matters - a sin which can not be forgiven a practice which must be forbidden, a wrong which calls for ensure or worse...."

Justice Sri V.R. Krishna Iyer, (A living legend P. 138)

ಭಾರತೀಯ ನ್ಯಾಯ ಪರಿಪಾಲನಾ ಪದ್ಧತಿಯ ಸುದ್ದಿಯನ್ನೆತ್ತಿದ ಕೂಡಲೆ ನ್ಯಾಯಕ್ಕಾಗಿ ನ್ಯಾಯಾಲಯಗಳಿಗೆ ಬರುವವರ ಮನದಲ್ಲಿ ಏಳುವ ಭಾವನೆ ನ್ಯಾಯಾಲಯಗಳಲ್ಲಿ ಆಗುವ ಅಸಾಧಾರಣ ವಿಳಂಬ. ನ್ಯಾಯಾಲಯಗಳು ಕೊಡುವ ಪರಿಹಾರ ಎಷ್ಟೇ ಶ್ರೇಷ್ಠವಾಗಿದ್ದರೂ ಈ ವಿಳಂಬ ವ್ಯಾಧಿಯಿಂದಾಗಿ ಪ್ರಜೆಗಳಿಗೆ ಅವುಗಳಿಂದಾಗುವ ಪ್ರಯೋಜನ, ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ಅವುಗಳಿಗಿರುವ ಮಹತ್ವ ಮರೆಯಾಗಿದೆ; ಮರೆತೆ ಹೋಗಿದೆ. ಈ ವಿಳಂಬ ವ್ಯಾಧಿ ಕ್ಯಾನ್ಸರ್ ರೋಗದಂತೆ ವಾಸಿಯಾಗದ ಮರಣಾಂತಿಕ ದುರ್ವಿಧಿ ಎನಿಸಿದೆ.

ಗುಣಪಡಿಸಲಾಗದೆಂಬಂತೆ ಕಾಣುವ ಈ ವ್ಯಾಧಿಗೆ ಪರಿಹಾರವನ್ನು ಇತ್ತೀಚೆಗೆ 'ಲೋಕ ಅದಾಲತ್' ಎಂಬ ರಾಜಿಸಂಧಾನ ಮಾರ್ಗೋಪಾಯವನ್ನು ಜಾರಿಯಲ್ಲಿ ತಂದಿದ್ದಾರೆ. ಅಂಥ ಒಂದು ಬೃಹತ್‌ಲೋಕ ಅದಾಲತ್ ಉದ್ಘಾಟನೆ ಮಾಡಿದ, ಸರ್ವೋಚ್ಚ ನ್ಯಾಯಾಲಯದ ನ್ಯಾಯ ಮೂರ್ತಿ ರುಮಾಪಾಲ್ ಅವರು ಒಂದು ಮಹತ್ವದ ಮಾತು ಹೇಳಿದರು : 'ಈ ಲೋಕ ಅದಾಲತ್ತುಗಳು ನ್ಯಾಯಾಲಯದ ಕರೀಕೋಟು, ಗೌನುಗಳಿಂದ ಮುಕ್ತವಾಗಬೇಕು' ಎಂದರು. ಈ ಮಾತು ಅರ್ಥಗರ್ಭಿತವಾಗಿದೆ. ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಮೂರ್ತಿ ಶ್ರೀ ಸಭರವಾಲಾ ಅವರು ಮೈಸೂರಿನಲ್ಲಿ ಒಂದು ಸಮ್ಮೇಳನದಲ್ಲಿ ಮಾತನಾಡುತ್ತಾ 'ಎಲ್ಲಿಯವರೆಗೆ ನಮ್ಮ ನ್ಯಾಯ ಪರಿಪಾಲನಾ ಪದ್ಧತಿ ಆಂಗ್ಲೋಶಾಕ್ಸನ್ ಮಾದರಿಯನ್ನು ಅನುಸರಿಸುತ್ತದೆಯೊ ಅಲ್ಲಿಯವರೆಗೆ ನಮ್ಮ ನ್ಯಾಯಾಲಯಗಳಲ್ಲಿ ನಮ್ಮ ದೇಶದ ಜನರಿಗೆ ಶೀಘ್ರ ಪರಿಹಾರ ದೊರೆಯುವುದಿಲ್ಲ!' ಇದರ ಅರ್ಥ ಆ್ಯಂಗ್ಲೋಶಾಕ್ಸನ್ ಪದ್ಧತಿ ನಮಗೆ ಒಗ್ಗಿಲ್ಲ.

ಹಾಗಾದರೆ ಬೇರೆ ಪರ್ಯಾಯ ನ್ಯಾಯಪರಿಚಾಲನಾ ಪದ್ಧತಿ ಯಾವುದು? ಗಾಂಧೀಜಿ, ತಿಲಕ್, ಶ್ರೀ ಅರವಿಂದರು ಒಂದು ಶತಮಾನದ ಹಿಂದೆಯೆ ಪ್ರತಿಪಾದಿಸಿದ್ದ ಗ್ರಾಮಮಟ್ಟದಲ್ಲೆ ವಿವಾದಗಳು ಇತ್ಯರ್ಥಪಡಿಸಿಕೊಳ್ಳುವಂಥ ಗ್ರಾಮಪಂಚಾಯ್ತಿ ನ್ಯಾಯ ಕಟ್ಟೆಗಳು ಸ್ಥಾಪನೆ ಆಗಬೇಕು. ಈ ದಿಸೆಯಲ್ಲಿ ಕರ್ನಾಟಕದಲ್ಲಿ ೧೯೮೩ರಷ್ಟು ಹಿಂದೆಯೆ ಜಿಲ್ಲಾ ಪರಿಷತ್ತು ಮಂಡಲ ಪಂಚಾಯ್ತಿ ಕಾಯಿದೆಯಲ್ಲಿ ಗ್ರಾಮನ್ಯಾಯಾಧೀಕರಣ ಸ್ಥಾಪನೆಯ ಏರ್ಪಾಟು ಮಾಡಲಾಗಿತ್ತು. ಆದರೆ-ಅದರಲ್ಲಿ ಲೋಪದೋಷಗಳಿದ್ದದ್ದರಿಂದ ಅದನ್ನು ಜಾರಿಗೊಳಿಸಲಿಲ್ಲ. ಆದರೆ ಇತ್ತೀಚೆಗೆ ಕೇಂದ್ರ ಸರ್ಕಾರವೆ, ಗ್ರಾಮ ಪಂಚಾಯ್ತಿ ಮಟ್ಟದಲ್ಲೇ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸುವ ಮಸೂದೆ

ಯನ್ನು ಮಂಜೂರು ಮಾಡಿದೆ. ಆ ನ್ಯಾಯಾಲಯಗಳಲ್ಲಿ 'ಕರಿಕೋಟು,' 'ಬ್ಯಾಂಡ್ಸ್'ಗಳ ಪಾರುಪತ್ತೆಗೆ ಅವಕಾಶ ಇರುವುದಿಲ್ಲ. ಲಾ ಡಿಗ್ರಿ ಪಡೆದ ಮೇಧಾವಿಗಳೆ ಅಲ್ಲಿ ಅಧಿಪತಿಗಳಲ್ಲ. ನ್ಯಾಯಾನ್ಯಾಯ ಪರಿಜ್ಞಾನವಿರುವ, ಪ್ರಾಮಾಣಿಕ ಹಿರಿಯರು ನ್ಯಾಯದಾನಮಾಡುವ ಏರ್ಪಾಟು ಆ ಕಾಯಿದೆಯಲ್ಲಿದೆ.

ಈ ಪದ್ಧತಿ ನಮ್ಮ ಜನರ ಜಾಯಮಾನಕ್ಕೆ ಅನುಗುಣವಾಗಿದೆ. ದೂರದ ನ್ಯಾಯಾಲಯಗಳಲ್ಲಿ ಪ್ರಮಾಣಮಾಡಿ ಸಲೀಸಾಗಿ ಹೇಳುವ ಸುಳ್ಳನ್ನು ಗ್ರಾಮ ಪಂಚಾಯ್ತಿ ನ್ಯಾಯಮಂಡಲಿಯ ಹಿರಿಯರ ಮುಂದೆ ಹೇಳಿ ದಕ್ಕಿಸಿಕೊಳ್ಳಲಾರರು. ಆ ಸ್ಥಾನದಲ್ಲಿ 'ದೈವಸ್ತರು' ಇರುತ್ತಾರೆ. ಮೇಲಾಗಿ ಆ ಪ್ರಾಮಾಣಿಕ ಹಿರಿಯರು ಕೊಡುವ ತೀರ್ಪಿಗೆ ಜನ ತಲೆಬಾಗುತ್ತಾರೆ. ಈ ತರದ ಪದ್ಧತಿ ಚೈನಾ ಮತ್ತು ಸೋವಿಯತ್ ರಷ್ಯಾದಲ್ಲಿ ಇತ್ತು. ಬ್ರಿಟಿಷರ ಕಾಲದಲ್ಲಿ ಗ್ರಾಮ ಪಂಚಾಯ್ತಿ ನ್ಯಾಯ ಕಾಯಿದೆ ಮದ್ರಾಸ್ ಆಧಿಪತ್ಯದಲ್ಲಿತ್ತು. ಸಣ್ಣಪುಟ್ಟ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವ ಅಧಿಕಾರ ಈ ನ್ಯಾಯಪಂಚಾಯ್ತಿಗೆ ಇತ್ತು. ಈಗ ಮತ್ತೆ ಅಂಥ ವ್ಯವಸ್ಥೆ ಅತ್ಯಗತ್ಯ.

ಹಳ್ಳಿಯ ಮಟ್ಟದಲ್ಲಿ ಗ್ರಾಮ ಪಂಚಾಯ್ತಿ ಕಟ್ಟೆಗಳನ್ನು ಸ್ಥಾಪಿಸಿದ್ದಾದರೆ ನ್ಯಾಯ ವಿತರಣೆ ಶೀಘ್ರವಾಗಿ ಕಡಮೆ ವೆಚ್ಚದಲ್ಲಿ (ಹಾಗೆ ಹೇಳಬೇಕೆಂದರೆ ಏನೇನೂ ವೆಚ್ಚವಿಲ್ಲದೆ) ಆದೀತು. ಈಗ ಆಗಲೆ ಜಾರಿಯಲ್ಲಿರುವ ಲೋಕ ಅದಾಲತ್‌ಗಳನ್ನು ನ್ಯಾಯಾಧೀಶರ ಆಡಳಿತೆಯಿಂದ ಮುಕ್ತ ಗೊಳಿಸಿದರೆ ಗ್ರಾಮ ಪಂಚಾಯ್ತಿ ಕಟ್ಟೆಗಳಂತೆ ಕೆಲಸಮಾಡಲು ಸಾಧ್ಯವಾದೀತು.

ಆದರೆ ಈಗಾಗಲೆ ಅಸ್ತಿತ್ವದಲ್ಲಿರುವ ತಾಲೂಕು, ಜಿಲ್ಲಾ ಮಟ್ಟದಲ್ಲಿ ಭದ್ರವಾಗಿ ಬೇರು ಬಿಟ್ಟಿರುವ ಸಿವಿಲ್‌ಜಡ್ಜ್ ನ್ಯಾಯಾಲಯಗಳನ್ನು ಏನು ಮಾಡಬೇಕು? ರಾಜಧಾನಿಯಲ್ಲಿ ನಾಲ್ಕು-ಆರು ಅಂತಸ್ತುಗಳ ಕೋಟಿಗಟ್ಟಲೆ ಹಣ ವೆಚ್ಚಮಾಡಿ ಕಟ್ಟಿಸಿರುವ ಬಹುಮಹಡಿ ಕೋರ್ಟುಗಳನ್ನು ಹೇಗೆ ಉಪಯೋಗಿಸಿಕೊಳ್ಳಬಹುದು? ಅಷ್ಟೂ ನ್ಯಾಯಾಲಯಗಳನ್ನು – ಸಿವಿಲ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಸಮುಚ್ಚಯಗಳನ್ನು – ಒಂದೇ ಕಡೆ ಕಟ್ಟಿಸುವುದು ಶೀಘ್ರ ನ್ಯಾಯ ವಿತರಣೆಗೆ ಅನುಕೂಲ ಅಲ್ಲವೆಂದು ೧೯೭೦-೭೧ರಲ್ಲಿ ನಾನು ಪ್ರಿನ್ಸಿಪಲ್ ಜಿಲ್ಲಾ ನ್ಯಾಯಾಧೀಶನಾಗಿದ್ದಾಗ ಪ್ರತಿಪಾದಿಸಿದ್ದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಚತುರ್ದಿಕ್ಕಿನಲ್ಲಿ ಪೂರ್ವ-ಪಶ್ಚಿಮ, ಉತ್ತರ ದಕ್ಷಿಣ-ಆಯಾ ಬಡಾವಣೆಗಳಲ್ಲಿ (ಉದಾ: ದಕ್ಷಿಣ ವಲಯದಲ್ಲಿ ಜಯನಗರ, ಜೆ.ಪಿ ನಗರ, ಬಸವನಗುಡಿ ಬಡಾವಣೆಗೆ ಒಂದು ಕಡೆ) ನ್ಯಾಯಾಲಯಗಳನ್ನು ಸ್ಥಾಪಿಸುವ ಸಲಹೆ ಮಾಡಿದ್ದೆ. ಅದು ಕಾರ್ಯಗತವಾಗಲಿಲ್ಲ. ಈಗ ಕಟ್ಟಿರುವ ಮತ್ತು ಕಟ್ಟಿಸುತ್ತಿರುವ ಸ್ಥಳದಲ್ಲೇ ಸಮುಚ್ಚಯ ಕಟ್ಟಿಸಿ ಪಕ್ಷಗಾರರು ಉಸಿರಾಡಲೂ ಸಾಧ್ಯವಾಗದಂಥ ದುಃಸ್ಥಿತಿ ಬಂದೊದಗಿದೆ. ಅಲ್ಲಿ ಕಾರುಗಳನ್ನು ಸ್ಕೂಟರ್‌ಗಳನ್ನು.... ನಿಲ್ಲಿಸಲೂ ತಾವಿಲ್ಲ!!

ಆಗ ೧೯೭೧ರಲ್ಲಿ ಸಂಚಾರೀ ಅಪರಾಧಗಳ ವಿಚಾರಣೆಗಾಗಿ ಒಂದು ಮೊಬೈಲ್(ಸಂಚಾರಿ) ನ್ಯಾಯಾಲಯವನ್ನು ಸ್ಥಾಪಿಸಲಾಗಿತ್ತು. ಆ ನ್ಯಾಯಾಲಯ ಒಂದೊಂದು ದಿನ ಮೂರು ನಾಲ್ಕು ಕಡೆ ಹೋಗಿ ನಿಂತಲ್ಲಿಯೆ ನ್ಯಾಯನಿರ್ಣಯ ಮಾಡಿ ಮುಗಿಸುತ್ತಿತ್ತು. ಪ್ರತಿ ತಿಂಗಳು ಒಂದನೆ ತಾರೀಖು ಆ ಸಂಚಾರಿ ನ್ಯಾಯಾಲಯ ಆ ತಿಂಗಳು ಪ್ರತಿದಿನ ಎಷ್ಟು ಹೊತ್ತಿಗೆ ಎಲ್ಲಿಗೆ ಬರುತ್ತದೆ ಎಂಬುದನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ, ಪೊಲೀಸ್ ಕಮಿಷನರ್‌ಗೆ ಕಳಿಸಲಾಗುತ್ತಿತ್ತು. ಸಂಬಂಧಪಟ್ಟ ಪೊಲೀಸ್ ಅಧಿಕಾರಿ ಆರೋಪಿಗಳನ್ನು ಅಗತ್ಯವಿದ್ದರೆ ಸಾಕ್ಷಿಗಳನ್ನು ಕರೆತರುತ್ತಿದ್ದರು. ಆ ನ್ಯಾಯಾಲಯದ ಉದ್ಘಾಟನೆ ಆ ಮೊಬೈಲ್ ವ್ಯಾನಿನಲ್ಲಿಯೆ ನೆರವೇರಿದ ಸುದ್ದಿ ವ್ಯಾಪಕವಾಗಿ ಪ್ರಚಾರವಾಯಿತು. ಆ ನ್ಯಾಯಾಲಯ ನಾಲ್ಕಾರು ವರ್ಷ ಚೆನ್ನಾಗಿಯೆ ಕೆಲಸ ಮಾಡಿತು. ಅದನ್ನೇಕೆ ಮುಚ್ಚಿದರೊ ತಿಳಿಯದು. ಈಗಲೂ ಅಂಥ ಕನಿಷ್ಠ ನಾಲ್ಕು ಸಂಚಾರಿ ನ್ಯಾಯಾಲಯಗಳನ್ನು

ಸ್ಥಾಪಿಸಬೇಕು. ಅದರಿಂದ ವಿಳಂಬವನ್ನು ತಪ್ಪಿಸಬಹುದು. ಅಂದರೆ ನ್ಯಾಯಪರಿಪಾಲನಾ ಪದ್ಧತಿಯ ವಿಕೇಂದ್ರೀಕರಣ ಆಗಬೇಕು.

ಈ ಮೊಬೈಲ್ ನ್ಯಾಯಾಲಯಗಳನ್ನು ತಾಲೂಕು ಮಟ್ಟದಲ್ಲೂ ಜಾರಿಯಲ್ಲಿ ತರಬಹುದು. ಈಗ ಹೇಗಾದರೂ ಪ್ರತಿ ತಾಲೂಕಿನಲ್ಲೂ ಜೆಎಂಎಫ್‌ಸಿ ನ್ಯಾಯಾಧೀಶರು ಜೂನಿಯರ್ ಡಿವಿಜನ್ ಸಿವಿಲ್ ನ್ಯಾಯಾಧೀಶರು ಇದ್ದಾರೆ. ಅವರು ಪಾಳಿ ಮೇಲೆ ವಾರಕ್ಕೆ ಒಂದೊ ಎರಡೊ ದಿನ ಹೋಬಳಿ ಗ್ರಾಮಗಳಲ್ಲಿ ಬೆಳಗ್ಗೆ ೧೦ರಿಂದ ಸಂಜೆ ೪ರ ವರೆಗೆ ಕೇಸುಗಳ ವಿಚಾರಣೆ ನಡೆಸಬಹುದು. ಸರಳ ಸುಲಭ ಕೇಸುಗಳನ್ನು ಅಲ್ಲಿಯದಲ್ಲೇ ಮುಗಿಸಿ ತೀರ್ಪು ನೀಡಿ ಕೈ ತೊಳೆದುಕೊಂಡು ಬರಬಹುದು. ಪಕ್ಷಗಾರರಿಗೆ ಬೇಕಾದ ತೀರ್ಪಿನ ನಕಲುಗಳನ್ನು ಮರುದಿನ ನ್ಯಾಯಾಲಯಕ್ಕೆ ಬಂದು ರವಾನಿಸಬಹುದು. ಕ್ರಿಮಿನಲ್ ಕೇಸುಗಳಲ್ಲಿ ಸೆರೆಮನೆ ಶಿಕ್ಷೆ ವಿಧಿಸಿದರೆ ಆರೋಪಿಗಳನ್ನು ಕರೆತಂದ ಪೊಲೀಸ್ ವ್ಯಾನಿನಲ್ಲಿಯೆ ಕರೆದೊಯ್ದು ಸಬ್ ಜೈಲು ಅಥವಾ ಕೇಂದ್ರ ಕಾರಾಗೃಹಕ್ಕೆ ಕಳಿಸಬಹುದು. ಈ ವ್ಯವಸ್ಥೆಯನ್ನು ಆಚರಣೆಯಲ್ಲಿ ತರುವುದು ಕಷ್ಟವಾಗದು.

ಈ ಸಂಚಾರಿ ನ್ಯಾಯ ಪರಿಪಾಲನಾ ಪದ್ಧತಿ ತಾಲೂಕು ಮಟ್ಟಕ್ಕೇ ಯಾಕೆ ನಿಲ್ಲಬೇಕು? ಜಿಲ್ಲಾಮಟ್ಟದಲ್ಲೂ ಈ ಪದ್ಧತಿಯನ್ನು ತರಲು ಸಾಧ್ಯ. ಪ್ರಥಮತಃ ಶೆಷನ್ಸ್ ಕೇಸುಗಳನ್ನು ಜಿಲ್ಲಾ ಕೇಂದ್ರದ ಹೊರಗಡೆ ವಿಚಾರಣೆ ಮಾಡಲು ಈಗ ಜಾತಿಯಲ್ಲಿರುವ ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿಯೆ ಅವಕಾಶವಿದೆ. ಕ್ರಿ ಪ್ರೊ. ಕೋಡ್ ಸೆಕ್ಷನ್ ೯(೬)ರ ಪ್ರಕಾರ ಯಾವುದಾದರು ಶೆಷನ್ಸ್ ಕೇಸನ್ನು ಆ ಶೆಷನ್ಸ್ ಡಿವಿಜನ್‌ನಲ್ಲಿ ಪಕ್ಷಗಾರರಿಗೆ ಸಾಕ್ಷಿಗಳ ವಿಚಾರಣೆಗೆ ಅನುಕೂಲವೆಂದು ಕಂಡುಬಂದರೆ ಜಿಲ್ಲಾ ಕೇಂದ್ರದಿಂದ ಹೊರಗಡೆ ವಿಚಾರಣೆ ಮಾಡಬಹುದು. ಅದಕ್ಕೆ ಆರೋಪಿ ಪರ ವಕೀಲರು ಮತ್ತು ಪ್ರಾಸಿಕ್ಯೂಟರ್ ಒಪ್ಪಬೇಕು. ಈಗ ಅಸ್ತಿತ್ವದಲ್ಲಿರುವ ತ್ವರಿತಗತಿ ನ್ಯಾಯಾಲಯಗಳು (Fast Track Courts) ಜಿಲ್ಲಾ ಕೇಂದ್ರದ ಹೊರಗಡೆ ಕುಳಿತು ವಿಚಾರಣೆ ನಡೆಸಿತು ಕಾನೂನಿನ ಯಾವ ಅಡಚಣೆಯೂ ಇಲ್ಲ.

ಈ ತತ್ವವನ್ನು ಕುಟುಂಬ ನ್ಯಾಯಾಲಯಗಳಿಗೂ, ಅಪಘಾತ ಪರಿಹಾರ ನ್ಯಾಯಾಲಯಗಳಿಗೂ ಅನ್ವಯಿಸಬಹುದು. ಆ ಸಂಚಾರಿ ನ್ಯಾಯಾಲಯಗಳಿಗಾಗಿ ಪ್ರತ್ಯೇಕ ಕಟ್ಟಡಗಳ, ಪೀಠೋಪಕರಣಗಳ ಸಿಬ್ಬಂದಿಯ ಅಗತ್ಯವೇನೂ ಬೇಕಾಗಿಲ್ಲ. ಈಗ ಬಹುಮಟ್ಟಿಗೆ ತಾಲೂಕಾ ಮಟ್ಟದಲ್ಲಿ 'ಮಿನಿ ವಿಧಾನ ಸೌಧ'ಗಳಂಥ ಕಟ್ಟಡಗಳು ಕಂಗೊಳಿಸುತ್ತಿವೆ. ಕನಿಷ್ಠ ಪ್ರವಾಸಿ ಮಂದಿರಗಳಂತೂ ಇದ್ದೆ ಇವೆ. ತಿಂಗಳಲ್ಲಿ ಮೂರುನಾಲ್ಕು ದಿನ ಈ ಸಂಚಾರಿ ನ್ಯಾಯಾಲಯಗಳು ಕೆಲಸಮಾಡಲು ಅನುಕೂಲತೆ ಮಾಡಿಕೊಡುವುದು ಕಷ್ಟವಲ್ಲ. ಇದು ನನ್ನ ಸ್ವಾನುಭವ. ಬಳ್ಳಾರಿಯಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದಾಗ ಹರಪನಹಳ್ಳಿಯಲ್ಲಿ ಶೆಷನ್ಸ್ ಕೇಸು ನಡೆಸಲಾಗಿತ್ತು. ವಾಣಿಜ್ಯ ತೆರಿಗೆ ಮೇಲ್ಮನವಿ ಮಂಡಲಿ (Sales Tax Appellate Tribunal) ಅಧ್ಯಕ್ಷನಾಗಿದ್ದಾಗ ಬಳ್ಳಾರಿ, ಕೊಪ್ಪಳ, ಧಾರವಾಡ, ಬೆಳಗಾಂವಿ, ಶಿರ್ಶಿ, ಉಡುಪಿ, ಮಂಗಳೂರು, ಮಡಿಕೇರಿ, ಮೈಸೂರುಗಳಲ್ಲಿ ಅಪೀಲುಗಳ ವಿಚಾರಣೆ ನಡೆಸಿ ಅಪೀಲುಗಳು ಆರುತಿಂಗಳಲ್ಲಿ ಹೆಚ್ಚೆಂದರೆ ಒಂದು ವರ್ಷದಲ್ಲೆ ಇತ್ಯರ್ಥಪಡಿಸಲಾಗಿತ್ತು. ಈ ಸಂಚಾರೀ ನ್ಯಾಯ ಪರಿಪಾಲನಾ ಪದ್ಧತಿಯಲ್ಲಿ ಒಂದು ಪ್ರಮುಖ ಪ್ರಯೋಜನ ಮತ್ತು ಅನುಕೂಲತೆ – ಆ 'ಕ್ಯಾಂಪ್ ಕೋರ್ಟ್'ನಲ್ಲಿ ವಾಯಿದಾ ಕೇಳುವ ಸಂಭವವೇ ಇಲ್ಲ. ಒಂದು ತಿಂಗಳು ಮುಂಚಿತವಾಗಿ ವಿಚಾರಣೆಯ ದಿನಾಂಕವನ್ನು ಪಕ್ಷಗಾರರಿಗೆ ತಿಳಿಸಿದ್ದರಿಂದ ಬೆಂಗಳೂರಿನಿಂದ ಧಾರವಾಡಕ್ಕೊ ಗುಲ್ಬರ್ಗಾಕ್ಕೊ ಮೂವರು ನ್ಯಾಯಮಂಡಲದ ಸದಸ್ಯರು, ಸಿಬ್ಬಂದಿ, ರಾಜ್ಯದ ಪ್ರತಿನಿಧಿ ಹೋಗಿದ್ದಾಗ ವಾಯಿದಾ ಕೇಳಲು ನ್ಯಾಯವಾದಿಗಳಿಗೆ ಬಾಯಿ

ಬರುತ್ತಿರಲಿಲ್ಲ. ಅನಿವಾರ್ಯ ಕಾರಣಗಳು - ಉದಾ: ಪಕ್ಷಗಾರನ ಮರಣ, ನ್ಯಾಯವಾದಿಯ ಅನಾರೋಗ್ಯ ಮಕ್ಕಳ ಮದುವೆ ಇ.... - ಇದ್ದಾಗ ಮಾತ್ರ ವಾಯಿದಾ ಹಾಕಲೇಬೇಕಾಗಿತ್ತು.

ಈಗ ಹುಬ್ಬಳ್ಳಿ-ಧಾರವಾಡ ಮತ್ತು ಗುಲ್ಬರ್ಗಾದಲ್ಲಿ ಉಚ್ಚನ್ಯಾಯಾಲಯದ ಸರ್ಕಿಟ್ ಪೀಠ (ಸರ್ಕಿಟ್ ಎಂದರೆ ಸಂಚಾರಿ ಎಂದೇ ಅರ್ಥ) ಸ್ಥಾಪನೆಯನ್ನು ಉಚ್ಚನ್ಯಾಯಾಲಯವು ಒಪ್ಪಿರುವು ದರಿಂದ ಪ್ರಯೋಗಾರ್ಥವಾಗಿ ಆದರೂ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳು ಒಂದೆರಡು ವಾರಗಳವರೆಗಾದರೂ ಜಟಿಲವಲ್ಲದ ಬಹುಮಟ್ಟಿಗೆ ಹೆಚ್ಚು ಕಠಿಣ ನ್ಯಾಯಪಿವಾದಗಳಿಲ್ಲದ ಅಪೀಲು ಗಳನ್ನು ರಿಟ್ ಅರ್ಜಿಗಳನ್ನು ಸರ್ಕಿಟ್ ಪೀಠಗಳಲ್ಲಿ ವಿಚಾರಣೆ ಮಾಡಿ ನಿಖಾಲೆ ಮಾಡಬಹುದು. ದೊಡ್ಡ ಕಟ್ಟಡ, ಹವಾನಿಯಂತ್ರಣ, ಉತ್ಕೃಷ್ಟ ಪುಸ್ತಕಭಂಡಾರದ ಏರ್ಪಾಟು ಆಗುವವರೆಗೆ ಪ್ರಯೋಗಾರ್ಥವಾಗಿ ಇದನ್ನು ಆಚರಣೆಯಲ್ಲಿ ತರಲಿ. ಆಗ ನೋಡಿ ಜನರಲ್ಲಿ ನ್ಯಾಯಾಂಗದ ಬಗ್ಗೆ ಎಂಥ ವಿಶ್ವಾಸ, ಸದ್ಭಾವನೆ ಹುಟ್ಟುತ್ತದೆ ಎಂಬುದನ್ನು. ಇದನ್ನು ಆಚರಣೆಯಲ್ಲಿ ತರಲು ಇಚ್ಛಾಶಕ್ತಿ ಬೇಕು. ಮನ ಇದ್ದಲ್ಲಿ ಮಾರ್ಗವಿದೆ! ❑

ಶ್ರೀ ಹರಿಹರಪ್ರಿಯ ಅವರಿಗೆ,

ನಮಸ್ಕಾರಗಳು. ನಿಮ್ಮ ಪತ್ರಿಕೆಯ ನಾಲ್ಕು ಸಂಚಿಕೆಗಳನ್ನು ಓದಿ ಸಂತೋಷ ವಾಯಿತು. ಶುಭಾಶಯಗಳು. ನಿಮ್ಮ ಸ್ಥಾಯಿಯಾದ ನಿಲುವುಗಳಲ್ಲಿ ರಾಜಿ ಮಾಡಿಕೊಳ್ಳದೆಯೂ, ಅದಕ್ಕೆ ಪೂರಕವಾದ ದೃಷ್ಟಿಕೋನಗಳಿಗೆ ಅವಕಾಶ ಕೊಡುವುದು ಪತ್ರಿಕೆಗೆ ಸಾಧ್ಯವಾಗಬಹುದೆಂದು ನನ್ನ ನಿರೀಕ್ಷೆ. ಇದುವರೆಗಿನ ಸಂಚಿಕೆಗಳಲ್ಲಿ ಅದು ಸಾಧ್ಯವಾದಂತಿದೆ. ಸಂಪಾದಕೀಯವಾದ ನಿಲುವುಗಳನ್ನು ಮಂಡಿಸಲು ನೀವು ಎರಡು ವಿಧಾನಗಳನ್ನು ಬಳಸಿಕೊಂಡಿದ್ದೀರಿ. ಮೊದಲ ಪುಟಗಳದು ಗಂಭೀರ ಚಿಂತನೆಯಾದರೆ, ಕೊನೆಯದು ದಪ್ಪ ಚರ್ಮಗಳಿಗೆ ಡಬ್ಬಣ ಚುಚ್ಚುವ ಬಗೆ. ಲಂಕೇಶ್ ಅವರೂ ತೊಡಗಿಕೊಂಡಿದ್ದ, ಇಂಥ ಪ್ರಯತ್ನಗಳನ್ನು ನಿರ್ಲಕ್ಷಿಸಿ ಮರೆಯುವ ಭಂಡತನವನ್ನು, ನಮ್ಮ ಸಂಸ್ಕೃತಿ ವಲಯದ ಪ್ರಭೃತಿಗಳು ದಶಕಗಳ ಹಿಂದೆಯೇ ರೂಢಿಸಿಕೊಂಡಿದ್ದಾರೆ. ಸಾರ್ವಜನಿಕ ಸಂಗತಿಗಳನ್ನು ಮರೆಯುವುದು ಎಲ್ಲರಿಗೂ ಉಪಯುಕ್ತ ವಾಗುವುದರಿಂದ, ಎಲ್ಲರೂ ಮರೆತು ಮೆರೆಯುತ್ತಾರೆ. ಪರಿಣಾಮವೆಂದರೆ, ಹಳೆಯದನ್ನು ಹೇಳಿದವರು ಕೆಟ್ಟವರಾಗುತ್ತಾರೆ. ಮಾಡಬಾರದ್ದನ್ನು ಮಾಡಿದವರು ಹುತಾತ್ಮರಾಗುತ್ತಾರೆ. ಕಲಾವಿದರ, ಸಂಸ್ಕೃತಿನಾಯಕರ, ಸಂಸ್ಕೃತಿ ಪೋಷಕರ 'ಸೃಷ್ಟಿಯು' ಸತತವಾಗಿ ಮುಂದುವರಿಯುತ್ತದೆ. ಇಂಥ ವಿಷಯ ಗಳನ್ನು ಕುರಿತು ಬರೆಯುವವರ, 'ನಿರ್ಮಲ ಮನಸ್ಸು' ಮತ್ತು 'ನಿಷ್ಪಕ್ಷಪಾತ'ಗಳು ಮಾತ್ರವೇ ಆ ಬರವಣಿಗೆಗೆ ಅಧಿಕೃತತೆಯನ್ನು ಕೊಡುತ್ತದೆ. ಈ ಗುಣಗಳು, ದಿಟ್ಟ ನಿಲುವುಗಳನ್ನು ತಳೆಯದಿರುವ ಹೇಡಿತನವೆಂದು ನಾನು ಭಾವಿಸಿಲ್ಲ. ನಿಮ್ಮ ಈ ಪ್ರಯತ್ನದಲ್ಲಿ ಇಂಥವರ ಸಹಯೋಗವು ಸಿಕ್ಕಲೆಂದು ನನ್ನ ಹಂಬಲ.

ಎಚ್.ಎಸ್.ರಾಘವೇಂದ್ರ ರಾವ್

ಸ್ತ್ರೀವಾದದ ಮೂಲ : ಅಬಲೋನ್ನತಿಲೇಖಮಾಲಾ

ಮ॥ ಸೂರ್ಯನಾರಾಯಣರಾವ್

ಭಾರತೀಯ ಮಹಿಳೆಯರ ಚರಿತ್ರೆಯಲ್ಲಿ ೧೮೫೦ರ ೨೧ನೇ ಆಕ್ಟ್‌ನಪ್ರಕಾರ, ಜಾತಿಕೆಟ್ಟವರಿಗು ದಾಯಬಾಧ್ಯತೆಯುಂಟು ಎನ್ನುವಂತೆ; ೨೫ ಜುಲೈ ೧೮೫೬ರ ೧೫ನೇ ನಂಬರ್‌ನ ಆಕ್ಟ್ ಕೂಡ ಮಹತ್ತ್ವದ್ದು. ವಿಧವಾ ವಿವಾಹವನ್ನು ಕಾನೂನು ಸಮ್ಮತಿಸಿದ ದಿನ ಅದು. ೧೮೫೭ರಲ್ಲಿ ಸಿಪಾಯಿ ದಂಗೆಗಿಂತ ಪೂರ್ವವೇ ಹಿಂದೂ ಸಮಾಜದಲ್ಲಿ ಕ್ರಾಂತಿಕಾರಕ ಗೊಂದಲವೆದ್ದು, ಇಡೀ ದೇಶವನ್ನೇ ನಡುಗಿಸಿದ ಸಂದರ್ಭ ಅದು. ಅಲ್ಲಿಂದ ಮುಂದೆ ೧೦ ವರ್ಷಗಳು, ನಾನಾ ಕಾರಣಗಳಿಂದ ಮೌನವಾಗಿದ್ದ ಈ ಘಟನೆ, ೧೮೬೬ರಲ್ಲಿ ಪಂಡಿತ ವಿಷ್ಣು ಶಾಸ್ತ್ರಿಯವರು, ಈಶ್ವರಚಂದ್ರ ವಿದ್ಯಾಸಾಗರರ ಪುಸ್ತಕ ಒಂದನ್ನು ಮರಾಠಿಗೆ ಅನುವಾದಿಸಿ. "ಇಂದು ಪ್ರಕಾಶ" ಪತ್ರಿಕೆಯಲ್ಲಿ ಪ್ರಕಟಿಸಲು ಪ್ರಾರಂಭಿಸಿದ ಕೂಡಲೇ ಮತ್ತೆ ಭುಗಿಲೆದ್ದಿತ್ತು. ಇಷ್ಟನ್ನೂ ೧೮೮೧ರಲ್ಲಿ ಕನ್ನಡದ "ಹಿತಬೋಧಿನಿ" ಮಾಸಪತ್ರಿಕೆ (ಸಂಪುಟ ೨, ಸಂಚಿಕೆ ೬. ಏಪ್ರಿಲ್) ಧಾರಾವಾಹಿಯಾಗಿ ಪ್ರಕಟಿಸಿದ್ದು, ಮುಂದುವರಿದ ವಿಚಾರವನ್ನು ಮುಂದೆ ಕೊಟ್ಟಿರುವ ಲೇಖನವೇ ಸ್ಪಷ್ಟಪಡಿಸುತ್ತದೆ.

ಈವತ್ತಿನ ಸ್ತ್ರೀವಾದದ ಚಳುವಳಿಗೆ ಕರ್ನಾಟಕದ ನೆಲೆಯಲ್ಲಿ ಕಾರಣಸ್ತ್ರೀಯರಾದ ಪಂಡಿತ ರಮಾಬಾಯಿ (೧೮೫೮–೧೯೨೨). ನಂಜನಗೂಡು ತಿರುಮಲಾಂಬಾ (೧೮೮೭–೧೯೮೨). ಆರ್. ಕಲ್ಯಾಣಮ್ಮ (೧೮೯೨–೧೯೬೫) ಅಂತಹವರು ಎದ್ದು ನಿಲ್ಲುವ ಮುಂಚೆಯೇ, "ಹಿತಬೋಧಿನಿ"ಯಲ್ಲಿ ಅನುವಾದಗೊಂಡು, ಧಾರಾವಾಹಿಯಾಗಿ ಪ್ರಕಟಿಸಿರುವುದು, ಅಧ್ಯಯನವನ್ನು ಗಂಭೀರವಾಗಿಸಿದೆ.

ಇಷ್ಟೂ ಅಂಶ ದಾಖಲಿಸಬೇಕಾದ ಪ್ರಮೇಯಕ್ಕೆ: ಸಾಹಿತ್ಯದಿಂದ ಕ್ರಾಂತಿಸಾಧ್ಯವಿಲ್ಲ ಎನ್ನುವ ಗಿರಡ್ಡಿ ಗೋವಿಂದರಾಜ, ಕ್ರಾಂತಿ ಮಾಡುವುದು ಸಾಹಿತ್ಯದ ಉದ್ದೇಶವಲ್ಲ ಎನ್ನುವ ಎಸ್.ಎಲ್. ಭೈರಪ್ಪ, ಬರೆಯುವುದೇ ಕ್ರಾಂತಿ ಎನ್ನುವ ಬರಗೂರು ರಾಮಚಂದ್ರಪ್ಪ – ಅಂಥವರು ನಮ್ಮ ನಡುವೆ ತಿಳಿದೂ ತಿಳಿಯದಂತೆ ಮಾತಾಡುತ್ತ, ಬರೆಯುತ್ತ ಇರುವ ಪರಿಸ್ಥಿತಿಗಾಗಿ.

ಸ್ತ್ರೀವಾದ ಎಂಬುದು ನಮ್ಮ ಜನಾಂಗದ ನಡುವಿನ ಒಂದು ಉಜ್ವಲ ಸಮಸ್ಯೆ, ಹೋರಾಟ, ವಸ್ತುಸ್ಥಿತಿ. ಅದಕ್ಕೆ ತನ್ನದೇ ಆದ ಚರಿತ್ರೆ ಇದೆ. ಸ್ತ್ರೀವಾದಿಗಳೂ ಚರಿತ್ರೆಯ ಮಡಿಲಿನಿಂದ ರೂಪುಗೊಳ್ಳುತ್ತಲೇ ಬಂದಿದ್ದಾರೆ. ಸಾಹಿತ್ಯ ಅನ್ನುವುದು ಕೇವಲ ಬರವಣಿಗೆ ಮಾತ್ರವೇ ಅಲ್ಲ; ವಿಚಾರದ ಅಭಿವ್ಯಕ್ತಿಗೆ ಬರವಣಿಗೆ, ಭಾಷಣ, ವಾಗ್ವಾದ, ಪತ್ರಿಕೆ, ಹೋರಾಟ, ನ್ಯಾಯಾಲಯ, ಸಂಘಟನೆ – ಹೀಗೆ ಹಲವನ್ನು ಒಳಗೊಂಡಿವೆ. ಆಯಾಯ ಕಾಲಘಟ್ಟದಲ್ಲಿ ಯಾವುದು ಹೇಗೆ ರೂಪಿತಗೊಂಡಿತು ಎನ್ನುವುದನ್ನು ತಿಳಿಯದವರು; ದೊಡ್ಡ ವಿಚಾರವಾದಿ, ವಿಮರ್ಶಕ, ಸೃಜನಶೀಲ ಬರಹಗಾರರಾಗುವುದು ಹೇಗೆ ಸಾಧ್ಯ?

ಈ ಎಲ್ಲಕ್ಕೂ ವಿಶಾಲವಾದ ಅರ್ಥದಲ್ಲಿ ಶಿಕ್ಷಣವೇ ಮದ್ದು ಎನ್ನುವಂತಾಗಿದೆ. ಅಂತೆಯೇ ೪೦-೫೦ ವರ್ಷಗಳ ನಿರಂತರ ಸಂಘರ್ಷ. ನೂರಾರು ವರ್ಷಗಳಾದರು ಸಿದ್ಧಿಸಿದೆ ಎನ್ನುವಂತಿಲ್ಲ. ಹರಪ್ಪ ಮಹೆಂಜೋದಾರೊ – ಪುರಾತನ ಸಂಸ್ಕೃತಿಯಿಂದ, ಆಧುನಿಕ ಇಂಗ್ಲಿಷ್ ಸಂಸ್ಕೃತಿವರೆಗಿನ ನಮ್ಮ ಚರಿತ್ರೆ ಮೂಲೆಪಾಲಾಗಿ, ಆರ್ಯಸಂಸ್ಕೃತಿ ಒಂದೇ ೨೦೦೦ ವರ್ಷಗಳಿಗೂ ಮೀರಿ ನಮ್ಮ ಬದುಕಿನ ಮೇಲೆ ದಬ್ಬಾಳಿಕೆ ನಡೆಸುತ್ತ ನಲುಗಿಸುತ್ತಿದೆ. ಈಗಲಾದರು ನಿಜಚರಿತ್ರೆಯ ರಚನೆಗೆ ತೊಡಗಿ, ಸಮಾಜ ನಿಜಜೀವನವನ್ನು ಪ್ರಾರಂಭಿಸಬೇಕಾಗಿದೆ.

ಈ ದಿಕ್ಕಿನಲ್ಲಿ 'ಪುಸ್ತಕಮನೆ'ಯಲ್ಲಿರುವ ಹಲವಾರು ಪತ್ರಿಕೆಗಳು, ಪುಸ್ತಕಗಳಿಂದ ಇನ್ನು ಮುಂದೆ "ಪ್ರಜಾಸಾಹಿತ್ಯ"ದಲ್ಲಿ ಪುನರ್ ಮುದ್ರಣ ಮಾಡುವ ಉದ್ದೇಶ ಇಟ್ಟುಕೊಂಡಿದೆ. ಬದುಕಿಗೆ ಸಂಬಂಧಿಸಿದ ಈ ಬಗೆಯ ಯಾವುದೇ ಲೇಖನ, ಪತ್ರಿಕೆ, ಪುಸ್ತಕಗಳು ಇರುವವರು ದಯವಿಟ್ಟು, 'ಪುಸ್ತಕಮನೆ'ಗೆ ಯಾವುದೇ ರೂಪದಲ್ಲಿ ನೀಡಬೇಕಾಗಿ ವಿನಂತಿ.

ಸಂಪಾದಕ

ಅಬಲೋನ್ನತಿಲೇಖಮಾಲಾ

ಸ್ತ್ರೀಯರ ಅಭ್ಯುದಯಕ್ಕಾಗಿ ಮಾಡಿದ ಪ್ರಯತ್ನಗಳು ಬೂದಿಯಲ್ಲಿ ಹೋಮಮಾಡಿದಂತಾಗಿ ಅಪಯಶಸ್ಸಿಗೆ ಕಾರಣವಾದವೆಂದು ಹಿಂದೆಯೇ ಹೇಳಿದೆಯಷ್ಟೆ. ಈ ಅಭ್ಯುದಯವಿಚಾರವನ್ನು ಪುನಃ ಚರ್ಚಿಸುವರೆಂಬ ಆಶೆಯೇ ಇರಲಿಲ್ಲ. ಆದರೆ ೧೮೮೪ರಲ್ಲಿ ಈ ವಿಚಾರವು ಒಂದಾನೊಂದು ಕಾರಣದಿಂದ ಉಜ್ಜೀವಿತವಾಯಿತು. ಅನ್ಯಜಾತಿಯವರಾದರೂ, ಸಮರ್ಥರಾಗಿಯೂ ದಯಾರ್ದ್ರ ಹೃದಯರಾಗಿಯೂ ಇರುವ ದೊಡ್ಡಮನುಷ್ಯರೊಬ್ಬರು ಇದರಲ್ಲಿ ಪ್ರವೇಶಿಸಿ, ಬಾಲವಿವಾಹ ವಿಧವಾ ವಿವಾಹಗಳೆಂದು ಎರಡು ಭಾಗಗಳನ್ನು ಮಾಡಿಕೊಂಡು, ಇವೆರಡಕ್ಕೂ ಪ್ರತ್ಯೇಕವಾಗಿ ಕೆಲವು ನಿಬಂಧನೆಗಳನ್ನು ಬರೆದು, ಎಲ್ಲಕಡೆಗಳಲ್ಲಿಯೂ ಪ್ರಚುರಪಡಿಸಿ, ನಮ್ಮ ದೇಶೀಯರಲ್ಲಿಯೂ ಅನ್ಯದೇಶೀಯರಲ್ಲಿಯೂ ವಿಚಾರಶೀಲರಾದವರ ಮನಸ್ಸನ್ನು ಸೆಳೆದರು. ಇದಕ್ಕೆ ಮುಂಚೆ, ವಿಚಾರ ಶೀಲರಾಗಿ ದೇಶಾಭ್ಯುದಯಪ್ರಯತ್ನಗಳನ್ನು ಮಾಡುತ್ತಿದ್ದವರಲ್ಲಿ ಯಾರೂ ಬಾಲವಿವಾಹದ ಅನೌಚಿತ್ಯವನ್ನು ಚರ್ಚಿಸಲಿಲ್ಲ. ಹೀಗೆ ಅತ್ಯಂತಾವಶ್ಯಕವಾದ ಈ ವಿಷಯದಲ್ಲಿ ಜನರಿಗಿದ್ದ ಔದಾಸೀನ್ಯವನ್ನು ಅವರ ಲಕ್ಷ್ಯಕ್ಕೆ ತಂದದ್ದಕ್ಕೆ ಮ॥ ಮಲಬಾರಿಯವರನ್ನು ಬಹಳವಾಗಿ ಶ್ಲಾಘಿಸ ಬೇಕಾಗಿದೆ. ಸ್ವಲ್ಪ ಕಾಲದಲ್ಲಿಯೇ ಬಾಲವಿವಾಹವಿಷಯದಲ್ಲಿ ಜನರ ಅಭಿಪ್ರಾಯಗಳು ಕ್ರಮೇಣವಾಗಿ ಬದಲಾಗುತ್ತ ಬಂದವು. ಜನರು ಈ ವಿಷಯವಾಗಿ ಉಪನ್ಯಾಸಮಾಡುತ್ತಲೂ ಬಂದರು. ಯೂನಿವರ್ಸಿಟಿಯ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಬರೆಯಬೇಕಾದ ಉಪನ್ಯಾಸಕ್ಕೆ ಈ ವಿಷಯವನ್ನೇ ಆಗಾಗ ನಿಯಮಿಸುತ್ತಿದ್ದರು. ಈ ಕಾರಣಗಳಿಂದ ಪೂರ್ವಸಂಪ್ರದಾಯಗಳನ್ನನುಸರಿಸುವುದರಿಂದ ಕೆಲವಂಶಗಳಲ್ಲಾದರೂ ಕೇಡುಂಟಾಗುವುದರಲ್ಲಿ ಸಂಶಯವಿಲ್ಲವೆಂಬ ಅಭಿಪ್ರಾಯವು ಜನರ ಮನಸ್ಸಿನಲ್ಲಿ ಅಂಕುರಿಸಿತು. ಆದರೆ ಸಾಮಾಜಿಕದುಃಖಗಳಿಗೆಲ್ಲ ಬಾಲವಿವಾಹವೇ ಕಾರಣವಾಗದಿದ್ದರೂ, ಅನೇಕ ದುಃಖಗಳಿಗೆ ಇದೇ ಕಾರಣವಾಗಿರುವದೆಂದು ಪರ್ಯಾಲೋಚಿಸುವ ಸ್ಥಿತಿಗೆ ಹಿಂದೂಜನರು ಬಂದಿರಲಿಲ್ಲ. ಆದುದರಿಂದ ಬಾಲವಿವಾಹಸಂಪ್ರದಾಯವನ್ನು ನಿಲ್ಲಿಸುವದಕ್ಕಾಗಿ ಶ್ಲಾಘನೀಯವಾದ ಪ್ರಯತ್ನಗಳನ್ನು ಮಾಡಿ, ಅದರಿಂದುಂಟಾಗುವ ದುಷ್ಪರಿಣಾಮವನ್ನು ಕುರಿತು ವಿಶೇಷವಾಗಿ ಬೊಬ್ಬೆ ಹಚ್ಚಿ, ವಿಚಾರಪರರ ಮನಸ್ಸನ್ನು ಸೆಳೆದವರು ಮ॥ ಮಲಬಾರಿಯವರೇ ಆದರು. ಆದರೆ ಇವರು ಅನ್ಯದೇಶೀಯರಾಗಿರುವದಲ್ಲದೆ ಇವರು ಪ್ರಕಟಿಸಿದ ಅಭಿಪ್ರಾಯವು ಹಿಂದೂಧರ್ಮಕ್ಕೆ ವಿರುದ್ಧ ವಾಗಿದ್ದುದರಿಂದ, ಪೂರ್ವಸಂಪ್ರದಾಯದವರು ಅತ್ಯಾಗ್ರಹದಿಂದ ಇವರ ಅಭಿಪ್ರಾಯವನ್ನು ಖಂಡಿಸ ತೊಡಗಿದರು. ಆದರೂ ಬಾಲೆಯರ ವಿಷಯದಲ್ಲಿ ತಮಗಿದ್ದ ಕನಿಕರದಿಂದ, ಪೂರ್ವಸಂಪ್ರದಾಯದವ ರೊಡನೆ ವಾಗ್ಯುದ್ಧವನ್ನು ಮಾಡಿದ್ದಲ್ಲದೆ, ಈ ಯಶೋಹೀನವಾದ ಕೆಲಸಕ್ಕಾಗಿ ಹಿಂದೂದೇಶದಲ್ಲೆಲ್ಲಾ ಸಂಚಾರಮಾಡಿ, ಯಾವ ಪ್ರಯೋಜನವನ್ನು ಹೊಂದದೆಯೂ, ಯಾವ ಬಾಲೆಯಿಂದಲೂ ಪ್ರಾರ್ಥಿಸಲ್ಪಡದೆಯೂ, ಹಿಂದೂಜನರಲ್ಲಿ ದಯಾಂತಃಕರಣಗಳನ್ನುಳ್ಳವರು ಸ್ವಲ್ಪ ಜನವೇ ಇದ್ದರೂ, ಕೇವಲ ಉದಾರಮನಸ್ಸಿನಿಂದಲೇ ಮಲಬಾರಿಯವರು ಇವರೊಡನೆ ಹೋರಾಡಿದರು. ಸರ್ಕಾರದ ದೊಡ್ಡ ಅಧಿಕಾರಿಗಳಲ್ಲಿ ಪರೋಪಕಾರಶೀಲರಾದವರ ಮನಸ್ಸನ್ನು ತಮ್ಮಕಡೆಗೆ ತಿರುಗಿಸಿಕೊಂಡು, ಹಿಂದೂಜನರಲ್ಲಿ ಅಗ್ರಗಣ್ಯರಾದವರು ಬಾಲವಿವಾಹನಿಷೇಧಕ್ಕೆ ಒಪ್ಪುವಪಕ್ಷದಲ್ಲಿ, ಅದರ ಸಾಹಾಯ್ಯಕ್ಕೆ ಕಾಯಿದೆಗಳನ್ನು ಮಾಡಲು ಸರ್ಕಾರದವರು ಸಿದ್ಧರಾಗಿರುವರೆಂದು ಹಿಂದೂಜನರಿಗೆ ಮೊರೆಯಿಟ್ಟರು. ಆದರೂ ಇದೆಲ್ಲಾ ವ್ಯರ್ಥವಾಯಿತು. ಈ ಬದಲಾವಣೆಯಿಂದಾಗತಕ್ಕ ಪ್ರಯೋಜನವು ಹಿಂದೂ ಸಮಾಜದವರಿಗೆ ತಿಳಿಯದೆ ಹೋದುದರಿಂದ, ಅವರು ಈ ಪ್ರಯತ್ನಕ್ಕೆ ಸಹಾಯಮಾಡಲಿಲ್ಲ. ಬಾಲವಿವಾಹಸಂಪ್ರದಾಯದಿಂದ ಕೆಲವರು ಬಾಲ್ಯದಲ್ಲಿಯೇ ವೈಧವ್ಯವನ್ನು ಹೊಂದಿ ಮೃತ್ಯುಮುಖ ದಲ್ಲಿ ಬೀಳುವರು; ಕೆಲವರು ಇಂದ್ರಿಯಗ್ರಾಮವನ್ನು ಜಯಿಸಲಾರದೆ ಅನುಚಿತಗಳನ್ನು ಮಾಡಿ ಲೋಕಾಪವಾದಕ್ಕೆ ಗುರಿಯಾಗುವರು; ಕೆಲವರು ಸಾಯುವವರೆಗೂ ರೋಗಿಗಳಾಗಿ ನರಳುತ್ತಿರುವರು. ಈ ದುಃಖಪರಂಪರೆಯನ್ನು ಅನುಭವಿಸತಕ್ಕ ಸ್ತ್ರೀಯರು ಕೂಡ ಅಜ್ಞಾನದ ವಶದಿಂದ ಮೇಲೆ ಹೇಳಿದ

ಬದಲಾವಣೆಯ ವಿಷಯದಲ್ಲಿ ವಿರುದ್ಧ ಮತವುಳ್ಳವರಾದರು. ಈ ಬದಲಾವಣೆಯ ವಿಷಯದಲ್ಲಿ ಮೆ। ಮಲಬಾರಿಯವರಿಗೆ ಸಹಾಯಮಾಡುತ್ತೇವೆಂದು ಹೇಳುತ್ತಿದ್ದ ಜನರ ಮನಸ್ಸೂ ವಿಕಲವಾಯಿತು. ಮತ್ತು ಮೆ। ಮಲಬಾರಿಯವರು ಮಾಡುತ್ತಿದ್ದ ಪ್ರಯತ್ನಗಳೂ ಅವರು ಆಡುತ್ತಿದ್ದ ಮಾತುಗಳೂ ಕೆಲವು ಸಮಯಗಳಲ್ಲಿ ವಿಚಾರಶೂನ್ಯವಾಗಿರುತ್ತಿದ್ದವು. ಅನ್ಯಜಾತಿಯವರಾದುದರಿಂದ ಹಿಂದೂಧರ್ಮ ವಿಷಯವಾಗಿ ಮಾತನಾಡುವ ಅಧಿಕಾರವು ಇವರಿಗೆ ಇರಲಿಲ್ಲ. ಇದಲ್ಲದೆ ಕೆಲವರು ಸುಶಿಕ್ಷಕರೂ ಬಹುಜನ ಅಶಿಕ್ಷಕರೂ ಸೇರಿ, ಇವರ ಪ್ರಯತ್ನಗಳೆಲ್ಲಾ ನಿಷ್ಫಲವಾಗುವಂತೆ ಸಾಹಸಮಾಡುತ್ತಿದ್ದರು. ಈ ವಿಧವಾದ ಅನಾನುಕೂಲ್ಯಗಳಿದ್ದುದರಿಂದ, ಸಮರ್ಥರಾದ ಮೆ। ಮಲಬಾರಿಯವರ ಮಹಾಪ್ರಯತ್ನವು ಅರಣ್ಯರೋದನದಂತೆ ನಿಷ್ಫಲವಾಯಿತು. ಅಂದಿನಿಂದ ಇವರ ಧೈರ್ಯಸಾಹಸಗಳು ಸ್ವಲ್ಪ ಕಡಿಮೆಯಾಗಿ ಈ ವಿಷಯದಲ್ಲಿ ವಿವಾದವನ್ನು ಸ್ವಲ್ಪಬಿಟ್ಟಂತೆ ಕಾಣುತ್ತದೆ. ಇವರು ತಮ್ಮ ಪ್ರಯತ್ನವನ್ನು ಸಂಪೂರ್ಣವಾಗಿ ಬಿಡದಿದ್ದರೂ, ಹಿಂದೂಜನರಲ್ಲಿ ಬದಲಾವಣೆಗಳಾಗಬೇಕಾದರೆ ಆ ಜನರೇ ಮುಂದಾಳುಗಳಾಗಿ ನಿಲ್ಲಬೇಕೆಂದು ಆಲೋಚಿಸಿ, ಅವರಲ್ಲಿ ಸಮರ್ಥರು ಯಾರಾದರೂ ಸಿಕ್ಕಿದರೆ, ಅವರಿಗೆ ಈ ಕೆಲಸವನ್ನು ಒಪ್ಪಿಸಬೇಕೆಂಬ ವಿಚಾರದಲ್ಲಿದ್ದಹಾಗೆ ಕಾಣುತ್ತದೆ.

ಇಂತಾ ದೊಡ್ಡ ಮನುಷ್ಯರೊಬ್ಬರು ಮೆ॥ ಮಲಬಾರಿಯವರಿಗೆ ಶೀಘ್ರದಲ್ಲಿಯೇ ದೊರೆತರು, ಧೈರ್ಯಶಾಲಿಗಳೂ, ಹಿಂದೂಧರ್ಮಪರಾಯಣರೂ, ಸ್ವಧರ್ಮಾಭಿಮಾನಿಗಳೂ, ಆದ ದಿವಾನ್‌ಬಹದೂರ್ಬರ್ ಘನಾಥರಾಯರೇ ಆ ದೊಡ್ಡಮನುಷ್ಯರಾಗಿದಾರೆ. ಇವರಿಗೆ ವಯಸ್ಸು ಪಕ್ವವಾಗಿರುವದಾದರೂ, ಇವರ ಧೈರ್ಯಸಾಹಸಗಳು ತರುಣರಿಗೂ ಇರಲಾರವು. ಮತ್ತು ಯೂರೋಪ್ ಖಂಡದಲ್ಲಿ ಧೈರ್ಯದಿಂದಲೂ ಏಕನಿಶ್ಚಯದಿಂದಲೂ ಕ್ರಿಸ್ತಧರ್ಮದಲ್ಲಿ ಬದಲಾವಣೆಯನ್ನು ಮಾಡಿ ಜಗದ್ವಿಖ್ಯಾತಿಯನ್ನು ಪಡೆದ ಲೂಥರ್ ಎಂಬವರಿಗೂ, ನಮ್ಮ ದೇಶದ ಕೇಸವಚಂದ್ರ ಸೇನರಿಗೂ, ಇದ್ದ ಉತ್ಸಾಹಬುದ್ಧಿಯು ಈ ದಿವಾನ್ ಬಹದ್ದೂರ್‌ರವರಿಗೆ ಇದೆ. ಇವರು ವೇದಶಾಸ್ತ್ರಗಳಲ್ಲಿ ವಿಶೇಷಪರಿಶ್ರಮವನ್ನು ಮಾಡಿದವರಾಗಿದಾರೆ. ವಾದಮಾಡುವದರಲ್ಲಿ ಇವರಿಗೆ ವಿಶೇಷ ಕೌಶಲ್ಯವಿದೆ. ಆದುದರಿಂದ ಪೂರ್ವಾಚಾರದ ಪಂಡಿತರೊಡನೆಯೂ ಶಾಸ್ತ್ರಿಗಳೊಡನೆಯೂ ವಾದ ಮಾಡಿ, ಬಾಲವಿವಾಹಕ್ಕೂ, ವಿಧವಾವಿವಾಹಕ್ಕೂ ಪ್ರಾಚೀನಧರ್ಮ ಸೂತ್ರಗಳಲ್ಲಿ ಆಧಾರವಿಲ್ಲವೆಂದು ತೋರಿಸುವುದಕ್ಕೆ ಇವರು ತಕ್ಕವರಾಗಿದಾರೆ. ಇವರು ರಾಜಕೀಯಾಧಿಕಾರದಲ್ಲಿರುವಾಗಲೂ, ಇಲ್ಲದಿರುವಾಗಲೂ, ತಮಗೆ ದೊರೆತ ಅವಕಾಶವನ್ನೆಲ್ಲ ಈ ಕೆಲಸಕ್ಕಾಗಿ ಉಪಯೋಗಿಸುವರು. ತಾವು ವೇದಶಾಸ್ತ್ರಗಳನ್ನು ಪರಿಶೋಧಿಸಿ ನಿಶ್ಚಯಿಸಿದ ಸಾರಾಂಶವನ್ನು ಪ್ರಕಟಿಸಿದ್ದಾರೆ. ಹಿಂದೂಜನ ಸಮುದಾಯಗಳ ಮುಂದೆ ಉಪನ್ಯಾಸವನ್ನು ಮಾಡಿದಾರೆ. ಪೂರ್ವ್ಯಾಚಾರಾವಲಂಬಿಗಳ ಮತ್ತು ವಿರುದ್ಧ ಪಕ್ಷದವರ ಸಂಗಡ ಅನೇಕವಿವಾದಗಳನ್ನು ಮಾಡಿ ಬಹುಶ್ರಮಪಟ್ಟಿದಾರೆ. ಆದರೂ ಯಾವ ಫಲವೂ ಆಗಲಿಲ್ಲ.

❑

ನಿಮ್ಮ ಮಾಸಪತ್ರಿಕೆ ತಲುಪಿತು. ಕೂಡಲೇ ಓದಬೇಕೆನಿಸಿತು – ನಿಮ್ಮ ಸಂಪಾದಕೀಯದಿಂದ ಹಿಡಿದು ಇನ್ನಿತರ ಲೇಖನಗಳು ತುಂಬ ಮೌಲಿಕವಾಗಿವೆ. ಇಂತಹ ಲೇಖನಗಳಿಂದ ತುಂಬಿರುವ 'ಪ್ರಜಾಸಾಹಿತ್ಯ' ನಿಜಕ್ಕೂ ಉನ್ನತಮಟ್ಟದ ವಿಷಯ-ವಿಚಾರಗಳನ್ನೊಳಗೊಂಡು, ಸಾಹಿತ್ಯಕ, ಸಾಂಸ್ಕೃತಿಕ ವಲಯದಲ್ಲಿ ಪ್ರತಿಷ್ಠಿತವಾದ ಪತ್ರಿಕೆಯಾಗುತ್ತದೆ ಎಂಬ ನಂಬಿಕೆ ನನ್ನದು.

ಎಚ್.ಜಿ. ಸೋಮಶೇಖರರಾವ್

ಅವಿವಾಹಿತ ಮಹಿಳೆಯರು

ಬಿ.ಎಂ. ರೋಹಿಣಿ

ವೃತ್ತಿ ಜೀವನದಲ್ಲಿ ಉತ್ತಮ ಚಿತ್ರಕಲಾವಿದೆಯಾಗಿಯೂ ಆದರ್ಶ ಶಿಕ್ಷಕಿಯಾಗಿಯೂ ಮನ್ನಣೆ ಪಡೆದಿದ್ದ ನನ್ನ ಪರಿಚಿತರೊಬ್ಬರನ್ನು ಭೇಟಿಯಾದೆ. ಐವತ್ತರಲ್ಲೇ ಎಪ್ಪತ್ತರ ಮುಪ್ಪು ಆವರಿಸಿ ಜೀವನದ ಲವಲವಿಕೆಯನ್ನೇ ಕಳಕೊಂಡಿದ್ದರು. ಪೊಲೀಸ್ ಸ್ಟೇಶನ್, ಕೋರ್ಟುಕಚೇರಿಗಳ ಸುತ್ತಾಟದಲ್ಲಿ ಸುಸ್ತಾಗಿದ್ದರು. ಕಾರಣವೇನೆಂದರೆ ತಾನೇ ಕಟ್ಟಿಸಿದ ಮನೆಯ ಒಂದು ಭಾಗವನ್ನು ಬಾಡಿಗೆಗೆ ಕೊಡುವುದಕ್ಕೆ ಅಣ್ಣನ ತಕರಾರು. ತಕರಾರು ಯಾಕೆಂದರೆ ಮನೆ ಕಟ್ಟುವಾಗ ಸ್ವಲ್ಪಹಣ ಅಣ್ಣ ಸಾಲ ಕೊಟ್ಟಿದ್ದ. ಅದನ್ನು ಮರಳಿಸುವಾಗ ಸ್ವೀಕರಿಸಲಿಲ್ಲ. ಯಾಕೆಂದರೆ ಅಣ್ಣನ ಮಗಳು ಇವರೊಂದಿಗೆ ಇದ್ದು ಶಿಕ್ಷಣ ಪೂರೈಸಿದ್ದಳು. ಆ ಸಲುವಾಗಿರಬಹುದೇನೋ ಎಂದು ಭಾವಿಸಿ ಅವರು ಇಸಕೊಂಡು ಕೋಡಂಗಿಯಾದರು.

ಇನ್ನೋರ್ವರೂ ತನ್ನ ದುಡಿಮೆಯ ಹಣದಿಂದಲೇ ಮನೆ ಕಟ್ಟಿ ತಂಗಿಯ ಸಂಸಾರವನ್ನು ಜೊತೆಯಲ್ಲಿಟ್ಟುಕೊಂಡು ಪೋಷಿಸಿದರು. ಮಕ್ಕಳು ಬೆಳೆದು ದೊಡ್ಡವರಾದಂತೆ ಅವರ ಇಷ್ಟಾರ್ಥಗಳು ಮಿತಿ ಮೀರಿದಾಗ ಕೈಬಿಗಿಹಿಡಿದರು. ಇದೇ ಪ್ರಮಾದವಾಗಿ ಮನೆ ನಿತ್ಯ ರಣರಂಗವಾಯಿತು. ಇವರು ಕೊಟ್ಟು ಕೋಡಂಗಿಯಾದರು.

ಈ ಎರಡೂ ನಿದರ್ಶನಗಳು ಅವಿವಾಹಿತ ಮಹಿಳೆಯರದ್ದೆಂದು ಬೇರೆ ಹೇಳಬೇಕಾಗಿಲ್ಲ. ಕಳೆದ ಶತಮಾನದ ಉತ್ತರಾರ್ಧದಿಂದಲೇ ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ಲಭಿಸಿ ಆರ್ಥಿಕ ಸ್ವಾವಲಂಬನೆಗೆ ಸಾಕಷ್ಟು ಅವಕಾಶ ಸಿಕ್ಕಿದ ಕಾರಣ ಅನೇಕ ಮಹಿಳೆಯರು ನಾನಾ ಕಾರಣಗಳಿಗಾಗಿ ಅವಿವಾಹಿತೆಯರಾಗಿಯೇ ಉಳಿದರು. ಅವರ ತ್ಯಾಗ, ಮಮತೆ ಕುಟುಂಬ ಪ್ರೀತಿಗಳ್ಯಾವುವೂ ಅವರ ಸಂಪತ್ತು ಮತ್ತು ಗಳಿಕೆಯ ವಿಷಯಕ್ಕೆ ಬಂದಾಗ ಮಾಯವಾಗಿ ಬಿಡುತ್ತವೆ. ಇದು ಅವರಿಗೆ ಮಾತ್ರವೆಂದು ತಿಳಿಯುವ ಪ್ರಮೇಯವಿಲ್ಲ. ಒಟ್ಟು ಸಮಾಜದ ಮನೋಭಾವನೆಗಳಲ್ಲೇ ಆಗಿರುವಂತಹ ಪರಿವರ್ತನೆಯದು. ಸ್ವಂತ ಮಕ್ಕಳೇ ತಂದೆ ತಾಯಿಗಳು ಬದುಕಿರುವಾಗಲೇ ಆಸ್ತಿಗಾಗಿ ಕಿತ್ತಾಡುವುದಿಲ್ಲವೇ? ಖ್ಯಾತ ಶಹನಾಯಿವಾದಕ ಬಿಸ್ಮಿಲ್ಲಾಖಾನ್ ಪರಿಸ್ಥಿತಿಯೇ ಇಂದು ಕುಟುಂಬಗಳಲ್ಲಿ ಕಂಡು ಬರುವ ಸಾಮಾನ್ಯ ಸಂಗತಿಯಾಗಿದೆ. ಇನ್ನು ಅವಿವಾಹಿತೆಯರಂತೂ 'ವಾರೀಸುದಾರರಿಲ್ಲದ ಗದ್ದೆ'ಗಳಂತೆ. ಎಲ್ಲರಿಗೂ ಕೊಯ್ಯುವ ಹಕ್ಕಿದೆ ಎಂದೇ ಭಾವಿಸುವವರು ಜಾಸ್ತಿ. ಇಂತಹ ಪರಿಸ್ಥಿತಿ ಯಾಕೆ ನಿರ್ಮಾಣವಾಗುತ್ತದೆಂದು ಶೋಧಿಸಹೊರಟರೆ ಅವರ ಹೃದಯ ಚುರುಕಾಗಿದ್ದು ಬುದ್ಧಿ ಜಡವಾಗಿರುವುದೇ ಕಾರಣವಾಗಿದೆ. ಬೆಳ್ಳಗಿರುವುದೆಲ್ಲಾ ಹಾಲು ಎಂದು ತಿಳಿಯುವ ಪೆದ್ದುತನವೂ ಇರುತ್ತದೆ. ಒಂಟಿತನಕ್ಕೊಂದು ಆಧಾರ ಬೇಕು ಎಂಬ ಅಲಂಬನೆಯೂ ಇರುತ್ತದೆ. ಭ್ರಮ ನಿರಸನವಾದ ಮೇಲೆ ಎಲ್ಲರ ಕೊನೆಯ ತಾಣವಾದ ವೃದ್ಧಾಶ್ರಮವನ್ನೇ ಆಶಿಸುತ್ತಾರೆ. ಮಂಗಳೂರು ಹಾಗೂ ನಮ್ಮ ಜಿಲ್ಲೆಯ ಬೇರೆ ಬೇರೆ ತಾಲೂಕುಗಳ ವೃದ್ಧಾಶ್ರಮಗಳಲ್ಲಿ ಅರ್ಧದಷ್ಟು ಮಂದಿ ಅವಿವಾಹಿತೆಯರು. ಆರ್ಥಿಕ ಸ್ವಾವಲಂಬಿಗಳೂ ಇದ್ದಾರೆ. ನಿರ್ಗತಿಕರಾಗಿ ಅನಾಥಾಶ್ರಮದಲ್ಲಿ ಸೇರಿಕೊಂಡವರೂ ಇದ್ದಾರೆ.

ಇದೇ ರೀತಿಯ ಬದುಕು ಸಾರ್ವತ್ರಿಕವಾಗಿ ಸಮಾಜದಲ್ಲಿ ವ್ಯಾಪಿಸಿದೆ ಎಂದು ತಿಳಿಯಬೇಕಾಗಿಲ್ಲ. ಅವಿವಾಹಿತೆಯರಾಗಿದ್ದುಕೊಂಡು ಮಹತ್ತರ ಸಾಧನೆ ಮಾಡಿದವರಿದ್ದಾರೆ. ನಲ್ವತ್ತು ವರ್ಷ ದಾಟಿದ

ಸಾವಿರಕ್ಕೂ ಹೆಚ್ಚು ಮಹಿಳೆಯರು ನಮ್ಮ ಅಧ್ಯಯನದ ವ್ಯಾಪ್ತಿಯಲ್ಲಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ಹುಟ್ಟಿದವರಿಗೆ ವಿವಾಹವಾಗದಿರಲು ಗಾಂಧೀಜಿಯ ಚಿಂತನೆಗಳು ಪ್ರೇರಣೆಯಾದುದೂ ಇದೆ. ಸ್ವಾತಂತ್ರ್ಯಾನಂತರ ಹುಟ್ಟಿದವರೆ ಸಾಧನೆಯ ಹಂಬಲವು ವಿವಾಹವನ್ನು ಮುಂದೂಡುತ್ತಾ ಕೊನೆಗೆ ಒಂಟಿ ಜೀವನವೇ ಹಿತಕರವೆಂಬ ನಿರ್ಧಾರ ತಾಳುವಂತಾಗಿದೆ.

ಸುಶಿಕ್ಷಿತ ಉದ್ಯೋಗಸ್ಥ ಮಹಿಳೆಯರು ಸ್ವಂತ ಆಯ್ಕೆಯಿಂದ ಅವಿವಾಹಿತರಾಗಿ ಉಳಿದವರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿದೆ. ಇಂತಹವರು ಮಾನಸಿಕವಾಗಿ ಮತ್ತು ಬೌದ್ಧಿಕವಾಗಿಯೂ ಸಶಕ್ತರಾಗಿದ್ದಾರೆ. ಪ್ರಾರಂಭದಲ್ಲಿ ಹೇಳಿದ ಭಾವನಾಮಯಿ ಹೆಂಗುಸರಂತೆ ಯಾವುದೇ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಂಡವರಲ್ಲ. ಸ್ವಂತ ಮನೆ, ಕಾರು ಇಟ್ಟುಕೊಂಡು ಯಾವ ಗಂಡುಸಿಗೂ ಕಡಿಮೆ ಇಲ್ಲದಂತೆ ಒಂಟಿಯಾಗಿಯೇ ಬಾಳುತ್ತಿದ್ದಾರೆ. ಎಷ್ಟೋ ಮಂದಿಗೆ ತಮಗೆ ಮದುವೆಯಾಗಿಲ್ಲ ಎಂಬುದು ಮರೆತೇ ಹೋಗುವಷ್ಟು ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ನೆಮ್ಮದಿಯಿಂದಿದ್ದಾರೆ. ಹಾಗೇನಾದರೂ ಸಮಸ್ಯೆ ಉದ್ಭವಿಸಿದರೂ ಅದನ್ನು ಪರಿಹರಿಸಿಕೊಳ್ಳುವ ಛಾತಿ ಉಳ್ಳವರಿವರು. ಮಹಾನಗರಗಳಲ್ಲಿ ಇನ್ನು ಒಂದು ಸಣ್ಣ ವರ್ಗವಿದೆ. ಮದುವೆಯ ಬಂಧನಕ್ಕೆ ಒಳಪಡದೆ ಕರಾರಿನಂತೆ ಗಂಡುಹೆಣ್ಣು ಒಟ್ಟಿಗೆ ಜೀವಿಸುವವರು, ಮದುವೆ ಇಲ್ಲದೆಯೇ ಮಗುವನ್ನು ಹೆತ್ತವರು. ಇಲ್ಲವೇ ದತ್ತು ಮಕ್ಕಳನ್ನು ಸಾಕುವವರೂ ಇದ್ದಾರೆ. ಇದು ವಿವಾಹ ವ್ಯವಸ್ಥೆಯ ನಂಬಿಕೆ ಕುಸಿಯುತ್ತಿರುವುದನ್ನು, ಶಿಕ್ಷಣ ಮತ್ತು ಆರ್ಥಿಕ ಸ್ವಾವಲಂಬನೆ ಹೆಣ್ಣಿಗೆ ಕೊಟ್ಟ ಸ್ವಾತಂತ್ರ್ಯವನ್ನು, ಆಧುನಿಕತೆ ತಂದುಕೊಟ್ಟ ಸಾಮಾಜಿಕ ಪರಿವರ್ತನೆಯನ್ನು ಧ್ವನಿಸುತ್ತದೆ. ಕಳೆದ ಶತಮಾನಾರಂಭದ ವರೆಗೂ ಹತ್ತು ವರ್ಷದೊಳಗೆ ಹೆಣ್ಣಿಗೆ ಮದುವೆಮಾಡದಿದ್ದರೆ ದೇಶಕ್ಕೆ ಬರಗಾಲ ಬರುತ್ತದೆಂದೂ, ಹೆಣ್ಣುಮಕ್ಕಳಿಗೆ ಮದುವೆ ಮಾಡದ ಹೆತ್ತವರಿಗೆ ನರಕ ಪ್ರಾಪ್ತಿಯಾಗುತ್ತದೆಂದೂ, ಮದುವೆಯಾಗದೆ ಸತ್ತರೆ ಮೋಕ್ಷವಿಲ್ಲದೆ ಪ್ರೇತಗಳಾಗಿ ನರಳುತ್ತಾರೆಂದೂ, ನಂಬಿದ ಸಮಾಜ ಇಂದು ನಲ್ವತ್ತು ದಾಟಿದ ಅವಿವಾಹಿತೆಯರನ್ನು ಯಾವುದೇ ಕುಹಕ, ನಿಂದೆ, ಅನುಕಂಪವಿಲ್ಲದೆ ನೋಡುವ, ಸಹಿಸುವ ಮನಸ್ಥಿತಿಗೆ ಬಂದಿದೆ.

ಆದರೆ ಈ ಸ್ಥಿತಿ ಅನಕ್ಷರಸ್ಥ ಹಳ್ಳಿಗಾಡಿನ ಮಹಿಳೆಯರಲ್ಲಿ ಇಲ್ಲ. ಸಮಾಜದ ಮನಸ್ಥಿತಿಯಲ್ಲೂ ವ್ಯತ್ಯಾಸವಿಲ್ಲ. ಒಂದೈವತ್ತು ವರ್ಷಗಳ ಹಿಂದೆ ಕ್ರೈಸ್ತ ಸಮಾಜದಲ್ಲಿ ಮಾತ್ರ ಅವಿವಾಹಿತ ಮಹಿಳೆಯರನ್ನು ಕಾಣಬಹುದಿತ್ತು. ಆ ಮತದಲ್ಲಿ ಸ್ತ್ರೀಯರು ಸಂನ್ಯಾಸಿನಿಯರಾಗುವುದೂ, ಅವಿವಾಹಿತೆಯಾಗಿ ಉಳಿಯುವುದೂ ಸಮಸ್ಯೆಯಲ್ಲ. ಬದಲಾಗಿ ಆ ಸಮಾಜದಲ್ಲಿ ಅದೊಂದು ಗೌರವದ ಸಂಗತಿಯಾಗಿತ್ತು. ಅವಿವಾಹಿತನಾಗಿ ಶಿಲುಬೆಗೇರಿದ ಯೇಸುಕ್ರಿಸ್ತನ ಆದರ್ಶದಂತೆ ಸಂನ್ಯಾಸಕ್ಕೆ ಧಾರ್ಮಿಕ ಮತ್ತು ಸಮಾಜಸೇವೆಯ ಆಯಾಮವೂ ಲಭಿಸಿ ಅದು ಸಮಾಜದ ಗೌರವಾದರಗಳಿಗೆ ಪಾತ್ರವಾಯಿತು. ಇವತ್ತಿಗೂ ಕೂಡಾ ಕ್ರೈಸ್ತರಲ್ಲೇ ಅವಿವಾಹಿತ ಮಹಿಳೆಯರು ಹೆಚ್ಚು ಮತ್ತು ಅವರಲ್ಲನೇಕರು ಸಮಾಜಸೇವೆಯ ದೀಕ್ಷೆ ತೊಟ್ಟವರು. ಮುಸಲ್ಮಾನರಲ್ಲಿ ಒಂದೆರಡು ಅವಿವಾಹಿತೆಯರು ಇದ್ದರೂ ಅವರು ಮದುವೆ ಮಾರುಕಟ್ಟೆಯಲ್ಲಿ ಯಾರೂ ಕೊಳ್ಳಲಾರದ ಅಂಗಹೀನೆಯರೋ, ಮಾನಸಿಕ ಅಸ್ವಸ್ಥರೋ ಆಗಿದ್ದಾರೆ. ಇವರೆಲ್ಲ ಒಂದು ರೀತಿಯಲ್ಲಿ ಖ್ಯಾತ ಲೇಖಕಿ ಕಮಲಾದಾಸ ಹೇಳಿದಂತೆ 'Unelaimed parcells.'

ಸಾಮಾಜಿಕ ಪರಿವರ್ತನೆಯ ಸ್ವರೂಪವಾಗಿಯೋ, ಕುರೂಪವಾಗಿಯೋ ಇಂದು ಅವಿವಾಹಿತ ಮಹಿಳೆಯರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಓರ್ವ ಮಹಿಳೆಯಂತೂ ಸಂದರ್ಶನದಲ್ಲಿ "ನಮ್ಮಿಂದಾಗಿ ದೇಶದ ಜನ ಸಂಖ್ಯೆಯಲ್ಲಿ ಕಡಿತವಾಗಿದೆ. ಆ ಕಾರಣಕ್ಕಾಗಿ ನಮ್ಮನ್ನು ಸರ್ಕಾರ ಗೌರವಿಸಬೇಕು. ಅದು ಬಿಟ್ಟು ಅವಿವಾಹಿತೆಯರಿಗೆ ವಿಧವೆಯರಿಗ ಸಿಗುವಷ್ಟು ಸೌಲಭ್ಯವೂ ಸಿಗದಂತೆ ಆಗಿದೆ" ಎಂದರು.

ಹೌದು, ಈ ಮಾತಿನಲ್ಲಿ ಸತ್ಯವಿದೆ. ಯಾರ್‍ಯಾರ ಹಂಗಿನಲ್ಲಿ ಬದುಕುತ್ತಿರುವ ಹಳ್ಳಿಯ ಅಶಕ್ತ ಅವಿವಾಹಿತೆಯರ ಬಾಳಿನ ಗೋಳು ನಿಜಕ್ಕೂ ಹೃದಯ ವಿದ್ರಾವಕವಾಗಿದೆ. ಅವರು ಸಾರ್ವಜನಿಕ ಸೊತ್ತಿನಂತೆ ಎಲ್ಲರ ಚಾಕರಿಗೂ ಬೇಕಾಗುತ್ತಾರೆ. ಆದರೆ ಸಾರ್ವಜನಿಕ ಪ್ರೀತಿ ಮತ್ತು ಕರ್ತವ್ಯಗಳಿಂದ ವಂಚಿತರಾಗಿರುತ್ತಾರೆ. ಭಾವನಾತ್ಮಕವಾಗಿ ಅವರು ಶೋಷಿತೆಯರು.

ಹಿಂದೂಗಳಲ್ಲಿ ಯಾವುದೇ ಜಾತಿ,ವರ್ಗಗಳ ವ್ಯತ್ಯಾಸವಿಲ್ಲದೆ ಎಲ್ಲ ಪಂಗಡಗಳಲ್ಲೂ ಅವಿವಾಹಿತೆಯರಿದ್ದಾರೆ. ಅದರಲ್ಲೂ ಬ್ರಾಹ್ಮಣ ಪಂಗಡದಲ್ಲಿ ಜಾತಕ ದೋಷ, ಬಡತನದ ಕಾರಣಗಳಿಗಾಗಿಯೇ ಉಳಿದವರು ಇದ್ದಾರೆ. ಇತರ ಜಾತಿಗಳಲ್ಲಿ ವರದಕ್ಷಿಣೆ ಪ್ರಧಾನ ಸಮಸ್ಯೆಯಾಗಿ ಉಳಿದಿದೆ. ಇನ್ನು ಕೆಲವು ಮನೆತನಗಳಲ್ಲಿ ಮುಂಡಾಸಿನವನಿಗಾಗಿ ಕಾಯುತ್ತಾ, ಮುಟ್ಟಾಳೆಯವನನ್ನು ತಿರಸ್ಕರಿಸುತ್ತಾ ಮದುವೆಯ ಕನಸು ಕಮರಿ ಹೋದವರಿದ್ದಾರೆ. ಇನ್ನೂ ವಿಚಿತ್ರವೆಂದರೆ ದುಡಿಯುವ ಹೆಣ್ಣು ಮಗಳ ಮದುವೆಯನ್ನು ಮುಂದೂಡುತ್ತಾ ಕೊನೆಗೆ ಯೋಗ್ಯ ವರ ಸಿಗಲಿಲ್ಲವೆಂಬ ನೆಪ ಹೇಳುವ ಹೆತ್ತವರಿಂದಾಗಿ ನೊಂದವರೂ ಇದ್ದಾರೆ. ಒಂದು ಮೂವತ್ತೈದು ವರ್ಷಗಳವರೆಗೂ ಎಲ್ಲಾ ಹೆಣ್ಣುಗಳಿಗೂ ಮದುವೆ ಕನಸುಗಳಿರುತ್ತವೆ. ಒಂದು ಮನೆಯಲ್ಲಂತೂ ಮೂವರು ಅಕ್ಕಂದಿರು ಒಬ್ಬ ತಮ್ಮ ಯಾರೂ ಮದುವೆಯಾಗಿಲ್ಲ. ತಮ್ಮನಿಗೂ ಮದುವೆಯ ವಯಸ್ಸು ದಾಟಿತು. ಜಾತಕ ಮತ್ತು ಕುಟುಂಬ ದೋಷವೇ ಕಾರಣವೆಂದು ತಿಳಿಸಿದರು. ಇತ್ತೀಚಿನ ವರ್ಷಗಳಲ್ಲಿ ಹಿಂದೆಂದೂ ಇಲ್ಲದಷ್ಟು ಜಾತಕ ನಂಬಿಕೆ ಎಲ್ಲಾ ಜಾತಿ ಪಂಗಡಗಳಲ್ಲಿ ಹೆಚ್ಚಿದೆ. ಇದು ವಿದ್ಯಾವಂತ ಮಧ್ಯಮ ವರ್ಗದಲ್ಲೇ ಹೆಚ್ಚು. ಅದೂ ಅಲ್ಲದೆ ಎಲ್ಲಾ ಜಾತಿ ಪಂಗಡಗಳ ಗಂಡುಸರಲ್ಲೂ ವರದಕ್ಷಿಣೆಯ ದಾಹ ಹೆಚ್ಚಿದೆ. ಕುಂಟನೋ, ಕುರುಡನೋ, ಯಾರಿಗಾದರೂ ಕಟ್ಟಿ ತಮ್ಮ ಜವಾಬ್ದಾರಿಯನ್ನು ಮುಗಿಸುವಂತಹ ಕಾಲವಿದಲ್ಲ. ಹೆಣ್ಣು ಮಕ್ಕಳಿಗೆ ವರನನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವೇ ಇಲ್ಲದ ಕಾಲದಲ್ಲಿ ಅವಿವಾಹಿತೆಯರು ಇರುವುದಾದರೂ ಹೇಗೆ? ಈಗ ಹಾಗಲ್ಲ. ಮಧ್ಯಮ ವರ್ಗದ ಕುಟುಂಬದಲ್ಲಿ ವರನನ್ನು ಆಯ್ಕೆ ಮಾಡುವ, ಹಿರಿಯರು ಆಯ್ಕೆ ಮಾಡಿದರೂ ಅದನ್ನು ತಿರಸ್ಕರಿಸುವ ಸ್ವಾತಂತ್ರ್ಯವನ್ನು ಪಡೆದಿದ್ದಾರೆ. ತಾನೇ ಆಯ್ಕೆ ಮಾಡುವ ಧೈರ್ಯವಿಲ್ಲದವರು ಮಾತ್ರ ಹಿರಿಯರು ಹೇಳಿದ ವರನಿಗೆ ಕೊರಳು ಕೊಡುತ್ತಾರೆ.

ಮದುವೆಯೇ ಹೆಣ್ಣಿನ ಜೀವನದ ಪರಮ ಉದ್ದೇಶವಲ್ಲವೆಂಬುದನ್ನು ಅರಿತುಕೊಂಡ ಒಂದು ವರ್ಗ ಸಾಧನೆಯ ಹಾದಿಯಲ್ಲಿ ಸಾಗುತ್ತಿದೆ. ಮದುವೆ ಆಗಿಲ್ಲ ಎಂಬ ಕೊರಗಿದ್ದವರು ಒಂದು ರೀತಿಯಲ್ಲಿ ಮಾನಸಿಕ ಅಸಮತೋಲನದಿಂದ ತಾವೂ ನರಳಿ ಇತರರನ್ನು ನರಳಿಸುತ್ತಾರೆ. ಮದುವೆ ಆಗದಿರುವುದೇ ಅವಮಾನವೆಂಬ ಭಾವದಿಂದ ಮನುಷ್ಯರ ಮೇಲೆ ನಂಬಿಕೆ ಕಳಕೊಂಡು ದ್ವೀಪದಂತೆ ಬಾಳುತ್ತಾರೆ. ಇಂತಹವರನ್ನು ಮಾತಾಡಿಸುವುದೇ ಕಡು ಕಷ್ಟ. ಹೀಗೆ ಈ ಎರಡು ರೀತಿಯ ಮನಸ್ಥಿತಿಯನ್ನು ಅವಿವಾಹಿತೆಯರಲ್ಲಿ ಕಾಣುತ್ತೇವೆ.

ಅವಿವಾಹಿತೆಯರ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಆಗಿರಬಹುದು. ಮಾನಸಿಕ ಸ್ಥೈರ್ಯ ಹಿಡಿದವರೂ ಇರಬಹುದು. ಆದರೆ ಅವರನ್ನು ಸಮಾಜ ನೋಡುವ ದೃಷ್ಟಿಕೋನದಲ್ಲಿ ಬದಲಾವಣೆ ಆಗಬೇಕಾಗಿದೆ. ಆರ್ಥಿಕವಾಗಿ ಸಬಲೆಯಾದವಳಾಗಲೀ ನಿರ್ಬಲೆಯಾದವಳಾಗಿರಲಿ ಅವಳೂ ಭಾವನೆಗಳುಳ್ಳ ಜೀವಿ ಎಂಬುದನ್ನು ಸಮಾಜದ ಎಲ್ಲರೂ ಗೌರವಿಸಿದರೆ ಅವಿವಾಹಿತೆಯರ ಎಷ್ಟೋ ತಲ್ಲಣಗಳು, ಸಮಸ್ಯೆಗಳು, ದುಃಖಗಳು ಮಾಯವಾದೀತು. ❑

ಮಹಿಳೆ ಎಷ್ಟು ಸುರಕ್ಷಿತಳು

ಕಮಲಾ ಹಂಪನಾ

ಇಪ್ಪತ್ತೊಂದನೆ ಶತಮಾನಕ್ಕೆ ಪದಾರ್ಪಣೆ ಮಾಡಿರುವ ಮಹಿಳೆ ಇಂದು ಕವಲುದಾರಿಯಲ್ಲಿ ನಿಂತಿದ್ದಾಳೆ. ಸಮಸ್ಯೆ-ಸಂತೋಷ. ಸವಾಲು-ಫಲಿತಫಲ, ಸಂಘರ್ಷ-ಸಮಾಧಾನ, ಸೋಲು-ಗೆಲುವು, ನೋವು-ನಲಿವು, ಪ್ರತಿಕೂಲ-ಅನುಕೂಲ ಇಂಥ ಅನೇಕ ಸಂದಿಗ್ಧ ದ್ವಂದ್ವಗಳಲ್ಲಿ, ಮಹಿಳೆ ಕತ್ತಿ ಅಲುಗಿನ ಮೇಲೆ ಹಿಂದೆ ನಡೆದಿದ್ದಾಳೆ, ಇಂದೂ ನಡೆಯುತ್ತಿದ್ದಾಳೆ. ದ್ವಿತೀಯ ದರ್ಜೆಯ ಪ್ರಜೆಯಾಗಿ ಪರಿಗಣಿತಳಾದ ಹೆಣ್ಣು ಸಾಗಿ ಬಂದ ದಾರಿ ಸುದೀರ್ಘವಾದುದು. ಅವಳು ಕತ್ತಲಲ್ಲಿ ನಡೆದದ್ದೇ ಹೆಚ್ಚು. ಅಲ್ಲೊಮ್ಮೆ ಮಬ್ಬುಗತ್ತಲು, ಇಲ್ಲೊಮ್ಮೆ ಕೊಂಚ ಬೆಳಕು, ಅವಳ ಬದುಕಿನಲ್ಲಿ ಹಾದು ಹೋದದ್ದುಂಟು. ಆ ಬೆಳಕು ಅವಳ ಕನಸಿನ, ಆದರೆ ವಾಸ್ತವಿಕ ಬದುಕಿಗೆ ಕೊಂಡೊಯ್ಯಲು ಸಾಧ್ಯವಾಗಲಿಲ್ಲ. ಪುರುಷನಿಗೆ ಯಾವುದು ಸಹಜ ವಾಸ್ತವಿಕ ಬದುಕಾಗಿ ಸಲೀಸಾಗಿ ಸುಗಮವಾಗಿ ದಕ್ಕಿದೆಯೋ ಅದು ಹೆಣ್ಣಿಗೆ ಕನಸಿನಲ್ಲಿ ಇನ್ನೂ ಕಾಡುವ, ಹಂಬಲಿಸುವ ವಿಷಯವಾಗಿದೆ. ಹೋರಾಟದಿಂದ ಮಾತ್ರ ಮಹಿಳೆ ತನ್ನ ಕನಸುಗಳಿಗೆ ಕೈಕಾಲು ಮೂಡಿಸಿ, ಕಣ್ಣು-ಮೂಗು ತಿದ್ದಿ ಆಕಾರಕೊಟ್ಟು ಜೀವ ತುಂಬಿ ಸಾಕಾರಗೊಳಿಸಿಕೊಳ್ಳಬೇಕಿದೆ.

ಮಹಿಳೆಯ ನಿರಂತರ ಹೋರಾಟದ ಫಲವಾಗಿ ಈ ಶತಮಾನದ ಹೊಸ್ತಿಲಲ್ಲಿ ನಿಂತು ಹಿಂದಿರುಗಿ ನೋಡಿದಾಗ ಆರ್ಥಿಕ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಶೈಕ್ಷಣಿಕವಾಗಿ ಸ್ವಲ್ಪ ಮುನ್ನಡೆದಿದ್ದಾಳೆ ಎನ್ನುವ ಸಮಾಧಾನ ದೊರೆಯುತ್ತದೆ. ಆದರೆ ಅದು ಸಂತೃಪ್ತಿಯ ಸಮಾಧಾನ ವಲ್ಲ, ಮಹಿಳೆಯ ಹೋರಾಟ ಇನ್ನೂ ತೀವ್ರತರವಾಗಬೇಕಿದೆ. ಈಗ ಆಗಿರುವ ಸ್ವಲ್ಪ ಮುನ್ನಡೆಯನ್ನು ನಾವು ನೋಡಬಹುದಾಗಿದೆ, ಮೌಲ್ಯ ಮಾಪನ ಮಾಡಬಹುದಾಗಿದೆ.

ಆದರೆ ಮಹಿಳೆ ಸಂಪೂರ್ಣ ಸೋತಿರುವುದು, ಆಕೆ ದಿನನಿತ್ಯ ಅನುಭವಿಸುವ ಲೈಂಗಿಕ ಕಿರುಕುಳಗಳಲ್ಲಿ. ಹೇಳಲಾರದ, ಹೇಳಬಾರದ, ಅನುಭವಿಸಲಾರದ, 'ಮುಸುಕಿನೊಳಗಣ ಗುದ್ದು' ಆಗಿ ಕಾಡುವ ಲೈಂಗಿಕ ನೋವುಗಳು ಅವಳಿಗೆ ಅಪಾರ. ಬಡತನದ ಕಷ್ಟ ನಿವಾರಣೆಗಾಗಿ, ಆರ್ಥಿಕ ಸ್ವಾವಲಂಬನೆಗಾಗಿ ಹೆಣ್ಣು ಇಂದು ಒಳ-ಹೊರಗೆ ದುಡಿಯುವುದು ಅನಿವಾರ್ಯವಾಗಿದೆ. ಅಲ್ಲಲ್ಲಿ ನಡೆಯುವ ಪುರುಷನ ದಬ್ಬಾಳಿಕೆಯ ಲೈಂಗಿಕ ನೋವುಗಳನ್ನು ಹೇಳಿಕೊಳ್ಳಲಾಗದ ಇಕ್ಕಟ್ಟಿನ ಇಕ್ಕುಳಗಳಲ್ಲಿ ಹೆಣ್ಣು ಸಿಲುಕಿ ನರಳುತ್ತಿರುತ್ತಾಳೆ.

ಕಸ-ಮುಸುರೆಯ ಮನೆ ಕೆಲಸಕ್ಕೆ ಬರುವ ಹದಿ-ಹರೆಯದ ಕೆಲವು ಹೆಣ್ಣುಮಕ್ಕಳ ಪಾಡು ನಾಯಿಪಾಡು. ಮನೆಯಲ್ಲಿರುವ ಅಪ್ಪ-ಮಗ ಇಬ್ಬರಿಗೂ, ಅಳಿಯನಿದ್ದರೆ ಅವನಿಗೂ ಅವಳು ಈಡಾಗಬೇಕಾಗುತ್ತದೆ. ಅದಕ್ಕೂ ಮಿಗಿಲಾಗಿ, ಸಿರಿವಂತರ ಮನೆಯ ಪುರುಷ ಕೆಲಸಗಾರರಿಂದಲೂ ಆಕೆ ಪಾರಾಗುವುದು ಕಷ್ಟ. ಅಡಿಗೆ ಹುಡುಗನೊ, ಮನೆಯಲ್ಲಿ ಓದಲು ತಂಗಿರುವ ಸಂಬಂಧಿ ಹುಡುಗನೋ, ಕಾರಿನ ಡ್ರೈವರ್, ತೋಟದ ಮಾಲಿ-ಇಷ್ಟೆಲ್ಲ ಜನರ ಕಣ್ಣು ಆ ಹುಡುಗಿಯ ಮೇಲೆ, ಕಿವಿಯ ಬಳಿ ಉಸುರುವ, ಲೈಂಗಿಕತೆಯನ್ನು ಪ್ರಚೋದಿಸುವ ಅಶ್ಲೀಲ ಮಾತುಗಳು ಒಂದು ಕಡೆಯಾದರೆ, ನೋಟದಲ್ಲೇ ಇರಿಯುವ, ಸಮಯ ದೊರೆತಾಗಲೆಲ್ಲಾ ಮೈಮೇಲೆ ಹರಿದಾಡುವ ಅವರ ಕೈಗಳಿಂದ ಪಾರಾಗುವುದು ಕಷ್ಟವೆ. ಕಳ್ಳಬೆಕ್ಕಿನಂತೆ ಹೊಂಚುವ ಈ ಖದೀಮರು ಏಕಾಂಗಿಯಾಗಿ ಆ ಹುಡುಗಿ ಸಿಕ್ಕಿದರೆ ತಮ್ಮ ಕಾಮ ಪಿಪಾಸೆಯನ್ನು ತೀರಿಸಿಕೊಳ್ಳದೆ ಬಿಡರು.

ಕಟ್ಟಡಗಳನ್ನು ಕಟ್ಟುವಲ್ಲಿ ಜಲ್ಲಿ, ಮಣ್ಣು, ಇಟ್ಟಿಗೆ ಹೊರುವ ಕೂಲಿ ಕೆಲಸದ ಹೆಣ್ಣುಮಕ್ಕಳು, ಹೆಂಗಸರು, ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕ ಮಹಿಳೆಯರು, ಆಫೀಸುಗಳಲ್ಲಿ ಕೆಲಸಮಾಡುವ

ಹೆಂಗಳೆಯರು, ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರು – ಇಲ್ಲೆಲ್ಲ ಪುರುಷ-ಮಹಿಳೆ ಒಟ್ಟಿಗೆ ದುಡಿಯುವ ಸನ್ನಿವೇಶಗಳೇ ಹೆಚ್ಚಾಗಿದ್ದು ಮಹಿಳೆ ಸುಲಭದಲ್ಲಿ ಪುರುಷನ ದಾಹಕ್ಕೆ ಒಳಗಾಗುವ ಸಾಧ್ಯತೆಗಳು ಅಧಿಕವಾಗಿವೆ. ಮಠ-ಮಂಟಪ, ಗುಡಿ-ಗುಂಡಾರಗಳಲ್ಲಿ ದುಡಿಯುವ ಮಹಿಳೆಯರಲ್ಲಿ ಕೆಲವರು ಸ್ವಾಮಿಗಳ ಕೃಪೆಗೆ ಮತ್ತೆ ಕೆಲವರು ಪೂಜಾರಿ-ಅರ್ಚಕರ ಕರೆಗೆ ಓಗೊಟ್ಟು ದೈಹಿಕ ಹಿಂಸೆಗೆ, ಲೈಂಗಿಕ ಕಿರುಕುಳಗಳಿಗೆ ಗುರಿಯಾಗುವವರೂ ಇದ್ದಾರೆ.

ಒಬ್ಬಳೇ ಹೆಣ್ಣು ಸಾರ್ವಜನಿಕ ಸ್ಥಳಗಳಲ್ಲಿ ಓಡಾಡುವುದೇ ಕಷ್ಟ. ಉದ್ಯಾನವನ, ಸಂತೆ, ಜಾತ್ರೆ, ವಸ್ತು ಪ್ರದರ್ಶನ, ಸಿನಿಮಾ ಮುಂತಾದ ಸ್ಥಳಗಳಲ್ಲಿ ಒಂಟಿ ಹೆಣ್ಣಿನ ಓಡಾಟ ಕಷ್ಟಕರ. ಬಸ್ಸು-ರೈಲಿನ ರಾತ್ರಿ ಪ್ರಯಾಣಗಳಲ್ಲಿ ಒಂಟಿ ಹೆಣ್ಣಿದ್ದರಂತೂ ಪಕ್ಕದ ಪುರುಷನಿಗೆ ಮೈಯೆಲ್ಲಾ ಕೈಯಾಗುತ್ತದೆ; ಸ್ಪರ್ಶ ಸುಖದಿಂದ ಪುಳಕಿತನಾಗುತ್ತಾನೆ. ಆಗ ಹೆಣ್ಣು ಗಂಡಿನ ಈ ದುರುಳತನಕ್ಕೆ ಜುಗುಪ್ಸೆಪಟ್ಟು, ಗೌರವಯುತವಾಗಿಯೇ ಸಿಟ್ಟಿಗೆದ್ದರೂ, ಸಾಮಾನ್ಯ ಅಂಥ ಸ್ಥಳಗಳಲ್ಲೆಲ್ಲಾ ಪುರುಷರ ಸಂಖ್ಯೆಯೇ ಅಧಿಕವಾಗಿರುವುದರಿಂದ ಇವಳೊಬ್ಬಳ ಧ್ವನಿ ಕ್ಷೀಣಿಸಿ ಹೋಗುತ್ತದೆ. ಜೊತೆಗೆ ಪುರುಷರ ಕೆಟ್ಟಮಾತುಗಳಿಗೂ ಗುರಿಯಾಗಬೇಕಾಗುತ್ತದೆ. ಕಂಡಕ್ಟರ್ ಹಾಗೂ ಡ್ರೈವರ್‌ಗಳೂ ಅದೇ ವರ್ಗದವರಾದುದರಿಂದ ಆ ಸಮಯದಲ್ಲಿ ಅವರು ಸ್ಥಿತಪ್ರಜ್ಞರಾಗಿ ತಟಸ್ಥ ಭೂಮಿಕೆಯಲ್ಲಿ ನಿಲ್ಲುತ್ತಾರೆ. ಹೆಣ್ಣು ಸೋತು ನಿಸ್ಸಹಾಯಕಳಾಗುತ್ತಾಳೆ.

ಜೈಲಿನಲ್ಲಿ ನಾಲ್ಕು ಗೋಡೆಗಳ ಮಧ್ಯದಲ್ಲಿರುವ ಮಹಿಳಾ ಕೈದಿಗಳ ಪಾಡೂ ಈ ಕಿರುಕುಳಗಳಿಂದ ಮುಕ್ತವಾಗಿಲ್ಲ. ರಕ್ಷಿಸಬೇಕಾದ ಕೈಗಳೇ ಭಕ್ಷಿಸುತ್ತವೆ. ಆಸ್ಪತ್ರೆಗಳಲ್ಲಿ ದಾದಿಯರ ಪಾಡು, ಮಹಿಳಾ ವೈದ್ಯರ ಕಷ್ಟ ಅವರಿಗೇ ಗೊತ್ತು. ಇನ್ನು ಸಿನಿಮಾ, ನಾಟಕ, ಟಿ.ವಿ. ಧಾರಾವಾಹಿ, ಜಾಹೀರಾತುಗಳಲ್ಲಿ, ಪತ್ರಿಕೆಗಳಲ್ಲಿ ಹೆಣ್ಣನ್ನು ಸಾಧ್ಯವಾದಷ್ಟೂ ನಗ್ನತೆಯ ತುದಿಗೆ ಕೊಂಡೊಯ್ಯುವುದೇ ಅವುಗಳ ಉದ್ದೇಶವೆಂಬಂತೆ ಚಿತ್ರಿಸಲಾಗುತ್ತದೆ. ಹೆಣ್ಣಿನ ಲೈಂಗಿಕ ಹಿಂಸಾಚಾರವಿಲ್ಲದ ಒಂದು ಚಲನಚಿತ್ರ ಕೊನೆಗೊಳ್ಳುವುದು ತುಂಬ ಅಪರೂಪ. ಸಿಗರೇಟಿನ ಜಾಹೀರಾತು ಗಂಡಸು ತೊಡುವ ಕಾಚ ಜಾಹೀರಾತಿಗೂ ಮಿನಿ ಉಡುಗೆಯ ಹೆಣ್ಣೇ ಬೇಕು. ಈ ಜಗತ್ತಿನಲ್ಲಿ ಅವಳೊಂದು ಮಾರಾಟದ ವಸ್ತುವಾಗಿದ್ದಾಳೆ.

ಇಲ್ಲಿಯವರೆಗೂ ಹೇಳಿದ ಕಿರುಕುಳಗಳೆಲ್ಲ ಸಮಾಜದ ಸಾಮಾನ್ಯ ಅಸಮಾನ್ಯ ಹೆಣ್ಣುಗಳನ್ನು ಕುರಿತದ್ದಾಯಿತು. ಇನ್ನು ವೇಶ್ಯಾವಾಟಿಕೆಗೆ ಪ್ರವೇಶಿಸದೆ ಇರುವುದೇ ಒಳ್ಳೆಯದು. ಲೈಸನ್ಸ್ ಪಡೆದು ವೃತ್ತಿ ನಡೆಸುವ ಆ ಮಹಿಳೆಯರ ಪ್ರಪಂಚ, ಪುರುಷ ಭುವಿಯಲ್ಲಿ ಸೃಷ್ಟಿಸಿರುವ ಅದೊಂದು ನರಕ. ಈ ವೇಶ್ಯೆಗೆ ಗಣನೆಗೆ ಸಿಗದ ಲೈಂಗಿಕ ನೋವುಗಳು ಅಪಾರ. ಬೆತ್ತಲ ಸೇವೆ, ದೇವದಾಸಿ ಪದ್ಧತಿ-ಇವೆಲ್ಲ ಪುರುಷ ತನ್ನ ಲೈಂಗಿಕ ತೃಪ್ತಿಗಾಗಿ ಮಾಡಿಕೊಂಡ ಹುನ್ನಾರಗಳು. ಮುಗ್ಧ ಹೆಣ್ಣುಗಳು ದೇವರು ಧರ್ಮದ ಹೆಸರಿನಲ್ಲಿ ಬಲಿಪಶುಗಳಾಗಿದ್ದಾರೆ.

ಸಿರಿವಂತ, ಆಚಾರವಂತ ಮೇಲ್ಜಾತಿಯ ಮನೆಗಳಲ್ಲಿಯೂ ಈ ಕಿರುಕುಳಕ್ಕೆ ಕೊರತೆ ಏನೂ ಇಲ್ಲ. ಮನೆಯಲ್ಲಿಯೇ ಇರುವ ಅಸಹಾಯಕ ಹೆಣ್ಣುಗಳನ್ನು ತಮ್ಮ ತೃಪ್ತಿಗೆ ಬಳಸಿಕೊಳ್ಳುವ ಮನೆಯ ಗಂಡಸರೇ ದುಶ್ಶಾಸನ ರೂಪಿಗಳು. ತಮ್ಮ ಮನೆ ಹಾಗೂ ಹೊಲ, ಗದ್ದೆ, ತೋಟ, ಕಾಫಿ, ಟೀ, ಏಲಕ್ಕಿ, ಎಸ್ಟೇಟ್‌ಗಳಲ್ಲಿ ದುಡಿಯುವ ಹೆಣ್ಣುಗಳಿಗೆ ಹಳ್ಳಿಯ ಸಿರಿವಂತ ಗೌಡ, ಶ್ಯಾನುಭೋಗ, ಕುಲಕರ್ಣಿ ಎಸ್ಟೇಟಿನ ಮಾಲಿಕರು-ಹೀಗೆ ಇವರೇ ಕೀಚಕರಾಗಿರುತ್ತಾರೆ. ಜೊತೆಯಲ್ಲಿಯೇ ದುಡಿಯುವ ಗಂಡು ರೂಪಿ ಕಾಮುಕರೂ ಇರುತ್ತಾರೆ. ಅನಾಥಾಶ್ರಮದ ಹೆಣ್ಣುಗಳನ್ನು ಈ ಕಿರುಕುಳಗಳಿಂದ ರಕ್ಷಿಸುವವರು ಯರು!

ಅಮೆರಿಕ, ಕೆನಡಾ, ಗ್ರೇಟ್ ಬ್ರಿಟನ್ ಹಾಗೂ ಯೂರೋಪಿನ ಅನೇಕ ದೇಶಗಳನ್ನು ಸುತ್ತಿ ಬಂದಿರುವ ನನಗೆ ಅಲ್ಲಿನ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಘೋರ. ಅತ್ಯಾಚಾರ ಭಯಂಕರ. ಭೀಭತ್ಸ. ಇದರ ವಿವರಕ್ಕೆ ಪ್ರತ್ಯೇಕ ಲೇಖನವೇ ಬೇಕಾಗುತ್ತದೆ

ಈ ಕಿರುಕುಳಗಳಿಂದ ಸ್ವಲ್ಪವಾದರೂ ಮಹಿಳೆ ಹೊರಬರಲು ಸಾಧ್ಯವಾಗಿದ್ದರೆ, ಅದು ಮಹಿಳಾ ಸಂಘಟನೆಗಳ ನಿರಂತರ ಹೋರಾಟದಿಂದ. ಸರ್ಕಾರ, ಕಾನೂನು ಮಹಿಳೆಯರ ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಪ್ರಯತ್ನ ಶೀಲವಾಗಿದೆ. 'ಕಾನೂನು ಕೆಲವೊಮ್ಮೆ ಕುರುಡ' ಎನ್ನುವಂತೆ, ಶೀಲ ಕಳೆದುಕೊಂಡ ಹೆಣ್ಣು, ಸಾಕ್ಷಿ–ಪುರಾವೆಗಳನ್ನು ಕೋರ್ಟಿಗೆ ಹಾಜರುಪಡಿಸಬೇಕಂತೆ, ಇದೆಂಥ ನ್ಯಾಯ! ಈ ರೀತಿಯ ಕಾನೂನುಗಳಿಂದ ಹೆಣ್ಣಿಗೆ ಅನುಕೂಲವಾಗುವ ಬದಲು ಅನಾನುಕೂಲವೇ ಜಾಸ್ತಿ. ಬೇರೆ ರೀತಿಯ ಶೋಷಣೆಗಳಿಗೆ ಹೋಲಿಸಿದರೆ ಲೈಂಗಿಕ ಶೋಷಣೆ, ಕಿರುಕುಳಗಳು ಮಹಿಳೆಯರ ಬದುಕನ್ನು ಹೆಚ್ಚು ದುರ್ಭರಗೊಳಿಸಿವೆ. ಈ ಶೋಷಣೆ, ಬೇರೆಲ್ಲ ಶೋಷಣೆಗಳಿಗಿಂತಾ ಭಿನ್ನವಾಗಿರುವುದರಿಂದ ಮಹಿಳೆಯರಿಗೆ ಪ್ರತ್ಯೇಕ ವಿಶೇಷ ರಕ್ಷಣೆ, ಸೂಕ್ತ ಜೀವನ ಭದ್ರತೆ ಬಹಳ ಮುಖ್ಯ.

ಈ ಎಲ್ಲ ಅಭಿಪ್ರಾಯಗಳೂ ಮಹಿಳೆಯರ ಪರವಾಗಿವೆ, ಏಕಮುಖವಾಗಿವೆ; ಪುರುಷನನ್ನು ಮಾತ್ರ ನಿಂದಿಸಲಾಗಿದೆ. ಈ ಲೈಂಗಿಕ ಕಿರುಕುಳಗಳಲ್ಲಿ ಹೆಣ್ಣಿನ ಪಾತ್ರ ಏನೂ ಇಲ್ಲವೆ? ಅನೇಕ ಸಂದರ್ಭಗಳಲ್ಲಿ ಆಕೆ ಪುರುಷನನ್ನು ಪ್ರಚೋದಿಸುತ್ತಾಳೆ, ಪ್ರೇರೇಪಿಸುತ್ತಾಳೆ ಅಲ್ಲವೆ? ಎನ್ನುವ ಪ್ರಶ್ನೆ ಕೆಲವರಲ್ಲಿ ಉದ್ಭವಿಸಬಹುದು. ಹೀಗೆ ಪ್ರೇರೇಪಿಸುವ, ಪ್ರಚೋದಿಸುವ ಹೆಣ್ಣು, ಲೈಂಗಿಕ ಕ್ರಿಯೆಗೆ ಸಹಜವಾಗಿಯೇ ತನ್ನ ಒಲವು, ಒಪ್ಪಿಗೆಯನ್ನು ತೋರಿಸುತ್ತಾಳೆ. ಈ ಕ್ರಿಯೆ ನೈತಿಕವಾಗಬಹುದು ಕೆಲವೊಮ್ಮೆ ಅನೈತಿಕವೂ ಆಗಬಹುದು. ಆದರೂ ಈ ಕ್ರಿಯೆಗೆ ಹೆಣ್ಣಿನ ಒಪ್ಪಿಗೆ ಇರುವುದರಿಂದ ಅದು ಕಿರುಕುಳ ಅಥವಾ ಅತ್ಯಾಚಾರ ಆಗುವುದಿಲ್ಲ. ಹೆಣ್ಣಿನ ಪ್ರತಿಭಟನೆ ಇದ್ದು, ಬಲವಂತ ಪಡಿಸಿ ಗಂಡು ಸುಖಿಸಿದಾಗ ಮಾತ್ರ ಅದು ಕಿರುಕುಳವಾಗುತ್ತದೆ. ಗಂಡನೇ ಆಗಬಹುದು, ಹೆಂಡತಿ ಒಲವಿನಿಂದ ಈ ಕ್ರಿಯೆಗೆ ಒಪ್ಪಿದಾಗ ಮಾತ್ರ ಅದು ಆನಂದದ ಪ್ರಣಯಾನುಭವವಾಗುತ್ತದೆ. ಹೆಂಡತಿಯ ಒಪ್ಪಿಗೆಯಿಲ್ಲದೆ ನಡೆಯುವ ಈ ಕ್ರಿಯೆಯೂ ಒಂದು ರೀತಿಯ ಪರೋಕ್ಷ ಕಿರುಕುಳ ಅಥವಾ ಅತ್ಯಾಚಾರವೇ ಆದೀತು.

ಈ ನನ್ನ ಲೇಖನದ ಅಭಿಪ್ರಾಯಗಳು ಸಾರ್ವತ್ರೀಕರಣ ಅಭಿಪ್ರಾಯಗಳೂ ಅಲ್ಲ, ಸಾಧಾರಣೀಕರಣ ಅನಿಸಿಕೆಗಳೂ ಅಲ್ಲ. ಆದುದರಿಂದ ಇವು ಕೆಲವು ಸಂದರ್ಭಗಳ, ಕೆಲವು ಘಟನೆಗಳ ವಿವರಗಳು ಅಷ್ಟೆ! ಎಲ್ಲ ಸಂದರ್ಭಗಳಲ್ಲಿಯೂ, ಎಲ್ಲ ಕಡೆಗಳಲ್ಲಿಯೂ ಲೈಂಗಿಕ ಕಿರುಕುಳಗಳೇ ತುಂಬಿದ್ದರೆ ಹೆಣ್ಣು ಹೇಗೆ ಜೀವಿಸುತ್ತಿದ್ದಳು? ಮಹಿಳೆ ಹೇಗೆ ಬದುಕಲು ಸಾಧ್ಯ? ಮಹಿಳೆಯರ ಬಗೆಗೆ, ರಕ್ಷಣೆಯ ರೀತಿಗೆ ಹೆಚ್ಚಿನ ಆದ್ಯತೆ ಬೇಕಿದೆ.

❑

ಪ್ರಜಾಸಾಹಿತ್ಯದ ನಾಲ್ಕು ಸಂಚಿಕೆಗಳೂ ಚಿಂತನೆಗೆ ಎಡೆಮಾಡುವ ಪ್ರಬುದ್ಧ ಲೇಖನಗಳಿಂದ ಕೂಡಿವೆ. ಕನ್ನಡ ಬಗೆಗಿನ ನಿಮ್ಮ ತೀಕ್ಷ್ಣ ಕಾಳಜಿ ಹೊಗೆಯಾಡದೇ ಇಷ್ಟು ದಿನ ಅದೆಲ್ಲಿತ್ತು? ಸಂಪಾದಕೀಯ ಕನ್ನಡಮುಖಿಯಾಗಿರುವುದು ಕನ್ನಡಿಗರ ಆಲಸ್ಯದ ಪೊರೆ ಕಳಚುವುದಕ್ಕಾಗಿಯೇ ಹೂಡಿರುವ ಅಸ್ತ್ರವೇನೋ ಎಂಬಂತೆ ಕಾಣುತ್ತಿದೆ. ನಿಮ್ಮ ಕನ್ನಡಾಭಿಮಾನಕ್ಕೆ, ಅದನ್ನು ಬಾಯಲ್ಲಿ ಹೇಳದೇ ಕನ್ನಡಿಗರಿಗೆ ಕನ್ನಡದ ಪ್ರಸ್ತುತತೆಯ ಬಗ್ಗೆ ನಿಮ್ಮ ಅನುಭವ ಜ್ಞಾನಸಾರವನ್ನೆಲ್ಲಾ ಯಥಾವತ್ತಾಗಿ ನಿರೂಪಿಸುತ್ತಿರುವ ಕನ್ನಡಪರ ಕಾಳಜಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಶುಭವಾಗಲಿ.

ಮಾಗಡಿ ಗಿರೀಶ

ಕಾಲಸೆಂಟರ್ ನೋಟ

ಸಾತವಲ್ಲಿ ಜಾಗೃತಿಪ್ರಿಯ

'ನಿಮ್ಮ ಬಗ್ಗೆ ಎರಡು ನಿಮಿಷ ಮಾತನಾಡಿ'
'ನೀವು engineering ಓದಿ ನಮ್ಮ ಕಂಪೆನಿ ಏಕೆ ಸೇರುತ್ತಿದ್ದೀರಿ?'
'ನಿಮ್ಮ ಮೊದಲ ಕಂಪೆನಿಯನ್ನು ಏಕೆ ಬಿಟ್ಟರಿ?'
'ನಿಮಗೆ ಎಷ್ಟು ಸಂಬಳದ ನಿರೀಕ್ಷೆಯಿದೆ?'
'ನೀವು ಎಷ್ಟು ಬೇಗ ನಮ್ಮ ಕಂಪೆನಿ ಸೇರಲು ಸಾಧ್ಯ?'

ನಿಮಗೆ ಇಷ್ಟಂತೂ ಅರ್ಥವಾಗಿರಬೇಕು. ಈ ಪ್ರಶ್ನೆಗಳನ್ನು ವಿದ್ಯಾಸಂಸ್ಥೆಯ 'ಗೌರವಸ್ಥ' ವ್ಯಕ್ತಿಯಂತೂ ಕೇಳ್ತಿಲ್ಲ.

ಇದು ಕಾಲಸೆಂಟರ್ interview. ನಾನೀಗ ನಿಮಗೆ ಹೇಳ್ಕಕ್ ಹೊರಟಿರೋದು ಕಾಲ್‌ಸೆಂಟರ್ ಕತೇ.

ಟ್ರಿಣ್, ಟ್ರಿಣ್..... ಫೋನಿನ ಸದ್ದಾಗುತ್ತೆ.
ಜೋರಾಗಿ ಎಲ್ಲರಿಗೂ ಕೇಳಿಸಬೇಕಿಲ್ಲ.
Reciver ಎತ್ತಬೇಕಿಲ್ಲ.
'ಹಲೋ' ಅನ್ನೋ ಹಾಗೇ ಇಲ್ಲ.
'ಛೇ' ಈ ಫೋನಿಂದೊಂದ್ ಗೋಳು ಅಂತ ಉತ್ತರಿಸದೆ ಇದ್ರೆ, ಮಹಾಪರಾಧ!
ಆ ಕಡೆ ಮಾತಾಡೋರು ನಮ್ ದೇಶದೌರೂ ಅಲ್ಲ.
ಆ ಫೋನು ಬರೋದೋ ರಾತ್ರಿ (ಬೆಳಗಿನ ಜಾಂವ) ೨.೩೦ನಲ್ಲಿ.
೨.೩೦ ಆದ್ರೂ ಝಗಝಗಿಸೋ ದೀಪಗಳು.

ಫೋನಿಗೆ ಉತ್ತರಿಸಿದೋನು ಠಾಕುಠೀಕಾಗಿ western Formal ದಿರಿಸುಧರಿಸಿರೋ ೨೪ರ ಹುಡುಗ.

ಕಾಲ್‌ಸೆಂಟರ್ ಅಂದ್ರೆ ವಿದೇಶದ ಸಂಸ್ಥೆಯೊಂದು ನೀಡಿದ Contract ನಿಂದಾಗಿ (ಇದಕ್ಕೆ outsourcing ಹೊರಗುತ್ತಿಗೆ ಅಂತಾರೆ) ನಾವು ಆ ದೇಶದ ಜನಗಳ ಕರೆಗಳನ್ನು ಸ್ವೀಕರಿಸಿ ಗ್ರಾಹಕ ಸೇವೆಯನ್ನು ಪೂರೈಸುವುದು. BTO ಅಂದ್ರೆ ಬಿಸಿನೆಸ್ ಟ್ರಾನ್ಸ್‌ಫರ್‌ಮೇಷನ್ ಔಟ್‌ಸೋರ್ಸಿಂಗ್‌ನಲ್ಲಿ Data processing ಮತ್ತು Voice process ಅಂದ್ರೆ ಧ್ವನಿ ಆಧಾರಿತ ವಿಭಾಗಗಳೆರಡೂ ಇರುತ್ತವೆ. ಈ ಧ್ವನಿ ಆಧಾರಿತವಾದ ವಿಭಾಗದಲ್ಲಿ ರಾತ್ರಿ ಕೆಲಸ ಏಕೆಂದ್ರೆ ಗುತ್ತಿಗೆ ಪಡೆದ ದೇಶಗಳಿಗಿಂತ ನಾವು ಸಮಯದಲ್ಲಿ ಮುಂದಿರುತ್ತೇವೆ. ಉದಾಹರಣೆ, ಅಮೆರಿಕಕ್ಕೂ ನಮಗೂ ಸುಮಾರು ಹನ್ನೆರಡು ಗಂಟೆಗಳ ವ್ಯತ್ಯಾಸ. ಅಲ್ಲಿ ಇಂದು ಬೆಳಿಗ್ಗೆ ಹತ್ತಾದರೆ ಇಲ್ಲಿ ರಾತ್ರಿ ಹತ್ತು. ಇಂಗ್ಲೆಂಡಿ ನಮಗೂ ಸುಮಾರು ೪-೫ ಗಂಟೆ ವ್ಯತ್ಯಾಸ. ಇಂಗ್ಲೆಂಡಿನಿಂದಲೋ ಅಮೆರಿಕದಿಂದಲೋ ಗ್ರಾಹಕ ಒಂದು ಸಂಖ್ಯೆಗೆ ಕರೆ ಮಾಡಿದಾಗ ಅದು ಭಾರತಕ್ಕೆ ಬರುತ್ತೆ. ಅದು ಹೇಗಂದ್ರೆ ಇಂಗ್ಲೆಂಡಿನ ಗ್ರಾಹಕ ಕರೆ ಮಾಡುವಾಗ – ಬೆಂಗಳೂರು, ಚೆನ್ನೈ, ಮುಂಬೈನ ಸ್ಥಳೀಯ ದೇಶೀಯ Lineಗಳು ಇಂಗ್ಲೆಂಡಿನ ಸ್ಥಳೀಯ Lineಗಳಿಗೆ ಜೋಡಿಸಲ್ಪಟ್ಟಿರುತ್ತವೆ. ಆ ಕರೆಗೆ ಗ್ರಾಹಕನಿಗೆ ಸ್ಥಳೀಯ ಕರೆಯ ವೆಚ್ಚವೇ ಆಗುತ್ತದೆ. ಹೀಗೆ ರವಾನೆ ಮಾಡಲು ಧ್ವನಿಯನ್ನು ಶೇಕಡ ೭೦ರಷ್ಟು ಮತ್ತು dataವನ್ನು ಶೇಕಡ ೬೦ರಷ್ಟು ಅಡಕ ಮಾಡಲಾಗುವುದು.

ಇಂಗ್ಲಿಷ್ ಮಾತಾಡ್ತೋಕ್ ಬಂದು ಯಾವ ಪಾಳಿಯಾದ್ರೂ ಕೆಲಸ ಮಾಡ್ತೀವಿ ಅನ್ನೋರನ್ನ ಕಾಲ್‌ಸೆಂಟರ್‌ನಲ್ಲಿ interviewಗೆ ಕರೀತಾರೆ. ಮೊದಲು HR round ಅಂದ್ರೆ human resource ವಿಭಾಗದವರು ಒಂದು ಹಂತದ ಸಂದರ್ಶನ ಮಾಡ್ತಾರೆ. ನಂತರ Operations (ಇದೇ ಕಾಲ್‌ಸೆಂಟರ್‌ನಲ್ಲಿ ಬಹಳ ಮುಖ್ಯವಾದ, ಪ್ರಧಾನ ವಿಭಾಗ) ನವರು ಮುಂದಿನ ಹಂತದ ಸಂದರ್ಶನ ಮಾಡ್ತಾರೆ. ನಿಮ್ಮೊಡನೆ ಮಾತಾಡ್ತಾ ಆ ಕೆಲಸಕ್ಕೆ ನೀವು ತಕ್ಕವರೇ ಅಂತ ನಿರ್ಧಾರ ಮಾಡ್ತಾರೆ. ಉದಾಹರಣೆ : ಅದು Collections ವಿಭಾಗ ಆಗಿದ್ರೆ ಹೆಚ್ಚು ಧೃಡವಾಗಿ ಮಾತಾಡುವವರಾಗಬೇಕು. ನಂತರ HR ವಿಭಾಗದವರೊಡನೆ ಮತ್ತೊಂದು ಸಂದರ್ಶನದಲ್ಲಿ ಸಂಬಳದ ಬಗ್ಗೆ ಚರ್ಚೆ ನಡೆಯುತ್ತದೆ. ನಿಮಗೆ ಎಷ್ಟು ಕಾಲ ಕೆಲಸದ ಅನುಭವ, ಯಾವ ರೀತಿಯ industryಯಲ್ಲಿ ನಿಮಗೆ ಅನುಭವವಿದೆ ಅನ್ನೋದರ ಮೇಲೆ ಇದರ ಇತ್ಯರ್ಥ ಆಗುತ್ತದೆ.

ಇದೆಲ್ಲಾ ಆದ ನಂತರ ತರಬೇತಿ ಶುರುವಾಗುತ್ತೆ. ಇದು ಸುಮಾರು ಒಂದರಿಂದ ಎರಡು ತಿಂಗಳ ಕಾಲ. ಮೊದಲೇ ಇಂಗ್ಲಿಷ್ ಬರುತ್ತಿದ್ದರೂ ಸಹ ಇನ್ನೂ ದೀರ್ಘವಾದ ತರಬೇತಿ ಕೊಡ್ತಾರೆ. ಕೆಲವು (ಹಲವು) ಶಬ್ದಗಳನ್ನು ನಾವು ನಮ್ ಭಾಷೆ ತರಾನೇ ಬಳಗಸ್ಕೊಂಡ್ ಬಿಟ್ಟಿರ್ತೀವಿ. ಈ MTI ಅಂದ್ರೆ Mother Tongue Influence (ಮಾತೃಭಾಷೆಯ ಪ್ರಭಾವ)ಕಡಿಮೆ ಮಾಡಲು ತರಬೇತಿ ಕೊಡಲಾಗುತ್ತೆ. ಉದಾಹರಣೆಗೆ Customer ಅನ್ನೋ ಪದಾನ ನಾವು 'ಕಸ್ಟಮರ್' ಅಂತ ಉಪಯೋಗಿಸ್ತೇವೆ. ಆದ್ರೆ ಅವರ ನಿಜವಾದ ರೂಪ 'ಖಸ್ಟಮರ್', culture training ಕೂಡಾ ಇದರ ಭಾಗ. ಆ ದೇಶದ ಸಂಸ್ಕೃತಿಯ ಬಗ್ಗೆ ತರಬೇತಿ ನೀಡಿದರೆ ಅವರೊಟ್ಟಿಗೆ ಮಾತಾಡುವಾಗ rapport ಬೆಳೆಸಲು ಅನುಕೂಲವಾಗುತ್ತೆ. ಈ ತರಬೇತಿಯ ಇನ್ನೊಂದು ಭಾಗ customer delight. ಗ್ರಾಹಕರನ್ನು ತೃಪ್ತಿಪಡಿಸುವುದಷ್ಟೇ ಅಲ್ಲ ಸಂತೋಷಪಡಿಸುವುದಕ್ಕಾಗಿ ಈ ತರಬೇತಿ. ಇದೆಲ್ಲಾ ಆದ ನಂತರ (ಕೆಲವೊಮ್ಮೆ ಜೊತೆಯಲ್ಲಿ) Process Training ಅಂದ್ರೆ ಕರೆ ತೆಗೆದುಕೊಳ್ಳುವ ವಿಷಯದ ಕುರಿತು ತರಬೇತಿ. ಉದಾಹರಣೆಗೆ credit card ಕಂಪೆನಿಯೊಂದರ ಗ್ರಾಹಕರ ಕರೆಗಳನ್ನು ನಾವು ಉತ್ತರಿಸುತ್ತಿದ್ದರೆ ಅದರ ತಿಂಗಳ ಬಡ್ಡಿದರ, ಪಾವತಿಸಬೇಕಾದ ಶುಲ್ಕ, ಈ ಎಲ್ಲ ಮಾಹಿತಿ ಹೊಂದಿರುವ Computer screen (ಪರದೆ)ಗಳ ಬಗ್ಗೆ ತರಬೇತಿ ನಡೆಯುತ್ತೆ. Process Training ಮುಗಿಯಲು ೩ ರಿಂದ ೪ ವಾರಗಳು ಬೇಕು. ಇಷ್ಟಾದ ಮೇಲೆ ೧ ರಿಂದ ೨ ವಾರಗಳವರೆಗೆ bridge training ಅಥವಾ nesting ಅಥವಾ work support group ನಲ್ಲಿ ಪ್ರಾಯೋಗಿಕ ತರಬೇತಿ ಇರುತ್ತೆ.

ಇದು ಮುಗಿದ ತಕ್ಷಣ ೧೦ ರಿಂದ ೧೫ ಜನ ಇರುವ teams ಅಂದ್ರೆ ಗುಂಪುಗಳಾಗಿ ವಿಂಗಡಿಸುತ್ತಾರೆ. ಒಂದು ಗುಂಪಿಗೆ ಒಬ್ಬ team leader / assistant manager ಇರ್ತಾರೆ. ಗುಂಪಿಗೆ ಸೇರಿದ ನಂತರ vintage ಅಥವಾ tenured ಅಂದ್ರೆ ಕರೆಗಳನ್ನು ತೆಗೆದುಕೊಳ್ಳುವಲ್ಲಿ ಅನುಭವಿ ಎನ್ನಿಸಿಕೊಳ್ಳೋಕೆ ಕೊಂಚ ಸಮಯ ನೀಡುತ್ತಾರೆ. ಕರೆ ಮಾಡಲು ಶುರುವಾಯ್ತೆಂದರೆ ಎಲ್ಲರಿಗೂ ಭಯ ಆಗೋದೇ Monitoring ನಿಂದ. Team leader monitoring, Quality monitoring, Client monitoring, Third party monitoring ಹೀಗೆ ಒಂದಲ್ಲ. monitoring ಹೀಗಂದ್ರೆ ಬೇರೆಯವರು ಜೊತೆಯಲ್ಲಿ ಕುಳಿತು ಅಥವಾ ನಮಗೆ ಗೊತ್ತಿಲ್ಲದಂತೆ ಬೇರೆಡೆಯಿಂದ ನಮ್ಮ ಕರೆಗಳನ್ನು ಕೇಳಿಸಿಕೊಳ್ಳುವುದು. ವಿಷಯದ ಮಾಹಿತಿಯನ್ನು ಸರಿಯಾಗಿ ಕೊಡುತ್ತಿದ್ದೇವೆಯೇ, ಭಾಷೆಯಲ್ಲಿನ ವ್ಯಾಕರಣ ಸರಿಯಿದೆಯೇ ಮತ್ತು ಶಬ್ದಗಳ ಉಪಯೋಗ, ಮಾತಿನಲ್ಲಿರುವ ಸ್ವರ (note), ಮಾತಿನ ಧಾಟಿ (pace) ಇವೆಲ್ಲವೂ ತಕ್ಕಮಟ್ಟಿಗೆ (appropriate) ಇವೆಯೋ ಎಂದು ನೋಡಲು ಈ monitoring ನಡೆಯುತ್ತೆ. ಇವೆಲ್ಲಕ್ಕೂ ಮಿಗಿಲಾಗಿ

monitoringನ ಇನ್ನೊಂದು ಕಾರಣ – ಗ್ರಾಹಕರಿಗೆ ಅಪಚಾರ (offend) ಆಗುವಂತೆ ಮಾತಾಡದಿರುವುದು. ಇದು ಬಹು ಮುಖ್ಯ. ಉದಾಹರಣೆಗೆ : ಕರೆಗೆ ಮಾಡಿದಾಗ ಗ್ರಾಹಕ holiday ಅಂದ್ರೆ ರಜೆಯ ಮೇಲೆ ಬೇರೆ ಸ್ಥಳಕ್ಕೆ ತೆರಳಿದ್ರೆ, ನಮಗೆ ಬಿಲ್ಲ ಕಟ್ಟುವ ಬದಲು ಅಲ್ಲಿ ಹೋಗಲು ಹಣ ಏಕೆ ವ್ಯಯ ಮಾಡಿದಿರಿ ಎಂದು ಕೇಳುವ ಹಾಗಿಲ್ಲ. ಅದು ಅವರ ವೈಯಕ್ತಿಕ ವಿಷಯ – ಅಂತ. ಒಂದು ಶಬ್ದದಿಂದ ಗ್ರಾಹಕರಿಗೆ ಅಪಚಾರ ಆಗಿ ಅವರು ದೂರು ಕೊಟ್ಟರೆ Clients ಆ ಕರೆಯನ್ನು ಕೇಳಿಸಿಕೊಂಡು, ನಂತರ ಎಲ್ಲರೂ ಹೀಗೇ ಮಾಡುತ್ತಾರಾ ಎಂದು ಎಲ್ಲರ ಕರೆಗಳನ್ನು ಕೇಳುತ್ತಾರೆ. ಇದರಿಂದ ಕೆಲವೊಮ್ಮೆ ಅಂದ್ರೆ ಆ ವಿಭಾಗದ ಗುತ್ತಿಗೆ ವಾಪಸ್ ತೆಗೆದುಕೊಂಡೂ ಬಿಡಬಹುದು. ಕೆಲವು ಸಲ ಗುತ್ತಿಗೆ ಪಡೆದ ಕಂಪನಿಯಿಂದ ಕೂಡಾ ನಿಬಂಧನೆಗಳು ಇರುತ್ತವೆ. ಉದಾಹರಣೆ : ಕರೆಗೆ ಉತ್ತರಿಸುವ ವ್ಯಕ್ತಿ ಗ್ರಾಹಕರಿಗೆ ತನ್ನ ವೈಯಕ್ತಿಕ ಜೀವನದ ಕುರಿತಾಗಲೀ ತಾನು ಎಲ್ಲಿದ್ದೇನೆಂದಾಗಲೀ ಹೇಳುವ ಹಾಗಿಲ್ಲ. ಇದು ವ್ಯವಹಾರಿಕ ಕರೆ, ವೈಯಕ್ತಿಕ ವಿಷಯ ಚರ್ಚಿಸಲಾಗದು ಎಂದು ಹೇಳಬೇಕಾಗುತ್ತದೆ. ನಿಬಂಧನೆಗಳನ್ನು ಪಾಲಿಸದಿದ್ದಲ್ಲಿ CAP letter ಕೊಡುವ ಅವಕಾಶ ಇದೆ. CAP ಅಂದ್ರೆ Corrective Action Policy. ಮೊದಲ CAP ಪತ್ರ ಕೊಟ್ಟಾಗ ೩೦ ದಿನ ಅವಧಿಯೊಳಗೆ ಇನ್ನೊಂದು ತಪ್ಪು (defect) ಮಾಡಿದ್ರೆ ಆ ಅವಧಿಯನ್ನು ೬೦ ದಿನಗಳಿಗೆ ವಿಸ್ತರಿಸಿ ಎರಡನೇ CAP ಪತ್ರ ಕೊಡ್ತಾರೆ. ಹೀಗೆ ನಡೆದರೆ ೯೦ ದಿನಗಳಿಗೆ ವಿಸ್ತರಿಸಿ (ಮೂರನೇ CAP ಪತ್ರ), ನಾಲ್ಕನೆಯ ಸಲ ಕೆಲಸದಿಂದ ವಜಾ ಮಾಡಬಹುದು. ತಪ್ಪಿನ ಮಹತ್ವ (seriousness) ವನ್ನು ನೋಡಿಕೊಂಡು ಕೆಲವು ಸಲ ಎರಡನೇ ಸರತಿ ಅಥವಾ ಮೊದಲ ಸರತಿಯೇ Accelerated CAP letter ಅಂದ್ರೆ ೯೦ದಿನಗಳ ಮಟ್ಟಿಗೆ ನೀಡುವ ಪತ್ರಕೊಡಬಹುದು. ಗ್ರಾಹಕನಿಂದನೆ, ಗ್ರಾಹಕನಿಗಿಂತ ಮುಂಚೆ ಕರೆಯನ್ನು ಕೊನೆಗೊಳಿಸುವುದು, ಕೆಲಸಕ್ಕೆ ಕುಡಿದು ಬರುವುದು – ಈ ತರಹದ ತಪ್ಪುಗಳಿಗೆ ತಕ್ಷಣ ಕೆಲಸದಿಂದ ವಜಾ ಮಾಡಬಹುದು. ಇನ್ನು third party monitoring. Client ಅಲ್ಲದೆ ಇನ್ನೊಂದು ಹೊರಗಿನ agency ಯವರು ಒಂದು ಕರೆಯನ್ನು ಕೇಳಿ, ತಕ್ಷಣ ಗ್ರಾಹಕನಿಗೆ ಕರೆಮಾಡ್ತಾರೆ. ಈ ಮೊದಲು ಬಂದ ಕರೆಯಲ್ಲಿ ನೀಡಿದ ಸೇವೆಯಿಂದ ಸಂತೋಷವಾಯಿತೇ, ತೃಪ್ತಿಯಾಯಿತೇ ಎಂದು ಕೇಳಿಕೊಳ್ತಾರೆ.

ಇದಿಷ್ಟು ಕರೆಯನ್ನು ತೆಗೆದುಕೊಳ್ಳುವ ವಿಧಾನದ ವಿಚಾರವಾಯಿತು. Performance ಕೆಲಸ ನಿರ್ವಹಣೆಯ ವಿಷಯಕ್ಕೆ ಬರ್ತೀನಿ. ಇಷ್ಟು ಕರೆಗಳನ್ನು ಉತ್ತರಿಸಬೇಕು, ಇಷ್ಟು ಸಮಯದಲ್ಲಿ ಒಂದು ಕರೆಯನ್ನು ಮುಗಿಸಬೇಕು (talktime) ಕರೆಯ ವಿಷಯವಾಗಿ Computer ಪರದೆಯ ಮೇಲೆ ದಾಖಲಿಸುವುದನ್ನು ಇಷ್ಟೇ ನಿಮಿಷಗಳೊಳಗಾಗಿ ಮುಗಿಸಬೇಕು (wrap time ಅಥವಾ after call work), ಇಷ್ಟು ಹಣ ಸಂಗ್ರಹಿಸಬೇಕು – ಹೀಗೆ ಹಲವಾರು Targets ಅಂದರೆ ಗುರಿ ಇರುತ್ತೆ. Targetಗಿಂತ ಹೆಚ್ಚು ಸಾಧನೆ ಮಾಡಿದ್ರೆ ಒಳ್ಳೆಯ Incentives (ಹಣ, Tv, DVD Player, Shopping coupon) ಸಿಗೋದು ಉಂಟು. Target ಮುಟ್ಟಿದರೆ ಅದಕ್ಕೆ ನಿಗದಿತವಾದ incentive. ಇಲ್ಲದಿದ್ದರೆ ಸಂಬಳ ಮಾತ್ರ ದೊರೆಯುತ್ತೆ. Target ಮುಟ್ಟದೆ ತಿಂಗಳುಗಟ್ಟಲೆ ಕೆಲಸಮಾಡುತ್ತಿದ್ದರೆ ವಜಾ ಮಾಡಬಹುದು. ಅದೆ ನಿಮಗೆ ಇದಕ್ಕನುಕೂಲವಾಗುವ ಹಾಗೆ ಇನ್ನಷ್ಟು ತರಬೇತಿ, ಸಲಹೆ, ಹೊಸ targets ಕೂಡ ನೀಡಲಾಗುವುದು. ಇದರ ನಂತರವೂ ಹಾಗೇ ಇದ್ರೆ ಅಲ್ಲಿ ಉಳಿಯಲು ಕಷ್ಟ. ಒಳ್ಳೆ Performance ಇದ್ದು Initiatives ಅಂದ್ರೆ ನಿಮ್ಮ ಕೆಲಸವಲ್ಲದ ಹೊಸ ಕೆಲಸಗಳನ್ನು ಮಾಡಿದರೆ, Positive attitude ಧನಾತ್ಮಕ ಮನೋಭಾವ ಇದ್ರೆ ಒಂದು ಸ್ಥಾನ ಮೇಲೇರಲು ಸಾಧ್ಯ (Promotion).

ಇದು ಕರೆ ಮಾಡುವ, ಉತ್ತರಿಸುವ ಕೆಲಸ ಹೇಗೆ ನಿರ್ವಹಿಸಲಾಗುತ್ತೆ ಅನ್ನೋದರ ಒಂದು ಝಲಕು ನೋಟ. ಈ ಪ್ರಧಾನ ಕೆಲಸಕ್ಕೆ ಪೂರಕವಾಗಿ Escalation, Quality, Command

Post, Compliance, MIS team, Team leader, Operations Manager, HR ಹೀಗೆ ಸಾಕಷ್ಟು ವಿಭಾಗಗಳು ಕೆಲಸಮಾಡುತ್ತವೆ. ಅಸಮಾಧಾನಗೊಂಡ ಗ್ರಾಹಕರಿಗೆ Supervisor (ಮೇಲ್ವಿಚಾರಕ) ಹೇಳಿದರೇನೇ ಸಮಾಧಾನವಾಗುವುದು. ಈ ಮೇಲ್ವಿಚಾರಕರ ಗುಂಪಿಗೆ Escalation Team ಎನ್ನುತ್ತಾರೆ. ಕರೆಗಳನ್ನು ಕೇಳಿ, ವಿಶ್ಲೇಷಣೆ ಮಾಡಿ, Feedback ಕೊಟ್ಟು, ಅಂಕಿಗಳನ್ನು ಸಹ ಕೊಡಲು ಮೀಸಲಾಗಿರುವ ವಿಭಾಗ Quality. ಯಾರು ಎಷ್ಟು ಸಮಯ ವಿರಾಮ ತಗೋಬೇಕು, ಒಂದೇ ಸಲಕ್ಕೆ ಎಷ್ಟು ಜನ ಕರೆಮಾಡಬೇಕು – ಇವೆಲ್ಲಾ ನೋಡಿಕೊಳ್ಳುವುದು Command Post. ಗುತ್ತಿಗೆ ಕೊಟ್ಟ ಕಂಪೆನಿಯ ನಿಬಂಧನೆಗಳು, ಕಟ್ಟುಪಾಡುಗಳನ್ನು ಸರಿಯಾಗಿ ಪಾಲಿಸುತ್ತಾರಾ ಅಂತ ನೋಡೋದು Compliance ನವರ ಕೆಲಸ. MIS ಅಂದ್ರೆ Management of Information System ಎಲ್ಲರ, ಎಲ್ಲದರ report ಗಳು ಇವರ ಹತ್ತಿರ. ಅವನ್ನು ಮಾಡುವವರೂ ಇವರೇ. ತನ್ನ ಗುಂಪಿನ reportಗಳು, ಆ ದಿನ ಗುಂಪಿನಲ್ಲಿ ಎಷ್ಟು ಜನ ಹಾಜರಿಲ್ಲ, ಏಕೆ, ಕೆಲಸ ನಿರ್ವಹಣೆ ಸರಿಯಿಲ್ಲದವರಿಗೆ ಸಲಹೆ, ಇವುಗಳ ವಿಚಾರ team leaderಗೆ. ೮ ರಿಂದ ೧೦ ಗುಂಪುಗಳಿಗೆ ಒಬ್ಬ operations Manager. ಆ ಗುಂಪುಗಳ team leader ಗಳು ಇವರ ಕೆಳಗೆ ಕೆಲಸ ಮಾಡ್ತಾರೆ. ಅದಷ್ಟರ ನಿರ್ವಹಣೆ ಅವರ ಕೈಯಲ್ಲಿ. ಸುಮಾರು ೧೦ ರಿಂದ ೧೨ ಜನ Operations Managerಗೆ ಒಬ್ಬ Service Delivery Leader ಅಥವಾ Delivery Processing Executive ಇರ್ತಾರೆ. ಇದರ ಮೇಲೆ CEO ವರೆಗೂ ಹೀಗೇ ಬೆಳೆಯುತ್ತಾ ಹೋಗುತ್ತದೆ. ಕೆಲಸಕ್ಕೆ ಸೇರಿಸಿಕೊಳ್ಳುವ ಪ್ರಕ್ರಿಯೆ, ತೊರೆಯುವ ಪ್ರಕ್ರಿಯೆ, ತೊರೆದವರ ಪಟ್ಟ – ಇವೆಲ್ಲಾ HR ವಿಭಾಗದ ಕೆಲಸ.

ಈಗ ನಿಮಗೆ ಹೇಳಿರುವಷ್ಟೂ ಕೂಡ ತುಂಬಾ basic, ಮೇಲ್ಪದರದ್ದು. ಇದರ ಒಳಹೊಕ್ಕರೆ ಇನ್ನೂ ಬಹಳಷ್ಟಿದೆ. ಕಾಲಸೆಂಟರ್‌ನ ಒಂದು ನೋಟವನ್ನು ನಿಮ್ಮ ಮುಂದೆ ಇರಿಸಲು ಸಣ್ಣ ಪ್ರಯತ್ನ ಅಷ್ಟೆ.

*ಕೃತಜ್ಞತೆಗಳು : **ಕಲ್ಯಾಣ್ ಭಟ್ಟಾಚಾರ್ಯ,** Assistant Manager Operations, IBM - Daksh*

ಮಾನ್ಯರೆ,

ಕರ್ನಾಟಕ, ಮೂಲಭೂತವಾದದ ತೆಕ್ಕೆಗೆ ಜೀಳುವ ಸಂಭವನೀಯ ಸಂದರ್ಭದಲ್ಲಿ "ಪ್ರಜಾಸಾಹಿತ್ಯ" ಮಾಸಪತ್ರಿಕೆಯ ಧೋರಣೆ ಮತ್ತು 'ಧ್ವನಿ' ನಮ್ಮಂತಹ ಅನೇಕ ಜೀವಿಗಳಿಗೆ ಸಾಂತ್ವನ ಮತ್ತು ಸಮಾಧಾನ ನೀಡಿದೆ. ಈ ದಿನ ನಾಲ್ಕನೆಯ ಸಂಪುಟ ನನ್ನ ಕೈ ಸೇರಿದೆ. ಈ ಸಂಚಿಕೆಯ ಎಲ್ಲ ಲೇಖನಗಳೂ ಕೋಮು ಸೌಹಾರ್ದವು ಎಷ್ಟು ಪ್ರಸ್ತುತ ಎನ್ನುವುದನ್ನು ಬಹಳ ಸಮರ್ಥವಾಗಿ ನಿರೂಪಿಸಿವೆ. ಈ ಎಲ್ಲ ಸಂಚಿಕೆಗಳ ಆತ್ಮದಂತಿರುವ 'ತಲಸ್ಪರ್ಶಿ'ಯವರ ಲೇಖನ ಬಹಳ ಗಮನಿಸಬೇಕಾದ ವಿಚಾರ. ಇಲ್ಲಿರುವ ವ್ಯಂಗ್ಯ ನೈತ್ಯಾತ್ಮಕವಾಗಿರದೆ ತಿದ್ದುವ ಅಂತಃಕರಣದ ದನಿಯಾಗಿದೆ.

ಈಗಾಗಲೇ ನಾನು ವಾರ್ಷಿಕ ಚಂದಾದಾರನಾಗಿದ್ದರೂ, ಈ ಪತ್ರಿಕೆಯ ಧೋರಣೆಯನ್ನು ಗಮನಿಸಿದ ಮೇಲೆ ೫೦೦/– ರೂ. ಗಳ ಸಣ್ಣ ಕಾಣಿಕೆಯನ್ನು ನೀಡುತ್ತಿದ್ದೇನೆ.

ಶಿವಮೊಗ್ಗ ಸುಬ್ಬಣ್ಣ

ಕನ್ನಡ ವಿದ್ವಾಂಸರಿಗಲ್ಲ ಸಾಮಾನ್ಯರಿಗೆ

ಡಿ.ಎನ್. ಶಂಕರ ಭಟ್

"ಪ್ರಜಾಸಾಹಿತ್ಯ"ದ ಮೂರನೇ ಸಂಚಿಕೆಯಲ್ಲಿ (ನವೆಂಬರ್ ೨೦೦೬) ಡಾ॥ ರಾಜಪುರೋಹಿತರು ನನ್ನ ಇತ್ತೀಚೆಗಿನ ಕೆಲವು ಕನ್ನಡ ಪುಸ್ತಕಗಳನ್ನು ವಿಮರ್ಶಿಸಿದ್ದಾರೆ. ಒಟ್ಟಿನಲ್ಲಿ ನನ್ನ ಬರವಣಿಗೆ ರಾಜಕೀಯ ಬಂಡಾಯಗಾರರ ಬರವಣಿಗೆಯಂತಿದೆ; ಅದರಲ್ಲಿ ಖಚಿತತೆಯಿಲ್ಲ; ಶಿಥಿಲವಾದ 'ಉಡಾಫೆಯ' ಮಾತಿದೆ; ಶಾಸ್ತ್ರೀಯ ಬರವಣಿಗೆಗಳಲ್ಲಿ ಇರಬೇಕಾದಂತಹ ಪಾಂಡಿತ್ಯಪೂರ್ಣತೆಯಿಲ್ಲ; ಶಾಸ್ತ್ರೀಯ ಚೌಕಟ್ಟು ಭದ್ರವಾಗಿಲ್ಲ; 'ನೂರಾರು ಅಪಪ್ರಯೋಗ'ಗಳಿವೆ; ಕನ್ನಡದಲ್ಲಿಲ್ಲದ ಪದಗಳನ್ನು ಸೃಷ್ಟಿಸಿ ಬರೆಯಲಾಗಿದೆ; ಬೇರೆ ವಿದ್ವಾಂಸರ ಒಳ್ಳೊಳ್ಳೆಯ ಬರಹಗಳನ್ನು ಬಳಸಿಕೊಂಡಿಲ್ಲ; ಇತ್ಯಾದಿ.

ಇದು ನನ್ನ ಇತ್ತೀಚೆಗಿನ ಕನ್ನಡ ಬರಹಗಳ ವಿಮರ್ಶೆ. ಇದಕ್ಕೆ ಮೊದಲು ನಾನು ಬರೆದ ಕನ್ನಡ ಬರಹಗಳಲ್ಲಿ (ಉದಾ: 'ಕನ್ನಡ ವಾಕ್ಯಗಳು') ಮತ್ತು ಇಂಗ್ಲಿಷ್ ಬರಹಗಳಲ್ಲಿ ಇಂತಹ 'ದೋಷ'ಗಳಿವೆಯೆಂದೇನೂ ಅವರು ವಾದಿಸಿಲ್ಲ. ಹೀಗಿರುವಾಗ, ನಾನು ಯಾಕೆ ಇತ್ತೀಚೆಗೆ ಕನ್ನಡದಲ್ಲಿ ಈ ರೀತಿಯ ಬರಹಗಳನ್ನು ರಚಿಸಲು ಪ್ರಾರಂಭಿಸಿದ್ದೇನೆ ಎಂಬುದರ ಕಡೆಗೆ ಅವರು ಸ್ವಲ್ಪವಾದರೂ ಗಮನ ಹರಿಸಿದ್ದಲ್ಲಿ ಅಷ್ಟೊಂದು ಕಟುವಾಗಿ ನನ್ನನ್ನು ದೂಷಿಸುತ್ತಿರಲಿಲ್ಲ.

'ಕನ್ನಡ ವಾಕ್ಯಗಳು' ಪುಸ್ತಕವನ್ನು ನಾನು ಮೂವತ್ತು ವರ್ಷಗಳಷ್ಟು ಹಿಂದೆ ಬರೆದೆ. ಅದರಲ್ಲಿ ನಾನು ಯಾರನ್ನೂ ತಪ್ಪೆಂದು ದೂರಲು ಪ್ರಯತ್ನಿಸಿಲ್ಲ. ಕನ್ನಡದ ವಾಕ್ಯಗಳ ಒಳರಚನೆ ಎಂತಹದು, ಅವು ಕೊಡುವ ಅರ್ಥವೈವಿಧ್ಯ ಎಂತಹದು ಎಂಬುದನ್ನಷ್ಟೇ ವಿವರವಾಗಿ ತಿಳಿಸಿ ಹೇಳುವುದು ಮಾತ್ರ ನನ್ನ ಉದ್ದೇಶವಾಗಿತ್ತು. ಆದರೆ ಅದು ಪ್ರಕಟವಾದ ಆ ಸಮಯದಲ್ಲಿ ಅದನ್ನು ಓದಿದವರು ನನಗೆ ತಿಳಿದಂತೆ ಬೆರಳೆಣಿಕೆಯಷ್ಟು ಮಂದಿ ಮಾತ್ರ. ಅದು ಪ್ರಕಟವಾಗಿ ಐದು ವರ್ಷ ಕಳೆದ ಮೇಲೆ ಜಿಳಿಗಿರಿಯವರು ಚಿದಾನಂದ ಮೂರ್ತಿಗಳನ್ನು ಭೇಟಿಯಾದಾಗ ಕೇಳಿದ್ದರಂತೆ, 'ಭಟ್ಟರ ಪುಸ್ತಕವನ್ನು ಓದಿದ್ದಿರೋ' ಎಂದು. ಅದಕ್ಕವರು 'ಅದರ ಮುನ್ನುಡಿಯನ್ನು ಮಾತ್ರ ಓದಲು ಸಾಧ್ಯವಾಗಿದೆ' ಎಂದರಂತೆ!

ಕನ್ನಡದಲ್ಲಿ ಅಂತಹ ಶಾಸ್ತ್ರೀಯ ಚೌಕಟ್ಟಿನಲ್ಲಿ ಬರೆದ ವ್ಯಾಕರಣ ಪುಸ್ತಕವನ್ನು (ಅದರಲ್ಲೂ ಕೇಶಿರಾಜಾದಿ ಹಳೆಗನ್ನಡ ವೈಯಾಕರಣಿಗಳನ್ನು ಅನುಸರಿಸದಿರುವ ವ್ಯಾಕರಣ ಪುಸ್ತಕವನ್ನು) ಓದುವ ಕನ್ನಡಿಗರು ಬಹಳ ಅಪರೂಪ ಎಂಬ ವಿಷಯ ನನಗಿದರಿಂದ ಸ್ಪಷ್ಟವಾಯಿತು. ಹಾಗಾಗಿ ನಾನು ಕನ್ನಡದಲ್ಲಿ ಓದುಗರಿಲ್ಲದ ಪುಸ್ತಕಗಳನ್ನು ಬರೆಯುವ ಬದಲು ಸಾಕಷ್ಟು ಓದುಗರಿರುವ ಇಂಗ್ಲಿಷ್‌ನಲ್ಲಿ ಬರೆಯುವುದೇ ಒಳ್ಳೆಯದೆಂಬ ತೀರ್ಮಾನಕ್ಕೆ ಬಂದೆ. ಅನಂತರದ ನನ್ನ ಬರಹಗಳೆಲ್ಲವೂ ಇಂಗ್ಲಿಷ್‌ನಲ್ಲಿಯೇ ನಡೆದುವು. ಅವು ವಿಮರ್ಶಕರ ಮನ್ನಣೆಯನ್ನೂ ಪಡೆದುವು. ಇತ್ತೀಚೆಗೆ ಎಂದರೆ ೨೦೦೪ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಪ್ರಕಟಿಸಿದ pronouns ಎಂಬ ಪುಸ್ತಕ ನಾನು ಬರೆದ ಇಂತಹ ಒಂದು ಶಾಸ್ತ್ರೀಯ ಗ್ರಂಥ. ಅದನ್ನು ಬರೆಯುವಲ್ಲಿ ಒಟ್ಟು ಮುನ್ನೂರಕ್ಕೂ ಜಾಸ್ತಿ ಆಕರಗ್ರಂಥಗಳನ್ನು ಮತ್ತು ಲೇಖನಗಳನ್ನು ನಾನು ಬಳಸಿದ್ದೇನೆ. ನಾನೂರಕ್ಕೂ ಜಾಸ್ತಿ ಭಾಷೆಗಳ ವ್ಯಾಕರಣಗಳಿಂದ ವಿಷಯಗಳನ್ನು ಸಂಗ್ರಹಿಸಿದ್ದೇನೆ. ಶಾಸ್ತ್ರೀಯ ಗ್ರಂಥಕ್ಕೆ ಬೇಕಾಗುವ ಗುಣಗಳೆಲ್ಲವೂ ಅದರಲ್ಲಿ ಇದ್ದುದರಿಂದಲೇ ಅದನ್ನು ಆಕ್ಸ್‌ಫರ್ಡ್ ಯುನಿವರ್ಸಿಟಿಯ ವಿದ್ವಾಂಸರು ಪ್ರಕಟಣೆಗೆ ಸ್ವೀಕರಿಸಿದ್ದಾರೆ. ರೌಟ್ಲೆಜ್, ಜೋನ್ ಬೆಂಜಮಿನ್ ಮೊದಲಾದ ಬೇರೆ ಅಂತರಾಷ್ಟ್ರೀಯ ಖ್ಯಾತಿಯ ಪ್ರಕಾಶಕರೂ ನನ್ನ ಇಂಗ್ಲಿಷ್ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ನಾನು ತಿರುಗಿ ಕನ್ನಡದಲ್ಲಿ ಬರೆಯತೊಡಗಲು ಕಾರಣ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಕಂಬಾರರು. ಅವರ ಒತ್ತಾಯದ ಮೇರೆಗೆ ನನ್ನ ಹಳೆಯದೊಂದು ಪುಸ್ತಕವನ್ನು ತಿದ್ದಿ ದೊಡ್ಡದು ಮಾಡಿ, 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ'ಯನ್ನು ಬರೆದು ಕೊಟ್ಟೆ. ಅನಂತರ ಕನ್ನಡ ವ್ಯಾಕರಣದ ಮಟ್ಟಿಗೆ ಕನ್ನಡಿಗರನ್ನು ನಿದ್ರೆಯಿಂದ ಹೊಡೆದೆಬ್ಬಿಸಲು ತಕ್ಕುದಾದ 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ' ಪುಸ್ತಕವನ್ನು ಬರೆದೆ. ಇದು ನನ್ನ 'ಕನ್ನಡ ವಾಕ್ಯಗಳು' ಪುಸ್ತಕದ ಹಾಗಾಗಲಿ, Pronouns ಪುಸ್ತಕದ ಹಾಗಾಗಲೀ ಒಂದು ಶಾಸ್ತ್ರೀಯ ಗ್ರಂಥವಲ್ಲ. ರಾಜಪುರೋಹಿತರು ಹೇಳಿದ ಹಾಗೆ ಅದು 'ರಾಜಕೀಯ ಬಂಡಾಯಗಾರರ' ಬರವಣಿಗೆಯೇ. ಆದರೆ ನೂರಾರು ವರ್ಷಗಳಿಂದ ಬಳಕೆಯಲ್ಲಿರುವ ಕನ್ನಡದ್ದಲ್ಲದ ವ್ಯಾಕರಣ ನಿಜಕ್ಕೂ ಕನ್ನಡದ್ದಲ್ಲ ಎಂಬುದನ್ನು ನಮ್ಮ ಕನ್ನಡ ಅಧ್ಯಾಪಕರಿಗೆ ಮತ್ತು ಇತರ ಆಸಕ್ತ ಕನ್ನಡಿಗರಿಗೆ ಮನದಟ್ಟಾಗುವಂತೆ ಹೇಳಬೇಕಾದರೆ ಅಂತಹ ಬರವಣಿಗೆ ಅತ್ಯವಶ್ಯ ಎಂಬುದನ್ನು ನನ್ನ ಈ ಪುಸ್ತಕಕ್ಕೆ ಸಿಕ್ಕಿದ (ಮತ್ತು 'ಕನ್ನಡ ವಾಕ್ಯಗಳು' ಪುಸ್ತಕಕ್ಕೆ ಸಿಗದಿದ್ದ) ಜನಪ್ರಿಯತೆ ತೋರಿಸಿಕೊಟ್ಟಿದೆ.

ನನಗನಿಸುವದೇನೆಂದರೆ ಶಾಸ್ತ್ರೀಯ ಸಂಗೀತಕ್ಕೂ ಸುಗಮ ಸಂಗೀತಕ್ಕೂ ನಡುವಿರುವ ವ್ಯತ್ಯಾಸವೇ ದೊಡ್ಡ ದೊಡ್ಡ ವಿದ್ವಾಂಸರನ್ನು ತೃಪ್ತಿ ಪಡಿಸಬಲ್ಲ ವ್ಯಾಕರಣ ಗ್ರಂಥಕ್ಕೂ ಜನಸಾಮಾನ್ಯರನ್ನು ಆಕರ್ಷಿಸಬಲ್ಲ ವ್ಯಾಕರಣ ಪುಸ್ತಕಕ್ಕೂ ನಡುವಿರುವ ವ್ಯತ್ಯಾಸ. ಈ ಎರಡನೆಯ ರೀತಿಯ ಪುಸ್ತಕವನ್ನು ಬರೆಯಲೇ ಬಾರದು ಎಂಬ ರಾಜಪುರೋಹಿತರ ವಾದ ಸುಗಮ ಸಂಗೀತವನ್ನು ಯಾರೂ ರಚಿಸಬಾರದು ಇಲ್ಲವೇ ಹಾಡಬಾರದು ಎಂಬ ವಾದದ ಹಾಗೆ. ಅದನ್ನು ಕೆಲವೇ ಕೆಲವು ಮಂದಿ ಮಾತ್ರ ಒಪ್ಪಬಲ್ಲರು.

ಇದಲ್ಲದೆ, ಶಾಸ್ತ್ರೀಯ ವ್ಯಾಕರಣ ಗ್ರಂಥಗಳನ್ನು ಓದಬಲ್ಲವರು ಮತ್ತು ಓದಿ ಆನಂದಪಡಬಲ್ಲವರು ಕನ್ನಡದಲ್ಲಿ ಬೆರಳೆಣಿಕೆಯಷ್ಟು ಮಂದಿ ಮಾತ್ರ, ಅಂತಹ ವಿದ್ವಾಂಸರೂ ಇವತ್ತು ಪ್ರಚಾರಪ್ರಿಯರಾಗಿದ್ದು ಶಾಸ್ತ್ರೀಯ ಗ್ರಂಥಗಳನ್ನು ಓದಲು ಅವರಿಗೆ ಸಮಯ ಸಿಗುವುದು ಬಹಳ ಕಷ್ಟ. ಹಾಗಾಗಿ, ಕನ್ನಡದಲ್ಲಿ ಸ್ವತಃ ಬರೆದು ಪ್ರಕಟಿಸುವ ನನ್ನಂತಹವರು ಅಂತಹ ಕೆಲಸಕ್ಕೆ ಕೈ ಹಾಕಿದರೆ ಕೈ ಸುಟ್ಟುಕೊಳ್ಳಬೇಕಾದೀತು.

ರಾಜಪುರೋಹಿತರ ಬೇರೆ ಕೆಲವು ಅನಿಸಿಕೆಗಳು ನಿಜಕ್ಕೂ ಸರಿಯಲ್ಲ. ಕನ್ನಡಕ್ಕೆ (ಅಥವಾ ಬೇರೆ ಯಾವುದೇ ಭಾಷೆಗೆ) ಪಾರಿಭಾಷಿಕ ಪದಗಳು ಬೇಕಿದ್ದಲ್ಲಿ ಅವನ್ನು ಹೊಸದಾಗಿ ಸೃಷ್ಟಿಸಿಕೊಳ್ಳದೆ ಬೇರೆ ದಾರಿಯೇ ಇಲ್ಲ. ಹಾಗೆ ಮಾಡುವ ಬದಲು ಇಂಗ್ಲಿಷಿನ ಇಲ್ಲವೇ ಸಂಸ್ಕೃತದ ಪದಗಳನ್ನು ಎರವಲಾಗಿ ಪಡೆದು ಬಳಸಬಹುದೇನೋ ನಿಜ; ಆದರೆ ಅವು ಕನ್ನಡ ವಾಕ್ಯಗಳಲ್ಲಿ ಸರಿಯಾಗಿ ಹೊಂದಿಕೊಳ್ಳುವುದಿಲ್ಲ. ಇದಲ್ಲದೆ, ಪಾರಿಭಾಷಿಕ ಪದಕೋಶವೊಂದರಲ್ಲಿ ನೂರಕ್ಕೆ ತೊಂಬತ್ತೈದರಷ್ಟು ಪದಗಳೂ ಸಂಸ್ಕೃತ ಪದಗಳಾದರೆ, ಅದನ್ನು ಕನ್ನಡ ಪದಕೋಶವೆಂದು ಹೇಗೆ ಕರೆಯಬಲ್ಲೆವು?

'ಪ್ರಶ್ನೆ' ಪದದ ಬದಲು 'ಕೇಳ್ವಿ' ಪದವನ್ನು ನಾನು ಬಳಸಿದ್ದು ಅಷ್ಟೊಂದು ತೊಂದರೆಯದೆಂದು ನನಗಂತೂ ಅನಿಸುವುದಿಲ್ಲ. ಅದನ್ನು ಬಳಸಿದ ಸಂದರ್ಭ ಅದರ ಅರ್ಥವನ್ನು ಚೆನ್ನಾಗಿ ಸೂಚಿಸುತ್ತದೆ. 'ಪದ' ಎಂಬ ಪದಕ್ಕೆ ನಾನು ಎಂತಹ ಅರ್ಥ ಕೊಟ್ಟಿದ್ದೇನೆಂಬುದನ್ನು 'ಕನ್ನಡ ಪದಗಳ ಒಳರಚನೆ' ಪುಸ್ತಕದಲ್ಲಿ ಸ್ಪಷ್ಟವಾಗಿ ಸೂಚಿಸಿದ್ದೇನೆ. ನಿಜಕ್ಕೂ ಸಂಸ್ಕೃತ ವ್ಯಾಕರಣದಲ್ಲೇ ಅದರ ಬಳಕೆ ಅಸ್ಪಷ್ಟವಾಗಿದೆ. 'ವೈಯಾಕರಣ' ಪದ ಸಂಸ್ಕೃತದಲ್ಲಿ ಸ್ತ್ರೀಲಿಂಗ ಎಂಬುದು ನನಗೂ ತಿಳಿದಿದೆ. ಆದರೆ ಕನ್ನಡದಲ್ಲಿ ಅದು ಪುಲ್ಲಿಂಗದಲ್ಲೂ ಬಳಕೆಯಾಗುತ್ತದೆ (ಕಿಟ್ಟೆಲ್ ಡಿಕ್ಶನರಿ ನೋಡಿ). ಧಾರವಾಡದಲ್ಲಿ 'ತಲೆಕಟ್ಟು' ಬಳಕೆಯಲ್ಲಿರಬಹುದು. ಆದರೆ ಮಂಗಳೂರಿನಲ್ಲಿ 'ತಲೆಕೊಟ್ಟು' ಬಳಕೆಯಲ್ಲಿದೆ. ಇವುಗಳಲ್ಲಿ ಒಂದು ಸರಿ ಇನ್ನೊಂದು ತಪ್ಪು ಎಂದು ಹೇಳಲು ರಾಜಪುರೋಹಿತರಿಗೆ ಅಧಿಕಾರವಿದೆಯೇ?

ಕನ್ನಡ ವೈಯಾಕರಣಿಗಳು ಅಂಶಿಸಮಾಸ, ಬಹುವ್ರೀಹಿ ಸಮಾಸ ಮೊದಲಾದುವನ್ನು ವಿವರಿಸುವಲ್ಲಿ ಹಲವು ತೊಂದರೆಗಳಿಗೊಳಗಾಗಿದ್ದಾರೆ ಎಂಬುದನ್ನು ನಾನು ನನ್ನ ಪುಸ್ತಕದಲ್ಲಿ ತೋರಿಸಿಕೊಟ್ಟಿದ್ದೇನೆ. ನನ್ನ ಅಭಿಪ್ರಾಯದಂತೆ ಕನ್ನಡದ ಸಮಾಸಗಳನ್ನು ಅವುಗಳ ಮೊದಲನೆಯ ಅಂಗ ಗುಣಪದವೇ, ಕ್ರಿಯಾಪದವೇ ಅಥವಾ ನಾಮಪದವೇ ಎಂಬ ವಿಷಯದ ಮೇಲೆ ವಿಂಗಡಿಸುವುದೇ ಸರಿಯಾದ ದಾರಿ. ಮೂಲದ್ರಾವಿಡದಲ್ಲೂ ಇಂತಹದೇ ವಿಭಜನೆ ಬಳಕೆಯಲ್ಲಿದ್ದಿರಬೇಕೆಂದು ವಿದ್ವಾಂಸರು ಕಲ್ಪಿಸಿಕೊಂಡಿದ್ದಾರೆ.

ಭಿನ್ನಕರ್ತೃಕ ವಾಕ್ಯಗಳನ್ನು ದು ಪ್ರತ್ಯಯದ ಮೂಲಕ ಸೇರಿಸಿದರೆ ತಪ್ಪು ಎಂಬ ಕನ್ನಡ ವೈಯಾಕರಣಿಗಳ ನಿಯಮ ಸರಿಯಲ್ಲವೆಂಬುದಕ್ಕೆ 'ಮರಬಿದ್ದು ಮನೆಯ ಮಾಡು ಮುರಿಯಿತು' ಎಂಬ ವಾಕ್ಯವನ್ನು ಉದಾಹರಿಸಬಹುದು. ನಿಜಕ್ಕೂ ಕನ್ನಡದಲ್ಲಿ ಕರ್ತೃ ಎಂಬ ವ್ಯಾಕರಣಾಂಶವನ್ನು ಬಳಸಿ ಇಂತಹ ನಿಯಮವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಬದಲು ಆಗುವಿಕೆ ಮತ್ತು ಮಾಡುವಿಕೆಗಳೆಂಬ ವ್ಯಾಕರಣಾಂಶಗಳನ್ನು ಬಳಸಬೇಕಾಗುತ್ತದೆ. ಆಗುವಿಕೆಗಳಾದರೆ 'ಭಿನ್ನಕರ್ತೃಕ' ವಾಕ್ಯಗಳನ್ನೂ ದು ಪ್ರತ್ಯಯದಿಂದ ಸೇರಿಸಲು ಸಾಧ್ಯ.

ಕೇಶಿರಾಜನೇ ಮೊದಲಾದವರ ಹಳೆಗನ್ನಡ ವ್ಯಾಕರಣಗಳಲ್ಲಿ ಕಾಣಿಸುವ ಹಲವು ತಪ್ಪುಗಳನ್ನು ನಾನು ನನ್ನ ಪುಸ್ತಕದಲ್ಲಿ ತೋರಿಸಿಕೊಟ್ಟಿದ್ದೇನೆ. ಉದಾಹರಣೆಗಾಗಿ ದಪ ಎಂಬುದು ವರ್ತಮಾನ, ಪ ಎಂಬುದು ಭವಿಷ್ಯತ್ ಎಂಬ ನಿಯಮ ಸರಿಯಲ್ಲ ಎಂಬುದಕ್ಕೆ ಪಂಪ ಭಾರತದ ಉದಾಹಣೆಗಳನ್ನು ಕೊಟ್ಟು ಸಮರ್ಥಿಸಿದ್ದೇನೆ. ಕೃದಂತಗಳು ಕನ್ನಡದಲ್ಲಿ ಗುಣಪದಗಳು ಸಂಸ್ಕೃತದ ಹಾಗೆ ನಾಮಪದಗಳಲ್ಲ ಎಂಬುದನ್ನು ಅರ್ಥಮಾಡಿಕೊಳ್ಳದೆ ಈ ವೈಯಾಕರಣಿಗಳು ಪಾಡುಪಟ್ಟುದನ್ನು ವಿವರಿಸಿದ್ದೇನೆ. ಇಲ್ಲಿ ಮೇಲೆ ಸೂಚಿಸಿದ ಹಾಗೆ ಬಿಚಿತ್ತೆಯನ್ನು ತಂದುಹಾಕಿ ನನ್ನ ಪುಸ್ತಕವನ್ನು ಯಾರೂ ಓದದಿರುವ ಹಾಗೆ ಮಾಡಲು ನಾನು ತಯಾರಿಲ್ಲ. ರಾಜಪುರೋಹಿತರಂತಹ ವಿದ್ವಾಂಸರಿಗಾಗಿ ನಾನು ಈ ಪುಸ್ತಕಗಳನ್ನು ಬರೆದಿಲ್ಲ. ಕನ್ನಡದ ಸಾಮಾನ್ಯ ಓದುಗರಿಗಾಗಿ ಬರೆದಿದ್ದೇನೆ. ರಾಜಪುರೋಹಿತರಂತಹ ವಿದ್ವಾಂಸರು ಅದನ್ನು 'ಉಡಾಫೆ'ಯ ಬರವಣಿಗೆಯೆಂದು ಕರೆದರೆ ಕರೆಯಲಿ, ಅಡ್ಡಿಯಿಲ್ಲ.

ನನ್ನ 'ಕನ್ನಡ ಬರಹವನ್ನು ಸರಿಪಡಿಸೋಣ' ಪುಸ್ತಕದ ಮೇಲೆ ಸಂಯುಕ್ತ ಕರ್ನಾಟಕದಲ್ಲಿ ಸಂಗಮೇಶ ಸವದತ್ತಿಮಠರು ಬರೆದ ವಿಮರ್ಶೆಯನ್ನು ರಾಜಪುರೋಹಿತರು ಪ್ರಶಂಸಿಸಿದ ಹಾಗೆ ಅನಿಸಿತು. ಆ ಪುಸ್ತಕದ ಕೊನೆಯ 'ಮುಕ್ತಾಯ' ಅಧ್ಯಾಯವನ್ನು ನಾನು ಮಾದರಿಯಾಗಿ 'ಹೊಸ ಬರಹ'ದಲ್ಲಿ ಬರೆದಿದ್ದೆ. ಇದರಲ್ಲಿ ಮಹಾಪ್ರಾಣಾಕ್ಷರಗಳು, ಷಕಾರ, ಋಕಾರ ಮೊದಲಾದವುಗಳಿಲ್ಲ. ಸವದತ್ತಿಮಠರು ಇದನ್ನು ಗಮನಿಸದೆ ಪುಸ್ತಕದ ಕೊನೆಯಲ್ಲಿ ಬಹಳಷ್ಟು ಅಚ್ಚಿನ ದೋಷಗಳು ಬಂದಿದ್ದು ಓದಲು ಹಿಂಸೆಯಾಗುತ್ತದೆಯೆಂದು ಬರೆದಿದ್ದಾರೆ!

ನನ್ನ ಪುಸ್ತಕಗಳ ಹಾಗೆ ಈ ಲೇಖನದಲ್ಲೂ ನಾನು ಸಾಕಷ್ಟು ಸಂಸ್ಕೃತ ಪದಗಳನ್ನು ಬಳಸಿದ್ದೇನೆ. ಯಾಕೆಂದರೆ ಎರವಲು ಪದಗಳನ್ನು ಬಳಸಲೇಬಾರದೆಂದೇನೂ ನಾನು ವಾದಿಸುತ್ತಿಲ್ಲ. ಅವುಗಳ ಪ್ರಮಾಣವನ್ನು ಆದಷ್ಟು ಕಡಿಮೆಮಾಡಬೇಕು ಮತ್ತು ಅವುಗಳ ಸ್ವರೂಪ ನಮ್ಮ ಉಚ್ಚಾರಣೆಗೆ ಸರಿಯಾಗಿ ಬದಲಾಗಬೇಕು ಎಂಬುದೇ ನನ್ನ ಮುಖ್ಯ ವಾದ. ಸಂಸ್ಕೃತ ಪದಗಳನ್ನು ಬಿಟ್ಟು ಇತರ ಭಾಷೆಗಳ ಪದಗಳ ಸ್ವರೂಪವನ್ನು ನಾವು ಆ ರೀತಿ ಬದಲಾಯಿಸಿಕೊಳ್ಳುತ್ತೇವೆ; ಸಂಸ್ಕೃತ ಪದಗಳನ್ನು ಮಾತ್ರ (ಹೆಚ್ಚು) ಬದಲಾಯಿಸುವುದಿಲ್ಲ. ಅವನ್ನೂ ಹಾಗೆಯೇ ಬದಲಾಯಿಸೋಣ; ಯಾಕೆಂದರೆ, ಹಾಗೆ ಮಾಡಿದಲ್ಲಿ ನಮ್ಮ ಬರಹದಲ್ಲಿರುವ ಹಲವು ಸ್ಪೆಲ್ಲಿಂಗ್ ಸಮಸ್ಯೆಗಳು ಇಲ್ಲವಾಗಬಹುದು. ಇದು ನನ್ನ 'ಗಂಭೀರ' ಚಿಂತನೆ. ನನ್ನ ಮುಂದಿನ ಪುಸ್ತಕ ('ಕನ್ನಡ ನುಡಿ ನಡೆದು ಬಂದ ದಾರಿ')ಯಲ್ಲಿ ಇದನ್ನು ಕಾರ್ಯರೂಪಕ್ಕೆ ಇಳಿಸಲಿದ್ದೇನೆ. ಬೆಕ್ಕಿನ ಕೊರಳಿಗೆ ಗಂಟೆ ಕಟ್ಟಲಿದ್ದೇನೆ.

ಸರ್ವಸಮ್ಮತ ಸಮಗ್ರ ವ್ಯಾಕರಣ ರಚನೆ

ಬಿ. ಬಿ. ರಾಜಪುರೋಹಿತ

'ಪ್ರಜಾಸಾಹಿತ್ಯ'ದ ನವಂಬರ್ ೨೦೦೬ರ ಸಂಚಿಕೆಯಲ್ಲಿ ಪ್ರಕಟವಾದ 'ಡಾ। ಡಿ. ಎನ್. ಶಂಕರಭಟ್ಟರ ಕನ್ನಡ ವ್ಯಾಕರಣ ಕೃತಿಗಳ ಅವಲೋಕನ' ಎಂಬ ನನ್ನ ಲೇಖನವನ್ನು ಕುರಿತು ಭಟ್ಟರು ಕೊಟ್ಟ ಉತ್ತರದ ಪ್ರತಿಯನ್ನು ಪರಿಹರಪ್ರಿಯ ಅವರು ನನಗೆ ಕಳಿಸಿಕೊಟ್ಟಿದ್ದಾರೆ. ವ್ಯಾಕರಣದಂಥ ಶಾಸ್ತ್ರೀಯ ವಿಷಯಗಳನ್ನು ಓದುವ ಕನ್ನಡಿಗರು ಬಹಳ ಅಪರೂಪ; ಆದುದರಿಂದ ತಾವು ಇಂಗ್ಲೀಷಿನಲ್ಲಿ ಬರೆಯಲಾರಂಭಿಸಿದರು ಎಂದೂ 'ತಮ್ಮ ಇಂಗ್ಲೀಷ್ ಕೃತಿಗಳನ್ನು ಅಂತಾರಾಷ್ಟ್ರೀಯ ಖ್ಯಾತಿಯ ಪ್ರಕಟನ ಸಂಸ್ಥೆಗಳು ಪ್ರಕಟಿಸಿರುವವದಾಗಿಯೂ ಅವುಗಳಿಗೆ ವಿಮರ್ಶಕರ ಮನ್ನಣೆ ದೊರೆತಿರುವ ದಾಗಿಯೂ ಹೇಳಿದ್ದಾರೆ. ಭಟ್ಟರ ವಿದ್ವತ್ತನ್ನಾಗಲಿ ಅವರ ಲೇಖನ ಸಾಮರ್ಥ್ಯವನ್ನಾಗಲಿ ಯಾರೂ ಪ್ರಶ್ನಿಸುವದಿಲ್ಲ. ಅವರು ಖಂಡಿತವಾಗಿ ಬಹುಶ್ರುತ ಪಂಡಿತರು. ಸಂಸ್ಕೃತ ಮತ್ತು ಇಂಗ್ಲೀಷ್ ಅವರ ಗಟ್ಟಿ ಹಿಡಿತ. ಆದರೆ ಕನ್ನಡ ವ್ಯಾಕರಣಗಳ ಸಂಸ್ಕಾರ ಅವರಿಗೆ ಆಗಿಲ್ಲ. ಇದರಿಂದಾಗಿ ಅವರು ಕನ್ನಡದಲ್ಲಿ ಬರೆದ ಗ್ರಂಥಗಳಲ್ಲಿ ವ್ಯಕ್ತಪಡಿಸಿದ ವಿಚಾರಗಳನ್ನು ಪ್ರಶ್ನೆ ಮಾಡದೇ ಸ್ವೀಕರಿಸುವದು ಕಷ್ಟವಾಗುತ್ತದೆ. ಏಕೆಂದರೆ ವ್ಯಾಕರಣದಂಥ ವಿಷಯಕ್ಕೆ ಕನ್ನಡದಲ್ಲಿ ಸಾವಿರ ವರ್ಷಕ್ಕೂ ಮಿಕ್ಕಿದ ಇತಿಹಾಸವಿದೆ. ಪರಂಪರಾಗತ ಕನ್ನಡ ವ್ಯಾಕರಣ ಗ್ರಂಥಗಳಲ್ಲಿ ಹೇಳಲಾದ ವಿಷಯಗಳಲ್ಲಿ ತಪ್ಪಿದ್ದರೆ, ಅಶಾಸ್ತ್ರೀಯ ವಿಷಯಗಳಿದ್ದರೆ ಮುಂದಿನ ತಿಳುವಳಿಕೆಗಾಗಿ ಅವುಗಳನ್ನು ಸರಿಪಡಿಸುವದು ವಿವೇಕ ವಾಗುತ್ತದೆ. 'ಕನ್ನಡದ ವೈಯಾಕರಣರು ಸಂಸ್ಕೃತ ವ್ಯಾಕರಣಗಳನ್ನು ಅನುಸರಿಸಿದರು' ಎಂಬ ಒಂದೇ ಕಾರಣಕ್ಕಾಗಿ ಅವುಗಳನ್ನು ತ್ಯಜಿಸಬೇಕು ಎಂಬುದು ವಿವೇಕಿಗಳಿಗೆ ಒಪ್ಪಿಗೆಯಾಗುವದಿಲ್ಲ. ಸಂಸ್ಕೃತ ವ್ಯಾಕರಣ ಕನ್ನಡವನ್ನು ಎಷ್ಟರ ಮಟ್ಟಿಗೆ ವರ್ಣಿಸಲು ಶಕ್ತವಾಗುತ್ತದೆ; ಯಾವ ಭಾಗ ಕನ್ನಡಕ್ಕೆ ಅಗತ್ಯವಿಲ್ಲ; ಎಲ್ಲಿ ಹೆಚ್ಚಿನ ನಿಯಮಗಳು ಬೇಕಾಗುತ್ತವೆ ಎಂಬುದನ್ನು ಅವಲೋಕಿಸಿ ಕನ್ನಡಕ್ಕೆ ವ್ಯಾಕರಣಗಳನ್ನು ರಚಿಸಲಾಗಿದೆ. ಸಂಸ್ಕೃತದಲ್ಲಿಲ್ಲದ ಅಂಶಿ ಸಮಾಸವನ್ನು ಕನ್ನಡ ವೈಯಾಕರಣರು ಹೇಳಲಿಲ್ಲವೇ? ತೆಲುಗು ಮತ್ತು ಮಲಯಾಳಂ ವೈಯಾಕರಣರೂ ಸಂಸ್ಕೃತ ವ್ಯಾಕರಣವನ್ನೇ ಅನುಸರಿಸಿದ್ದಾರೆ.

ಭಟ್ಟರು 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ' ಎಂಬ ಪುಸ್ತಕದ ಜಾಡಿನಲ್ಲಿ ಅನೇಕ ಪುಸ್ತಕ ಗಳನ್ನು ಬರೆದುದು 'ಸುಗಮ ಸಂಗೀತದ ರೀತಿಯಲ್ಲಿ; ಶಾಸ್ತ್ರೀಯ ಸಂಗೀತದಂಥ ಕಟ್ಟುಪಾಡುಗಳಲ್ಲಿ ಅಲ್ಲ.' ಎಂದೆನ್ನುತ್ತಾರೆ. ಇದು ಖಂಡಿತವಾಗಿಯೂ ಒಳ್ಳೆಯ ಪ್ರಯತ್ನ. ಆದರೆ ಶಾಸ್ತ್ರೀಯ ಸಂಗೀತಕ್ಕೂ ಸುಗಮ ಸಂಗೀತಕ್ಕೂ ಒಂದೇ ತಳಹದಿಯಾದ ಶ್ರುತಿಗಳು ಶುದ್ಧವಾಗಿರಬೇಕು ಎಂದು ಮಾತ್ರ ನಾನು ಹೇಳುವ ಮಾತು. ಅಪಶ್ರುತಿಯಾದರೆ ಎರಡರಲ್ಲೂ ಹಿಂಸೆಯಾಗುತ್ತದೆ. ಶಾಸ್ತ್ರೀಯ ಬರವಣಿಗೆಯಲ್ಲಿ ವಿರೋಧಾಭಾಸಗಳು, ವ್ಯಾಪ್ತಿಯಿಲ್ಲದ ಶಬ್ದ ಪ್ರಯೋಗ, ಸಮ್ಮತವಲ್ಲದ ಶಬ್ದವ್ಯುತ್ಪತ್ತಿ, ಕಾರಣವಿಲ್ಲದ ಆಕ್ರೋಶ ಇವುಗಳಿದ್ದರೆ ಓದುಗನಿಗೆ ಹಿಂಸೆಯಾಗುತ್ತದೆ ಎಂಬ ತತ್ತ್ವವನ್ನು ಭಟ್ಟರೂ ಖಂಡಿತ ಒಪ್ಪುತ್ತಾರೆ. ನನ್ನ ವಿಮರ್ಶೆಯಲ್ಲಿ ಇವುಗಳನ್ನು ಎತ್ತಿ ತೋರಿಸುವದು ಉದ್ದೇಶವಾಗಿತ್ತು.

ಇನ್ನು 'ವೈಯಾಕರಣ' ಪದದ ಬಗ್ಗೆ. ಮೊನೆಯರ್ ವಿಲಿಯಮ್ಸನ ಸಂಸ್ಕೃತ ಕೋಶದಲ್ಲಿ (ಪು.೧೦೨೪) ವೈಯಾಕರಣ ಎಂಬ ಪದದ ಮುಂದೆ mfn ಎಂದು ನಿರ್ದೇಶಿಸಲಾಗಿದೆ. ಅಂದರೆ

ಆದು adj (ವಿಶೇಷಣ) ಎಂದು ತಿಳಿಯಬೇಕೆಂಬ ಸೂಚನೆ ಇದೆ. ಅಲ್ಲಿ 'ವೈಯಾಕರಣೆ' ಪದವಿಲ್ಲ. ಅಂದಮೇಲೆ ಭಟ್ಟರು ಬರೆದಂತೆ 'ವೈಯಾಕರಣಾ ಪದ ಸಂಸ್ಕೃತದಲ್ಲಿ ಸ್ತ್ರೀಲಿಂಗ ಎಂಬುದು ನನಗೂ ತಿಳಿದಿದೆ' ಎಂಬ ಮಾತಿನ ಅರ್ಥವೇನು? ಆಪ್ಟೆ ಸಂಸ್ಕೃತ ಕೋಶದಲ್ಲಿ (ಪು.೮೯೧) 'ವೈಯಾಕರಣ' ಪದದ ಅರ್ಥವನ್ನು 'ವ್ಯಾಕರಣವನ್ನು ಬಲ್ಲವನು; ಅದನ್ನು ಅಧ್ಯಯನ ಮಾಡುವವನು' ಎಂಬ ಅರ್ಥ ಕೊಟ್ಟು ಇದರ ಸ್ತ್ರೀಲಿಂಗ ರೂಪ 'ವೈಯಾಕರಣೀ' ಎಂದು ಕೊಟ್ಟಿದ್ದಾರೆ. (ಣೀ ಎಂಬ ದೀರ್ಘವನ್ನು ಗಮನಿಸಬೇಕು.) ಕಿಟ್ಟೆಲ್ ಕೋಶದ ಮೂಲ ಆವೃತ್ತಿಯ ಪು. ೧೪೩೪ರಲ್ಲಿ 'ವೈಯಾಕರಣ'ಕ್ಕೆ a grammarian ಎಂಬ ಅರ್ಥ ಕೊಟ್ಟು 'ವೈಯಾಕರಣೀ'ಗೆ female grammarian (Sk.) ಎಂಬ ಅರ್ಥವಿದೆ. ಮರಿಯಪ್ಪ ಭಟ್ಟರು ತಿದ್ದಿ ಬೆಳೆಸಿದ ಕಿಟ್ಟೆಲ್ ಕೋಶದ ಪು. ೧೫೧೦ರಲ್ಲಿಯೂ ಇವೇ ಅರ್ಥಗಳಿವೆ. ಮೋನಿಯರ್ ವಿಲಿಯಮ್ಸ್‌ನ ಅರ್ಥಗಳನ್ನು ಹೋಲಿಸಿ ನೋಡಬೇಕು. 'ವ್ಯಾಕರಣವನ್ನು ಬಲ್ಲವನು ವೈಯಾಕರಣ' ಇದು ಶಾಸ್ತ್ರ ಶುದ್ಧ ರೂಪ. ಪ್ರಪಂಚ ಮುಳುಗಿದರೂ ವೈಯಾಕರಣೆ ಅಥವಾ ವೈಯಾಕರಣೀಕ ಎಂದೇ ಬಳಸುತ್ತೇನೆ ಎಂದರೆ ಏನು ಮಾಡಲಿಕ್ಕಾಗುತ್ತದೆ. ಮುಂಗೈ ವರೆಗೆ ಬಂದರೆ ನೆಕ್ಕಬಹುದು. ಮೊಳಕೈಗೆ ಬಂದರೆ ಯಾರು ನೆಕ್ಕುತ್ತಾರೆ!

ದು ಪ್ರತ್ಯಯದ ವಿಷಯದಲ್ಲಿ ಶಬ್ದಾನುಶಾಸನದ ೫೮೦ನೆಯ ಸೂತ್ರದ ಅಡಿಯಲ್ಲಿ ಮ. ಪ್ರ. ಪೂಜಾರರು ಕೊಟ್ಟ ಸಮಾಧಾನವನ್ನು ನಾನು ಉಲ್ಲೇಖಿಸಿದ್ದೇನೆ. 'ಭಿನ್ನ ಕರ್ತೃಕ ವಾಕ್ಯಗಳನ್ನು ದು ಪ್ರತ್ಯಯದಿಂದ ಸೇರಿಸಲಾಗದು, ಏಕ ಕರ್ತೃಕವಿದ್ದಲ್ಲಿ ಸೇರಿಸಬಹುದು' ಎಂಬ ವಿಚಾರಕ್ಕೆ ಪೂಜಾರರು ಕೊಡುವ ಉದಾಹರಣೆಗಳು, 'ಪೆಣನಂ ಕಂಡು ದುಃಖಮಾದುದು, ಪ್ರಿಯಳಂ ಕಂಡು ಸುಖಮಾದುದು' ಎಂಬಲ್ಲಿ ಏಕ ಕರ್ತೃಕತ್ವವಿದೆ. ಆದುದರಿಂದ ಇಲ್ಲಿ 'ಕಂಡು' ಪದದಲ್ಲಿಯ -ದು ಪ್ರತ್ಯಯ ದೋಷವಲ್ಲ. ಆದರೆ ನಾನು ಕೊಟ್ಟ 'ರಾಮನು ಸತ್ತು ಜನರು ಅವನನ್ನು ಸುಟ್ಟು ಬಂದರು.' ಎಂಬ ಉದಾಹರಣೆಯಲ್ಲಿ ಭಿನ್ನ ಕರ್ತೃಕತ್ವವಿದೆ. ಅಲ್ಲದೇ ಅಲ್ಲಿ ಅಡಕವಾದ ವಾಕ್ಯಗಳಲ್ಲಿ ಯಾವ ಸಂಬಂಧವೂ ಇಲ್ಲ. ಆದುದರಿಂದ ಇಲ್ಲಿ ದು ಪ್ರತ್ಯಯ ಅಸಾಧು. ಭಟ್ಟರು ಕೊಡುವ ಉದಾಹರಣೆ 'ಮರ ಬಿದ್ದು ಮನೆಯ ಮಾಡು ಮುರಿಯಿತು' ಎಂಬ ವಾಕ್ಯದಲ್ಲಿ ಭಿನ್ನ ಕರ್ತೃಕತ್ವ ವಿದ್ದರೂ ಕಾರ್ಯ ಕಾರಣ ಸಂಬಂಧವಿರುವದರಿಂದ ಅಲ್ಲಿ ದು ಪ್ರತ್ಯಯ ಸಾಧು. 'ಮಳೆ ಬಂದು ನೆಲವೆಲ್ಲ ಒದ್ದೆಯಾಯಿತು.' ಎಂಬ ಕಾರ್ಯ ಕಾರಣ ಸಂಬಂಧದ ಇನ್ನೊಂದು ವಾಕ್ಯವನ್ನೂ ನೋಡಬಹುದು. 'ಆಗುವಿಕೆಗಳಾದರೆ ಭಿನ್ನ ಕರ್ತೃಕ ವಾಕ್ಯಗಳನ್ನು ದು ಪ್ರತ್ಯಯದಿಂದ ಸೇರಿಸಲು ಸಾಧ್ಯ' ಎಂಬ ಭಟ್ಟರ ಮಾತು ಪೂಜಾರರ 'ಆದುದು' ಎಂದು ಕೊನೆಗೊಳ್ಳುವ ಉದಾಹರಣೆಗಳನ್ನು ಕುರಿತು ಹೇಳಿದಂತಿದೆ. ಇದರಲ್ಲಿ ವಿರೋಧವೇನೂ ಇಲ್ಲ.

ನಾನು ಕೇಳಿದುದು 'ಕೇಕ್ಷ' ಪದದ ವ್ಯುತ್ಪತ್ತಿಯನ್ನು. ಭಟ್ಟರು ಇಂಥ ಅನೇಕ ಪದಗಳನ್ನು ಸೃಷ್ಟಿಸುತ್ತಾರೆ. 'ಪ್ರಶ್ನೆ' ಎಂಬ ಪದಕ್ಕೆ ಬದಲು ಇದನ್ನು ಉಪಯೋಗಿಸಿದ್ದರೆ ಇದರ ಶಾಸ್ತ್ರೀಯ ಅಗತ್ಯವೇನಿತ್ತು? ಸೃಷ್ಟಿಸಿದ ಯಾವುದೇ ಪದದ ವ್ಯುತ್ಪತ್ತಿ ವ್ಯಾಕರಣದ ನಿಯಮಗಳ ಚೌಕಟ್ಟಿನಲ್ಲಿ ಇರದಿದ್ದರೆ ಅರ್ಥ ಪ್ರತೀತಿಯಾಗದು.

ಪ್ರಾತಿಪದಿಕಕ್ಕೆ (ಅಂದರೆ ನಾಮ ಅಥವಾ ಧಾತುವಿಗೆ) ಪ್ರತ್ಯಯ ಸೇರಿ ಪದವಾಗುತ್ತದೆ. ಪ್ರತ್ಯಯವು ಸುಪ್ (ಅಂದರೆ ನಾಮ ವಿಭಕ್ತಿ ಪ್ರತ್ಯಯ) ಆಗಿರಬಹುದು, ತಿಙ್ (ಅಂದರೆ ಕ್ರಿಯಾ ವಿಭಕ್ತಿ ಪ್ರತ್ಯಯ) ಆಗಿರಬಹುದು. (ನೋಡಿ: ಭಟ್ಟಾಕಳಂಕನ ಸೂ.೧೮, 'ಸುಪ್ತಿಙನ್ತಂ ಪದಂ')

ಅಂದರೆ ಯಾವುದೇ inflexional suffix ಪ್ರಾತಿಪದಿಕಕ್ಕೆ ಸೇರಬಹುದು. ಪ್ರಾತಿಪದಿಕದಲ್ಲಿ ಮೂಲರೂಪದೊಡನೆ ಕೃತ್ ಅಥವಾ ತದ್ಧಿತ ಪ್ರತ್ಯಯ (derivational suffix) ಸೇರಿರಬಹುದು. ಅಥವಾ ಅದು ಸಮಸ್ತ ಪದವಿರಬಹುದು. ಇದು ನಮ್ಮ ವೈಯಾಕರಣರು ಕೊಟ್ಟ ತಿಳುವಳಿಕೆ. ಭಟ್ಟರು derivational suffixಗಳನ್ನು 'ಪದ ಪ್ರತ್ಯಯ' ಎಂದೂ inflexional suffixಗಳನ್ನು 'ಪದರೂಪ ಪ್ರತ್ಯಯ' ಎಂದೂ ಕರೆದಿದ್ದಾರೆ. ('ಕನ್ನಡ ಪದಗಳ ಒಳರಚನೆ' ಪು. ೨೪) ಸಮರ್ಥವಾದ ಪರಿಭಾಷೆ ವ್ಯಾಕರಣದಲ್ಲಿ ಮೊದಲೇ ಇರುವಾಗ ಹೀಗೆ ಹೊಸ ಪರಿಭಾಷೆಯನ್ನು ಸೃಷ್ಟಿಸಬೇಕಾದ ಅನಿವಾರ್ಯತೆ ಏನಿತ್ತು? 'ಪಾರಿಭಾಷಿಕ ಪದಗಳು ಬೇಕಿದ್ದಲ್ಲಿ ಅವನ್ನು ಹೊಸದಾಗಿ ಸೃಷ್ಟಿಸಿಕೊಳ್ಳದೆ ಬೇರೆ ದಾರಿಯೇ ಇಲ್ಲ.' ಎಂದು ಭಟ್ಟರು ಹೇಳುವಾಗ 'ಯಾಕೆ ಬೇಕು' ಎಂಬ ಪ್ರಶ್ನೆಗೆ ಸಮರ್ಪಕವಾದ ಉತ್ತರ ಸಿಗುವ ವರೆಗೆ ಇವೆಲ್ಲ ಪಾಮರರನ್ನು ಆಶ್ಚರ್ಯಚಕಿತರನ್ನಾಗಿ ಮಾಡುವ ಅಥವಾ ಅವರನ್ನು ದಾರಿ ತಪ್ಪಿಸುವ ವಿಧಾನವೆಂದೇ ಅನಿಸುತ್ತದೆ. ಉತ್ತರ ಸಿಕ್ಕರೆ ಎಲ್ಲವನ್ನೂ ಒಪ್ಪಿಕೊಳ್ಳಬಹುದು.

ಭಟ್ಟರ ಬರವಣಿಗೆಯಲ್ಲಿಯ ಶಾಸ್ತ್ರೀಯ ಶಿಥಿಲತೆಯನ್ನು ನಿರೂಪಿಸಲು ಅವರ ಪುಸ್ತಕಗಳಿಂದ ಅನೇಕ ಉದಾಹರಣೆಗಳನ್ನು ಕೊಡಬಹುದು. ಪ್ರಕೃತ ಅವರ '...ಕೃತಿವಿಮರ್ಶೆಗೆ ಉತ್ತರ' ಎಂಬ ಲೇಖನದಿಂದಲೇ ಒಂದು ವಾಕ್ಯ ಉಲ್ಲೇಖಿಸಬಹುದು. 'ಕೃದಂತಗಳು ಕನ್ನಡದಲ್ಲಿ ಗುಣಪದಗಳು ಸಂಸ್ಕೃತದ ಹಾಗೆ ನಾಮಪದಗಳಲ್ಲ.' ಎಂಬ ಕೃದಂತಗಳನ್ನು ಲಕ್ಷಣಿಸುವ ಮಾತನ್ನೇ ನೋಡಬಹುದು. ಇದುವರೆಗೆ ವ್ಯಾಕರಣದಲ್ಲಿ ಇರುವ ತಿಳುವಳಿಕೆ ಎಂದರೆ, ಧಾತುವಿಗೆ ಕೃತ್‌ಪ್ರತ್ಯಯ ಸೇರಿ ಕೃದಂತಗಳಾಗುತ್ತವೆ. (ಭಟ್ಟರು ಕೃದಂತಾಂತ ಎಂದೂ ಬಳಸಿದ್ದಾರೆ!! ಇರಲಿ.) ಕೃದಂತಗಳು ಕೃನ್ನಾಮ (=ಕೃದಂತ ನಾಮ), ಕೃದ್ಭಾವನಾಮ, ಕೃದಂತಾವ್ಯಯ ಎಂದು ಮೂರು ವಿಧ. ಉದಾಹರಣೆಗೆ, (೧) ಮಾಡಿದ, ನೋಡುವ, ಕೇಳದ ಮೊದಲಾದವು ಕೃನ್ನಾಮಗಳು. ಇವುಗಳನ್ನು ವಿಶೇಷಣಗಳಂತೆಯೂ ಉಪಯೋಗಿಸಬಹುದು. (೨) ಬರುವಿಕೆ, ತರುವದು ಮೊದಲಾದವುಗಳು ಕೃದ್ಭಾವನಾಮಗಳು. (೩) ನಗುತ್ತ, ಹೊರಟು, ಬಂದು ಮೊದಲಾದವುಗಳು ಕೃದಂತಾವ್ಯಯಗಳು. ಈ ಮೂರೂ ಪ್ರಕಾರಗಳಲ್ಲಿ ಮತ್ತೆ ಉಪಭೇದಗಳನ್ನು ಮಾಡಲಾಗಿದೆ. (ನೋಡಿ, ಮ.ಪ್ರ.ಪೂಜಾರರ 'ಕನ್ನಡ ನುಡಿಗನ್ನಡಿ' ಪು.೪೪-೫೩) ಭಾಷಾವಿಜ್ಞಾನದ ತಿಳುವಳಿಕೆಯ ಪ್ರಕಾರ ಈ ವಿವರಣೆಯನ್ನು ಇನ್ನೂ ನಿಖರವಾಗಿ ಮಾಡಬಹುದು. ಭಟ್ಟರ 'ಕೃದಂತಗಳು ಕನ್ನಡದಲ್ಲಿ ಗುಣಪದಗಳು ಸಂಸ್ಕೃತದ ಹಾಗೆ ನಾಮಪದಗಳಲ್ಲ.' ಎಂಬ ಮಾತು ಮೇಲಿನ ವಿವರಣೆಯ ಒಂದು ಭಾಗವನ್ನು ನಿರೂಪಿಸುತ್ತದೆ. ಸಮಗ್ರ ಚಿಂತನೆ ಮಾಡಿ ನಿಯಮ ಮಾಡಬೇಕೇ ಹೊರತು ಭಾಗಶಃ ಬಂದ ತಾತ್ಕಾಲಿಕ ಆಲೋಚನೆಯೇ ಕೊನೆಯ ಮಾತು ಎಂಬಂತೆ ಆಡಿದರೆ ವ್ಯಾಕರಣದಂಥ ಶಾಸ್ತ್ರೀಯ ಬರವಣಿಗೆಯಲ್ಲಿ ಪ್ರಮಾದವಾಗುತ್ತದೆ.

ಭಟ್ಟರು ಎಲ್ಲಿಯ ವರೆಗೆ ವ್ಯವಸ್ಥಿತ ರೀತಿಯಲ್ಲಿ ಸರ್ವಸಮ್ಮತವಾಗುವಂಥ ಸಮಗ್ರ ವ್ಯಾಕರಣ ರಚನೆಯನ್ನು ಮಾಡುವದಿಲ್ಲವೋ ಅಲ್ಲಿಯ ವರೆಗೆ ಅವರು ಆಡುವ ಮಾತೆಲ್ಲ ಶಿಥಿಲವಾದ ಉಡಾಫೆಯ ಮಾತಾಗುತ್ತದೆ ಎಂಬ ಮಾತನ್ನು ಭಟ್ಟರ ಬಗೆಗಿನ ಗೌರವದಿಂದಲೇ ಪುನಃ ಹೇಳುತ್ತೇನೆ. ಅವರ ಉತ್ತರಕ್ಕೆ ಬರೆದ ನನ್ನ ಈ ಪ್ರತಿಕ್ರಿಯೆಯಲ್ಲಿಯೂ ಅವರ ಬರವಣಿಗೆಯಲ್ಲಿಯ ಶಾಸ್ತ್ರೀಯ ಶಿಥಿಲತೆಯನ್ನು ಎತ್ತಿ ತೋರಿಸಿದ್ದೇನೆ.

□

ನಾಟಕಲೋಕಕ್ಕೆ ಒಳ್ಳೆಯ ಸೇರ್ಪಡೆ

ಜಯಪ್ರಕಾಶ ಮಾವಿನಕುಳಿ

ನಾನು ಬಾಲ್ಯದಲ್ಲಿ 'ಮಹಾಭಾರತದ ಮಹಾ ಸಾಗರ'ದ ಕಥೆಗಳನ್ನು ಕೇಳುವಾಗ ಅನೇಕ ಪ್ರಸಂಗಗಳು ನನ್ನನ್ನು ದಟ್ಟವಾಗಿ ಆವರಿಸಿಕೊಂಡು ಸ್ಥಿರವಾಗಿ ನನ್ನ ಮನಸ್ಸಿನಲ್ಲಿ ನಿಂತು ಬಿಟ್ಟಿದೆ. ಅವುಗಳಲ್ಲಿ ಒಂದು ಏಕಲವ್ಯನ 'ಗುರುಭಕ್ತಿ' ಪ್ರಸಂಗ. ಗುರುಭಕ್ತಿ ಎಂದು ಯಾಕೆ ಹೇಳಿದೆ ಎಂದರೆ – ಮಾತೃದೇವೋಭವಃ, ಪಿತೃ ದೇವೋಭವಃ ಮತ್ತು ಆಚಾರ್ಯದೇವೋಭವಃ – ಎಂಬ ಪರಿಸರದ ನನಗೆ ಮತ್ತೆ ನನ್ನ ಬಾಲ್ಯದಲ್ಲಿ ದ್ರೋಣಾಚಾರ್ಯರು – ಆಚಾರ್ಯರ ತದ್ರೂಪರಂತೆ ಕಂಡಿದ್ದರಿಂದ ಅಲ್ಲಿ ಏಕಲವ್ಯ– ಅಪರಿಚಿತ ಗುರುವಿನ ಆಜ್ಞೆಯನ್ನು ಪರಿಪಾಲಿಸುವುದು ಗುರುಭಕ್ತಿ ಅದ್ವಿತೀಯವಾದುದು ಹಾಗೇ ಎನಿಸುತ್ತಿತ್ತು.

ಆನಂತರ ಕುವೆಂಪು ಅವರ 'ಬೆರಳ್ ಗೆ ಕೊರಳ್' ಓದುವ ಪ್ರಸಂಗ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಜರಿದಾಗ – ನಾಟಕ ನೋಡಿದಾಗ ಇಡೀ ಕಥಾಪ್ರಸಂಗಕ್ಕೆ ಒಂದು ಹೊಸ ಅರ್ಥ ಕಂಡಿತು. ಈ ಹೊಸ ಹೊಳವು ಇನ್ನೂ ಹೊಸ ಅರ್ಥವನ್ನು – ವಿಶ್ಲೇಷಣೆಯನ್ನು – ಇನ್ನೂ ಹೊರಡಿಸುತ್ತಲೇ ಇದೆ. ಇದಲ್ಲವೇ ಸಾಹಿತ್ಯಗರಿಕೆದರಿ ಕುಣಿಯುವ ಪರಿ! ಬೇರೆ ಬೇರೆ ತಲೆಮಾರಿಗೆ ಸೇರಿದ ವಿವಿಧ ಲೇಖಕರು ಈ ನಾಟಕದ ವಸ್ತು (Content) ವನ್ನು ತಮ್ಮ ಪ್ರತಿಭೆಯ. ನೋಟಗಳಿಗೆ ಅನುಸಾರವಾಗಿ ರೂಪುಕೊಟ್ಟಿದ್ದಾರೆ ಮತ್ತು ತಮ್ಮದೇ ವಾದವನ್ನು ಮುಂದೆ ಇಟ್ಟಿದ್ದಾರೆ, ಇಡುತ್ತಿದ್ದಾರೆ. ಹೀಗಾಗಿ ಒಂದು ವಸ್ತು, ಘಟನೆ ಸತ್ವವಾಗಿದ್ದರೆ ನಿರಂತರವಾಗಿ ಸೃಜನಶೀಲ ಲೇಖಕರನ್ನು ಕಾಡುತ್ತಾ ಕೆಣಕುತ್ತಾ ಬಂದಿದೆ. ೧೨ನೇ ಶತಮಾನದ ಬಸವಣ್ಣನ ಕ್ರಾಂತಿಕಾರಿಕ ವಿಷಯಗಳು ನಮ್ಮ ಅನೇಕ ನಾಟಕಕಾರರನ್ನು ಕೆಣಕಿದಂತೆ. ಹೀಗೆ ಐತಿಹಾಸಿಕ ಘಟನೆಯನ್ನು ಸಮಕಾಲೀನತೆಗೆ ತಂದು ವಿಶ್ಲೇಷಿಸುವ ಪ್ರಕ್ರಿಯೆ ಒಂದಾದರೆ ಪೌರಾಣಿಕ ಘಟನೆಗಳನ್ನು ಅರ್ಥೈಸುವಾಗ ಇನ್ನೂ ಹೆಚ್ಚು ಸ್ವಾತಂತ್ರ್ಯವನ್ನು ಲೇಖಕ ತೆಗೆದುಕೊಳ್ಳಬಹುದು. ಐತಿಹಾಸಿಕ ಘಟನೆಗೆ ಕೊನೇಪಕ್ಷ ನಮ್ಮ ಧೋರಣೆಯ ಒಲವಿನ ಇತಿಹಾಸಕಾರರನ್ನು (ಎಡ–ಬಲ) ಸಮರ್ಥನೆಗೆ ಆಧಾರವಾಗಿಟ್ಟುಕೊಂಡು ವಾಗ್ವಾದ ಮಾಡಬಹುದು (ಟಿಪ್ಪು ಬಗ್ಗೆ ಮಾಡಿದ ಹಾಗೆ) ಅದಕ್ಕೊಂದು ಸಂಧಿಸುವ ಘಳಿಗೆ (End Print) ಇಲ್ಲ. ಏಕೆಂದರೆ ಅವರ ಹೋರಾಟದಾರಿಗಳೇ ವಿಭಿನ್ನವಾಗಿವೆ. ಹೀಗಾದಾಗ ಅವರು ಕುಳಿತು ಎಲ್ಲಿ ಮಾತಾಡಲು (Meeting point) ಜಾಗವೆಲ್ಲಿದೆ? ಪೌರಾಣಿಕ ಘಟನೆಗಳಿಗೂ ಸಂದ ಕೆಲವು ಪುರಾಣ ಗ್ರಂಥಗಳನ್ನು ಋಣಾಪಿಟ್ಟುಕೊಂಡು ವಾಗ್ವಾದ ಮಾಡುವುದಕ್ಕೆ ಜಾಗ (Space) ಸ್ವಲ್ಪ ವಿಶಾಲವಾಗಿದೆ ಎಂದು ನನ್ನ ಅನಿಸಿಕೆ. ಹೀಗೆ ಮಾಡಿದಾಗ 'ಹಾಗೂ ಇರುವ ಸಾಧ್ಯತೆ ಇರಬಹುದು' ಎಂದು ಒಳಮನಸ್ಸು ಒಂದುಕ್ಷಣ ಹೇಳಿಬಿಡುವ ಸಂಭವವಿದೆ. ಹಾಗೇ ಬಹುಜನರು ಹೇಳುವ ಮನಸ್ಸು ಮಾಡಿದರೆ ನಾಟಕದ ಸಾರ್ಥಕತೆ ಇರುತ್ತದೆ (ಬಹುಜನರು ಎಂಬುದನ್ನು Mejority ಎಂಬ ಅರ್ಥದಲ್ಲಿ ಇಲ್ಲಿ ಹೇಳುತ್ತಿಲ್ಲ).

ಹೀಗಾಗಿ 'ಏಕಲವ್ಯ'ನ ಪಾತ್ರ ತುಂಬಾ ಮುಖ್ಯವಾದ ಘಟನೆಯನ್ನು ಹೇಳುವ ಪಾತ್ರ. ಆತನ ಗುರು ಭಕ್ತಿ, ಅರ್ಜುನನ ದ್ವೇಷ, ಅಸೂಯೆ, ದ್ರೋಣಾಚಾರ್ಯರ ಪಾಪಪ್ರಜ್ಞೆಯ ಪರೀಕ್ಷೆ, ಗುಂಗುಹಿಡಿಸಿ... ಎಲ್ಲಾ ಸ್ವರಗಳನ್ನು ಹೊರಡಿಸುತ್ತಿವೆ. ಹೀಗಿದ್ದರೂ ಪಂಪ, ರನ್ನ, ಕುಮಾರವ್ಯಾಸರಂಥ ಕವಿಗಳು ಏಕಲವ್ಯನ ಪಾತ್ರವನ್ನು ಕಡೆಗಣಿಸಿದರೇಕೆ? ಎಂಬುದು ತುಂಬಾ ಮಹತ್ವದ ಪ್ರಶ್ನೆಯಾಗಿದೆ ಈ ಪ್ರಶ್ನೆಯನ್ನು ಎತ್ತಿಕೊಂಡು ಡಾ. ಅಶೋಕ ನರೋಡೆಯವರು ಹೇಳುವಂತೆ "ಹೊಸಗನ್ನಡ

ಸಾಹಿತ್ಯದಲ್ಲಿ ಪಾಶ್ಚಾತ್ತರ ಪ್ರಭಾವದಿಂದಾಗಿ ಹೊಸ ದೃಷ್ಟಿಕೋನವೊಂದು ಬೆಳೆದು ಬಂದಿತು. ಸಾಹಿತ್ಯದಲ್ಲಿ ಪುನರ್‌ಮೌಲ್ಯೀಕರಣ ನಡೆಯಿತು. ಉದಾರತೆ ಮೂಡಿಬಂತು. ಉಪೇಕ್ಷಿತ ಪಾತ್ರಗಳನ್ನು ಎತ್ತಿ ಹಿಡಿಯುವ ಕಾರ್ಯಕ್ಕೆ ಚಾಲನೆ ಸಿಕ್ಕಿತು. ಖಳನಾಯಕರಲ್ಲಿರಬಹುದಾದ ಒಳ್ಳೆಯ ಗುಣಗಳತ್ತ ಬೆಳಕು ಬಿದ್ದಿತು... ಅಂಥ ಒಂದು ಸಂದರ್ಭದಲ್ಲಿ ಕೈಲಾಸಂ ಅವರು ಏಕಲವ್ಯನ ಜಮುಕಸ್ಸೇ ಕೇಂದ್ರವಾಗಿಟ್ಟುಕೊಂಡು ಪರ್ಪಜ್ (ಉದ್ದೇಶ), ಫುಲ್‌ಫಿಲ್‌ಮೆಂಟ್(ಸಾಫಲ್ಯ) ಮತ್ತು ಎಕ್ಸ್‌ಪಯಿಶನ್ (ಪ್ರಾಯಶ್ಚಿತ್ತ) ಎಂಬ ಮೇರು ನಾಟಕಗಳನ್ನು ಬರೆದರು". ಆನಂತರ ಅವರೇ ಹೇಳುವಂತೆ ಬಿ.ಎಂ.ಶ್ರೀ., ಗೋವಿಂದ ಪೈ, ಕುವೆಂಪು, ಕಾಶಿವಿಶ್ವನಾಥ ಶೆಟ್ಟಿ, ಅಣ್ಣಯ್ಯ, ಮೇಘಮಿತ್ರ, ಪ್ರೊ. ಮಲ್ಲಿಕಾರ್ಜುನನ ಹಿರೇಮಠ್, ರವಿಉಪಾಧ್ಯ, ಡಾ. ಸಿದ್ಧಲಿಂಗಯ್ಯ, ಡಾ. ಚೆನ್ನಣ್ಣವಾಲೀಕಾರ, ಡಾ. ಶ್ರೀಪಾದ ಶೆಟ್ಟಿ, ಮೊದಲಾದವರು ನಾಟಕಗಳನ್ನು ತಮ್ಮ ಭಿತಿಯಲ್ಲಿ ಕಂಡಂತೆ ವ್ಯಾಖ್ಯಾನಿಸಿದರು.

ಇಷ್ಟು ಸುದೀರ್ಘವಾದ ಪೀಠಿಕೆ ರೂಪದ ಮಾತುಗಳನ್ನು ಯಾಕೆ ಬರೆದೆ ಎಂದರೆ ಇತ್ತೀಚೆಗೆ ಏಕಲವ್ಯನನ್ನ ಕುರಿತು ಹರಿಹರಪ್ರಿಯರು ಬರೆದ ನಾಟಕ 'ದಾರುಣಭಾರತ'. ನಾಟಕಕ್ಕೆ ಇಟ್ಟ ಹೆಸರು ಧ್ವನಿವ್ಯವಸ್ಥೆಯಲ್ಲಿನ ದೋಷವನ್ನು ಅತ್ಯಂತ ಡಾಳಾಗೆ ಇಲ್ಲಿ ನೋಡಬಹುದು. ಹೀಗಿದ್ದರೂ ಈ ಏಕಲವ್ಯನ ಪ್ರಸಂಗದಲ್ಲಿ ಮೂರುವರ್ಣದವರ ಮುಖಾಮುಖಿ. ದ್ರೋಣ (ಬ್ರಾಹ್ಮಣ), ಅರ್ಜುನ (ಕ್ಷತ್ರಿಯ), ಮತ್ತು ಏಕಲವ್ಯ (ಶೂದ್ರ). ಅಥವಾ ಬುಡಕಟ್ಟು, ದ್ರಾವಿಡ, ಆದಿವಾಸಿ ಹೀಗೆಂದು ಕೊಳ್ಳಬಹುದು. ಬ್ರಹ್ಮತೇಜೋ ಬಲಂಬಲಂ ಎಂಬ ದ್ರೋಣನ ಅಂತಃಸತ್ವ ಅನೇಕ ಘಟನೆಗಳಿಂದ (ದ್ರುಪದನಮುಖ ಭಂಗ) ವೈಯಕ್ತಿಕ ದ್ವೇಷಗಳಿಂದ ಕುಸಿದಿದೆ. ಕ್ಷತ್ರಿಯ ತೇಜಸ್ಸು ಪ್ರಕಾಶಮಾನವಾಗಿ ಬ್ರಹ್ಮ ತೇಜಸ್ಸು ಕ್ಷೀಣವಾಗಿದೆ. ಅದು ಸ್ಪಷ್ಟವಾಗಿ ಏಕಲವ್ಯನ ಪ್ರಸಂಗದಲ್ಲಿ ನೋಡಬಹುದು.

'ಹ ಹ್ಹಹ್ಹ ತ್ರಿಕರಣ ಶುದ್ಧ ಬ್ರಾಹ್ಮಣರೇ ನೀವು.... ನೀವು ಯಾರು?' ಎಂದು ಭೂತಗಳು (ಪುಟ ೫೨) ಹೇಳುವ ಮಾತು ಅತ್ಯಂತ ಧ್ವನಿಪೂರ್ಣವಾಗಿದೆ. ಬೇರೆ ಯಾರ ನಾಟಕಗಳಲ್ಲೂ ಕಾಣದ ಭೂತಗಳ ಸೃಷ್ಟಿ (ಷೇಕ್ಸ್‌ಪಿಯರ್‌ನ ಮ್ಯಾಕ್‌ಬತ್ ನೆನಪಾದರು) ದ್ರೋಣನಂಥವರನ್ನು ಬೆತ್ತಲು ಮಾಡುವ – ನಿಜ ಬ್ರಾಹ್ಮಣ್ಯವನ್ನ ಎತ್ತಿ ತೋರಿಸುವ ಅಂಶವಾಗಿದೆ. ನಿಜಕ್ಕೂ ಮಹಾಭಾರತ ದಲ್ಲಿ ದ್ರೋಣನ ಪಾತ್ರ ತುಂಬಾ ದುರಂತಮಯವಾದದ್ದು. ಬ್ರಾಹ್ಮಣನಾಗಿ ಹುಟ್ಟಿ, 'ಆಧ್ಯಾತ್ಮಿಕ ಸಂಪತ್ತಿಗೆ ಒಡೆಯನಾಗಿ', ಹಿಡಿಯಬಾರದ ಕತ್ತಿಯನ್ನು ಹಿಡಿದು ಹೋರಾಡಿ, ಕೊನೆಗೆ ಎಂಥ ಸಾವು..... ಆ ಲೆಖ್ಖದಲ್ಲಿ ಅಮ್ಮನ ಪಾತ್ರಕ್ಕೆ ಮಹತ್ವ ಕಡಿಮೆಯೇ... ಅವನದು ಒಂದೇ ಗುರಿ 'ಅಧಿಕಾರಪಡೆಯುವುದು', ಪ್ರತಿಷ್ಠಾಪಿಸುವುದು, ಮುಂದುವರೆಸುವುದು. ಅದು ಕ್ಷತ್ರಿಯ ಗುಣಕೂಡ. ಆದರೆ ಇದಕ್ಕೆ ಸವಾಲು ಹಾಕಿದವನು ಏಕಲವ್ಯ, ತನ್ನ ಅಸ್ತಿತ್ವಕ್ಕೆ ಆತ ಬೆದರಿಕೆ ನೀಡುವ ಸಂಭವದ ಸುಳಿವು ಅರಣ್ಯದಲ್ಲಿ ದೊರಕುತ್ತದೆ.

ಹರಿಹರಪ್ರಿಯರ ನಾಟಕದ 'ಪ್ರಸಂಗ; ಮೊದಲು' ಕಾಣುವುದು ಕಾಡಿನ ಜನರು ಮಾತನಾಡುವುದ ರಿಂದ (ಪಾತ್ರಗಳಿಗೆ ಹೆಸರು ಹೇಳದಿರುವುದು ಒಂದು ನೂತನ ಪ್ರಯೋಗವಾಗಿದೆ) 'ಏಕಲವ್ಯನನ್ನು ಮುಂದಿಟ್ಟುಕೊಂಡು ಆ ಅಸ್ತಿನಾಪುರಕ್ಕೆ ಈಗಂದ್ರೆ ಈಗ್ಲೆ ಓಗೋದೆಯ' ಎಂದು ಮಾತಾಡಿಕೊಂಡರು ಅದು ಫಲಪ್ರದವಾಗದಿದ್ದರು, ಅದನ್ನು ಪ್ರೇಕ್ಷಕರ ಮುಂದೆ ಸಾರಾಸಗಟಾಗಿ ಇಡುತ್ತಾರೆ. ಮತ್ತು ಪ್ರಶ್ನೆ ಕೇಳುತ್ತಾರೆ.

ಇವತ್ತಿನ ಸಂಘರ್ಷ ಇರುವುದು – ನಗರ ಮತ್ತು ಹಳ್ಳಿಗಳ ನಡುವೆ. ಹೀಗಾಗಿ ಇದು 'ನಮ್ಮ ನಡುವಿನ ಹೀಗೊಂದು ಪ್ರಸಂಗ'. ಇಂಥ ಮಾತು ನಾಟಕದ 'ಪ್ರಸಂಗ ಎರಡು' ಕಾಣುತ್ತದೆ – "ತಮ್ದಲ್ಲದ ಕಾಡಿಗೆ ನುಗ್ಗಿ ಬಂದ ತಪ್ಪಿಗೆ ಜಾಗ ಖಾಲಿ ಮಾಡಬೇಕಾದ್ದು ಆ ನಿನ್ನ ರಾಜಕುಮಾರ್ರು, ಅದು ಬುಟ್ಟು ನನ್ನ ಓಡಿಸೋ ಸಂಚು ಹೂಡ್ತಾ ಇದ್ದೀಯಲ್ಲ ಇದೆಯಾ ನಿಮ್ಮ ಪಟ್ಟಣದೋರಬುದ್ಧಿ?" ಸೂಕ್ಷ್ಮವಾಗಿ ಪಟ್ಟಣ ಮತ್ತು ಕಾಡಿನ ನಡುವಿನ ಸಂಘರ್ಷವನ್ನು ನಮ್ಮಕಣ ಮುಂದೆ ತರುತ್ತದೆ.

ಓಗಾಗಿ ಪರಿಸರದ ಮೊದಲ ಪ್ರತಿಪಾದಕ ಏಕಲವ್ಯನೇ. ಅಂದರೆ ಹರಿಹರಪ್ರಿಯರ ನಾಟಕದಲ್ಲಿ ಅವರು ಹೇಳಿದ ಹಾಗೆ "...ಈ ಪ್ರಾಣಿ ಪಕ್ಷಿ ಹುಳ ಹುಪ್ಪಟೆ ಅಗೋ ಅಲ್ಲಿ ಕೇಳಿಸ್ತಾ ಅದಲ್ಲ. ಝುರಿನಾದ! ಈ ಎಲ್ಲದ್ರ ಪುಳಕ, ಕಲರವ, ಸುವಾಸನೆ. ಅದರ ಜೊತಿಗೇ ಇರೋ ನಿರಂಬಳ ನಿರ್ಮಲ ನಿಶ್ಶಬ್ದ. ಇವೇ ಇವೇ ನನ್ನ ಬದುಕು...." (ಪುಟ ೨೮). ಇದರಿಂದ ನಾಟಕ ಭೂಮಿಕೆ ಸ್ಪಷ್ಟವಾಗಿದೆ. ಏಕಲವ್ಯನೆ ಮುಂದುವರೆಸುತ್ತಾ "ವಿದ್ಯೆ ಕಲಿಯೋಕ್ಕೆ ತಮ್ಮ ಪಾಡಿಗೆ ತಾವು ಬದುಕೋಕ್ಕೆ ಯಾಕಯ್ಯ ಈ ದೇಶದಲ್ಲಿ ಇಷ್ಟೊಂದು ಭೇದ ಭಾವ?" (ಪುಟ ೩೬). ಈ ಪ್ರಶ್ನೆ ಇಡೀ ಶೋಷಿತ ಸಮುದಾಯದ ಪ್ರಶ್ನೆಯಾಗಿ ಏಕಲವ್ಯ ಈ ಸಮುದಾಯದ ಮೊದಲ ನಾಯಕನಾಗಿ ಕಂಗೊಳಿಸುತ್ತಾನೆ. ಅರ್ಜುನನ ಅಹವಾಲನ್ನು ಕೇಳಿಸಿಕೊಂಡ ದ್ರೋಣ ಮೊದಲು ಬ್ರಾಹ್ಮಣನಾಗಿ – ನಿಜವಾದ ಗುರುವಾಗಿ – ಮಾತನಾಡುತ್ತಾನೆ.

ನಾಟಕದ ವಸ್ತುವಿನಂತೆ ಸಂಭಾಷಣೆಯೂ ನಾಟಕದ ಜೀವಾಳ. ಹರಿಹರಪ್ರಿಯರ ನಾಟಕದ ಸಂಭಾಷಣೆಯು ಕೇವಲ ಮಾತುಗಳಾಗದೇ ಅದರಲ್ಲಿ ನಾಟಕದ ಸದಾಶಯ ಮತ್ತು ಮುಂದಿನ ಸೂಚನೆಗಳು ಸ್ಪಷ್ಟವಾಗಿ ಸಿಗುತ್ತದೆ :

'ಎಲ್ಲರನ್ನೂ ಮೀರಿಸುವ ಬಿಲ್ಲುಗಾರನನ್ನಾಗಿ ನಿನ್ನನ್ನು ಮಾಡುತ್ತೇನೆ ಎಂದದ್ದೂ ನಿಜ ಅರ್ಜುನ. ಹಾಗೆಂದು ಬೇರೆಯವರ ಪ್ರತಿಭಾಶಕ್ತಿಯನ್ನು ನಾನು ಉಡುಗಿಸಲು ಸಾಧ್ಯವೇ? ಅದು ನಿನ್ನ ಕೈಯಲ್ಲಿ, ನಿನ್ನ ಬೆರಳುಗಳಲ್ಲಿ ಅಡಗಿದೆಯಪ್ಪ!' (ಪುಟ ೪೩). ಬೆರಳುಗಳ ಬಗ್ಗೆ ಪ್ರಥಮಬಾರಿಗೆ ನಾಟಕದಲ್ಲಿನ ಪ್ರಯೋಗ ಮತ್ತು ಮುಂದೆ ಅದರಿಂದ ಒದಗುವ ಭೀಕರತೆಯನ್ನು ಊಹಿಸಬಹುದು. ಸಂಭಾಷಣೆಯ ಜಾಣ್ಮೆಯಿರುವುದು ಇಲ್ಲಿಯೇ. ನಂತರ ಅರ್ಜುನನ ಕ್ಷಾತ್ರ ಮಾತು ಕೇಳಿ ದ್ರೋಣರ ಜಂಘಾಬಲವೇ ಉಡುಗಿಹೋಗುತ್ತದೆ "ನಿಮ್ಮನ್ನು ಸಾಕುತ್ತಿರುವುದು ನಮ್ಮ ಕೈಯೋ ಆ ಬೇಡನ ಕೈಯೋ' (ಪುಟ ೪೩). ಹಾಗೇ ದ್ರೋಣನ 'ತಲೆ ತೆಗೆಯಲಿಕ್ಕು ಹೇಸುವುದಿಲ್ಲ ಅನ್ನುವುದು ನಿನಗೆ ಗೊತ್ತಿಲ್ಲವೇ' (ಪು ೫೫).

ದ್ರೋಣ ಏಕಲವ್ಯನನ್ನು ಮೊದಲಬಾರಿಗೆ ಸಂಧಿಸಿದ ಪರಿ ಚೆನ್ನಾಗಿದೆ. ಏಕಲವ್ಯನ ಉತ್ಸಾಹ ಆತನ ನಿರ್ಮಲ ಮನಸ್ಸನ್ನು ಸಾರಿಹೇಳುತ್ತದೆ. ಗುರುಕೊಟ್ಟಮಾತನ್ನು ಸ್ಥಿರಗೊಳಿಸಲು ಗುರುವಿಗೆ ಕಳಂಕ ತಪ್ಪಿಸಲು ಏಕಲವ್ಯ ತನ್ನ ಹೆಬ್ಬೆರಳನ್ನು ಕತ್ತರಿಸಿಕೊಡುತ್ತಾನೆ. ಕಾಡು ಘೋರ ನೋವಿನಿಂದ ನರಳುತ್ತದೆ.

ಹರಿಹರಪ್ರಿಯರ 'ದಾರುಣ ಭಾರತ'ದಲ್ಲಿ ಕೇವಲ ಏಕಲವ್ಯನಿಗೆ ಆದ ದುಃಖ ಮಾತ್ರ ಇಲ್ಲ. ಅಲ್ಲಿ ದ್ರೋಣನಿಗೂ ಅಷ್ಟೇ ದುಃಖ ಆವರಿಸಿಕೊಂಡಿದೆ. ನಾಟಕದ ಕೊನೆಯಲ್ಲಿ "ಬಟ್ಟ ದೊಡ್ಡೋನಾಗಕ್ಕೆ ಯಾವ ಜಾತಿ ಆಗ್ಲಿ, ಕುಲ ಆಗ್ಲಿ ಇನ್ನೊಬ್ಬನ ಬಾಳು ಆಳು ಮಾಡೋದು ಈ ದೇಶದಾಗೆ ಯಾವ ದರ್ಮ ಅಂತೀನಿ. ಇದರಂಥ ಧಾರುಣ ಸ್ಥಿತಿ ನಾನು ಕಂಡಿಲ್ಲ ಕೇಳಿಲ್ಲ ಬುಡಣ್ಣೋ" (ಪುಟ ೭೮) ಎಂದು ಹೇಳುವ ಕಾಡಿನ ಬೇಡರ ಹೆಂಗಸಿನ ಮಾತು ಇಡೀ ಮನುಕುಲದ ಮೇಲಿನ ಭಾಷ್ಯದಂತಿದೆ. "ಕಾಡಿಗೂ ನಗರಕ್ಕೂ ಇರುವ ವ್ಯತ್ಯಾಸವೆ ಅದು ಅಲ್ಲವೇ ಅರ್ಜುನ? ಕಾಡಿನಲ್ಲಿ ಒರಟು ಭಯ ಹುಟ್ಟಿಸುತ್ತೆ ಮೇಲುನೋಟಕ್ಕೆ ಮಾತ್ರ, ನಗರದಲ್ಲಿ ಎಲ್ಲವೂ ಅಪ್ಯಾಯ, ಸುಂದರ ಅನ್ನಿಸುತ್ತವೆ ಹೊರ ನೋಟಕ್ಕೆ. ಆದರೆ ಎಷ್ಟು ಅಪಾಯ ಅನ್ನುವುದು ಕ್ರಮೇಣ ತಿಳಿಯುತ್ತ ಹೋಗುತ್ತೆ" ನಾಗರಿಕ ಜನ ಎಂದು ಮೋಸಮಾಡುವ ಜನಕ್ಕೂ ಇರುವ ಅಗಾಧ ಅಂತರವನ್ನು, ಕಂದಕವನ್ನು ದ್ರೋಣರು ಸರಿಯಾಗಿ ವಿಶ್ಲೇಷಿಸಿ ನಾಟಕವನ್ನು ಸಮಕಾಲೀನ ಪರಿಸ್ಥಿತಿಯ ವಿಶ್ಲೇಷಣೆ ಮಾಡುತ್ತಾರೆ.

ಹರಿಹರಪ್ರಿಯರು ಸೃಷ್ಟಿಸಿಕೊಂಡಿರುವ ಏಕಲವ್ಯನ ತಂದೆ ಹಿರಣ್ಯ ಮತ್ತು ಏಕಲವ್ಯರುಗಳ ನಡುವೆ ನಡೆಯುವ ಸಂಭಾಷಣೆ ನಾಟಕದ ಆಶಯವನ್ನು ವಿಸ್ತರಿಸಿದೆ. ಅವರ ನಾಟಕ ಹೀಗೇ

ಎಂದು ತೀರ್ಮಾನಿಸಿ ನಿರ್ಧಾರಕ್ಕೆ ಬಂದು ಅದನ್ನೇ ಸಾರುವುದಿಲ್ಲ. ಎಲ್ಲವನ್ನೂ ತೆರೆದು ಇಡುವುದು ಒಂದು ಒಳ್ಳೆಯ ಕೃತಿ; ಎಲ್ಲ ಬಗೆಯ ದೋಷಗಳನ್ನು ಸಾಧ್ಯಾಸಾಧ್ಯತೆಗಳನ್ನು ಬಿಚ್ಚಿ ಇಡುವುದಷ್ಟೇ ಕೃತಿಕಾರ ಮಾಡುತ್ತಾನೆ. ಹರಿಹರಪ್ರಿಯರೂ ಅದನ್ನೇ ಮಾಡಿದ್ದಾರೆ :

ಹಿರಣ್ಯ : ಏಕಲವ್ಯ ಮನುಷ್ಯ ಉಟ್ಟಾಗಿಂದ ಒಬ್ಬರನೊಬ್ಬರು ಕಿತ್ತು ತಿನ್ನೋದು ಪ್ರಾಣಿತರಾನೆ ಆಗಿಹೋಗದೆ. ತಾನು ಪ್ರಾಣಿಯಲ್ಲ ಅನ್ನೋದಕ್ಕೆ ಏನೆಲ್ಲಾ ಆಟವಾಡಿದ್ರು, ಅದೆಲ್ಲ ತೋರ್‍ಕೆ ಮಾತ್ರನೇಯ. ನಿಜ ಅಂದ್ರೆ ಪ್ರಾಣಿಗಳೇ ಮೇಲೂ. ಯಾಕಂದ್ರೆ ಅವು ಪ್ರಾಣಿಗಳಂತೇ ಇರೋದ್ರಿಂದ್ಲೆ. ಅವುಗಳಲ್ಲಿ ಯಾವ ವೇಷಾನೂ ಇಲ್ಲ, ಭೂಷಣಾನೂ ಇಲ್ಲ... *(ಪುಟ ೪೬)*

ಅವರೇ ಮುಂದುವರೆದು :

'ದಾರಿ ಉದ್ಕು ನಡೀವಾಗ ಕುಂತು ನಿಂತು ಓಗಲ್ವ ಅಂಗೆ. ಬದುಕಲ್ಲೂ ಓರಾಡ್ತ ಅನುಸರಿಸ್ತಾ ಓಗಬೇಕಾಯ್ತದೆ ಮಗಾ' (ಪುಟ ೪೭) '....ಆ ಜಾತಿ ಮೇಲು, ಈ ಜಾತಿ ಕೀಳು. ಎಣ್ಣು ಗಂಡು, ಅರಸ ಆಳು, ಇಂಗೆ, ಒಂದಾ ಎರಡಾ. ವ್ಯಕ್ತಿಯಿಂದ ವಂಶಕ್ಕೇಯ, ವಂಶದಿಂದ ಜನಾಂಗಕ್ಕೇಯ, ಜನಾಂಗದಿಂದ ಲೋಕಕ್ಕೇಯ ಇವೆಲ್ಲ ತುಂಬಿತುಳುಕ್ತಾ ಅವೆ. ಉಳಿದಿರೋದು ಏನಪ್ಪ ಅನ್ನೋ ದಾರುಣ ಪರಿಸ್ಥಿತಿ ನಮ್ಮ ದೇಶದಾಗೆ ಕಾಣಿಸ್ತ ಅದಪ್ಪ..." (ಪುಟ ೪೭). ಇವೆಲ್ಲವೂ ನಾಟಕದ ಸದಾಶಯವನ್ನು ವಿವಿಧ ಪಾತ್ರಗಳ ಮೂಲಕ ಹೇಳಿಸುವ ಹರಿಹರಪ್ರಿಯರ ಕಲಾಪ್ರತಿಭೆಗೆ ಸಾಕ್ಷಿಯಾಗಿದೆ. ಇದೇ ರೀತಿಯಲ್ಲಿ ದ್ರೋಣ ಮತ್ತು ಕೃಪಿಯ ಸಂವಾದಗಳು ದ್ರೋಣರ ಒಳಗಣ್ಣು ಮತ್ತು ಹೊರಗಣ್ಣಿನ ನಡುವಿನ ತಾಕಲಾಟವನ್ನು ತೋರಿಸುತ್ತದೆ. "ಅವರ ದೃಷ್ಟಿಯಲ್ಲಿ ನಾವು ಅನ್ನಕ್ಕೆ, ಹಣಕ್ಕೆ ಕೈಚಾಚಿ ನಿಂತವರು. ಎಷ್ಟಾದರೂ, ಆಳುವವರಲ್ಲವೆ?" ಎಂದು ದ್ರೋಣ ಹೇಳಿದರೆ "ನೀವೇನು ಕುಳಿತು ತಿನ್ನುತ್ತಿಲ್ಲವಲ್ಲ! ಹಗಲು, ರಾತ್ರಿ ಅವರಿಗೆ ವಿದ್ಯೆ ಬುದ್ಧಿ ಹೇಳಿ ಅವರನ್ನು ಬೆಳೆಸುತ್ತಿರುವುದು ಲೆಖ್ಖಕ್ಕೆ ಇಲ್ಲವೆ? ಅದು ದುಡಿಮೆಯಲ್ಲವೆ?" ಎಂಬ ಕೃಪಿಯ ಮಾತು ಅರ್ಥಪೂರ್ಣವಾಗಿದೆ. ದ್ರೋಣನಂಥವರು ಶೋಷಕರಲ್ಲ, ಅವರೂ ಶೋಷಣೆಗೆ ಒಳಗಾದವರು ಎಂಬ ಮತ್ತೊಂದು ವಾಗ್ವಾದಕ್ಕೆ ಒತ್ತು ಕೊಡುತ್ತಾರೆ. ಮಾನ್ಯ ಪ್ರೊ. ಕೆ.ಜಿ. ನಾಗರಾಜಪ್ಪನವರ ದೀರ್ಘ ಪ್ರಸ್ತಾವನೆ ಅರ್ಥಪೂರ್ಣವಾಗಿದೆ.

ಡಾ. ಅಶೋಕ ನರೋಡೆ ತಮ್ಮ ಪ್ರೌಢಪ್ರಬಂಧ(ಡಾಕ್ಟರಲ್ ಥೀಸಿಸ್)ದಲ್ಲಿ ಏಕಲವ್ಯನ ಇಂಥಾ ನಾಟಕಗಳು (ಹರಿಹರಪ್ರಿಯರ ನಾಟಕ ಇತ್ತೀಚಿಗೆ ಬಂದಿದ್ದರಿಂದ ಉಲ್ಲೇಖಿಸಿಲ್ಲ) ಏಕಲವ್ಯನ ಕಥಾನಕವನ್ನು ಅಲ್ಲಿಗೆ ನಿಲ್ಲಿಸಿಬಿಡುತ್ತವೆ. ಆದರೆ ಅವರ ಉಲ್ಲೇಖದಂತೆ ನಂತರದ ಕಥೆ–ಕೃಷ್ಣ ಏಕಲವ್ಯರ ಭೇಟಿ, ಏಕಲವ್ಯ ಪ್ರಾಣಬಿಟ್ಟ ಪ್ರಸಂಗ, ಕೃಷ್ಣ ಏಕಲವ್ಯನಿಗೆ ಇರಿದದ್ದು, ಏಕಲವ್ಯನ ತಾಯಿಯ ಕೊಲೆ, ಏಕಲವ್ಯನ ಸುತ ಕೇತುಮಂತನಿಂದ ಕೃಷ್ಣನ ಸಂಹಾರ.... ಇನ್ನಿತರ ಘಟನೆಗಳ ಆಧಾರದ ಮೇಲೆ ನಾಟಕಕ್ಕೆ ಅನೇಕ ಮಗ್ಗಲುಗಳಿವೆ. ಪ್ರಾಯಃ ನಂತರದ – ಏಕಲವ್ಯನ ಬೆರಳಿನ ಹರಣದ ನಂತರದ ಕಥೆಗಳು – ಇನ್ನೂ ಹೆಚ್ಚು ತಾತ್ವಿಕ ನೆಲಗಟ್ಟಿನಿಂದ ಕೂಡಬಲ್ಲವೇನೋ... ಅದು ಬೇರೆಯ ಪ್ರಶ್ನೆ ಮತ್ತು ಈ ನಾಟಕಕ್ಕೆ ನೇರವಾಗಿ ಸಂಬಂಧಿಸಿದ ಪ್ರಶ್ನೆ ಅಲ್ಲ.

ಹರಿಹರಪ್ರಿಯ ಅವರ ಈ ನಾಟಕದ ಹೆಗ್ಗಳಿಕೆ ಇರೋದು ತನ್ನ ವಿಶಾಲ ದೃಷ್ಟಿಯ - Liberal attitude – ಆಲೋಚನೆಗಳ ಸಂಭಾಷಣೆಗಳಲ್ಲಿ, ಪ್ರತಿಯೊಂದು ಪಾತ್ರಕ್ಕೆ ಕೊಟ್ಟ ಪ್ರಾಶಸ್ತ್ಯದಲ್ಲಿ, ನಗರ (ಪಟ್ಟಣ) ಮತ್ತು ಹಳ್ಳಿಗಳ ನಡುವಿನ ಸಂಘರ್ಷವನ್ನು ಇಟ್ಟುಕೊಂಡು ಬರೆದ ನಾಟಕದ ದೃಷ್ಟಿಕೋನದಲ್ಲಿ – ಹೀಗಾಗಿ ಕನ್ನಡ ನಾಟಕ ಮಾಡುವವರಿಗೆ, ನಿರ್ದೇಶಕರಿಗೆ ಒಂದು ಸವಾಲಿನ ಕೃತಿ ಮತ್ತು ಕನ್ನಡ ನಾಟಕಲೋಕಕ್ಕೆ ಒಂದು ಒಳ್ಳೆಯ ಸೇರ್ಪಡೆ.

❑

ಕನ್ನಡ ಸಂಸ್ಕೃತಿ ಇಲಾಖೆಯ ಕುಸಂಸ್ಕೃತಿ

ಆರ್.ವಿ. ಭಂಡಾರಿ

ಪ್ರಿಯ ಶ್ರೀ ಹರಿಹರಪ್ರಿಯ ಅವರಿಗೆ,

ನಿನ್ನೆ ನಾನು ಫೋನು ಮಾಡಿದಾಗ ಬೆಂಗಳೂರಿಗೆ ಬಂದವರು ನಮ್ಮಲ್ಲಿ ಯಾಕೆ ಬರಲಿಲ್ಲ, ಎಂದು ಕೇಳಿದಿರಿ. ನಾನು ಬೆಂಗಳೂರಿಗೆ ಬರಲಿಲ್ಲವಲ್ಲ ಎಂದರೆ "ನೀವು ಏಕೀಕರಣಕ್ಕಾಗಿ ದುಡಿದವರನ್ನು ಆಯ್ಕೆ ಮಾಡುವ ಸಮಿತಿಯಲ್ಲಿದ್ದೀರಲ್ಲ?" ಎಂದಿರಿ. ಹೌದು, ನೀವು ಹೇಳಿದ್ದು ನಿಜ. ದಿ: ೨೩-೧೦-೨೦೦೬ರಂದು ಆಯ್ಕೆ ಸಮಿತಿ ಸಭೆ ಇದೆ. ಆದ್ದರಿಂದ ಇಂದೇ ರಾತ್ರಿ ಹೊರಡಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಉತ್ತರ ಕನ್ನಡ ಜಿಲ್ಲಾ ಕೇಂದ್ರದಿಂದ ನನಗೆ ಫೋನ್ ಬಂತು. ನಾನು ಮನೆಯಲ್ಲಿರಲಿಲ್ಲ. ರಾತ್ರಿ ಹತ್ತುಗಂಟೆ ಸುಮಾರಿಗೆ ನನ್ನ ಮಗ ನನಗೆ ಫೋನ್ ಮಾಡಿ ಹೇಳಿದ. ಬರಲು ಸಾಧ್ಯವಿಲ್ಲ ಎಂದು ತಿಳಿಸು ಎಂದು ನಾನು ಹೇಳಿದೆ.

ನನಗೆ ದಿ: ೨೩-೧೦-೨೦೦೬ರ ಸಂಜೆ ಅಂಚೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಬಂದ ಪತ್ರದ ದಿನಾಂಕ ಕಸನಿ/೧೦/ಸುಕ/೨೦೦೫-೦೬/೧೭-೧೦-೨೦೦೬. ನನ್ನ ಆಯ್ಕೆಯನ್ನು ಖಚಿತ ಪಡಿಸಿದೆ. ಸದ್ಯದಲ್ಲೇ ಆಯ್ಕೆ ಸಮಿತಿಯ ಸಭೆಯನ್ನು ಕರೆಯಲಾಗುವುದು. ಸಭೆಯ ದಿನಾಂಕವನ್ನು ತಿಳಿಸಲಾಗುವುದು ಎಂದು ಪತ್ರ ನಮೂದಿಸಿದೆ. ಅಂದರೆ ಈ ಪತ್ರ ನನಗೆ ತಲ್ಪಿದ್ದು ದಿ: ೨೩-೧೦-೨೦೦೬ರಂದು. ದಿ: ೨೪-೧೦-೨೦೦೬ರಂದೇ ಆಯ್ಕೆಯ ಪಟ್ಟಿ ಬಿಡುಗಡೆಯಾಗಿದೆ. ಹಾಗಿರುವಾಗ ನಾನು ಬೆಂಗಳೂರಿಗೆ ಯಾವಾಗ ಬರಲಿ?

ಒಂದು ವೇಳೆ ನನ್ನ ಆಯ್ಕೆಯ ಬಗ್ಗೆ ನನಗೆ ಮೊದಲೇ ತಿಳಿದಿದ್ದರೂ ನಾನು ಭಾಗವಹಿಸುತ್ತಿರಲಿಲ್ಲ. ಯಾಕೆಂದರೆ ಆಯ್ಕೆಯ ವಿಷಯದಲ್ಲಿ ನನ್ನ ತಿಳಿವಳಿಕೆ ಕಡಿಮೆ. ಯಾವ ವಿಷಯದ ಬಗ್ಗೆ ನನ್ನ ಅನುಭವ, ಅಧ್ಯಯನದ ಕೊರತೆ ನನ್ನಲ್ಲಿದೆಯೊ ಅಲ್ಲಿ ನಾನು ಭಾಗವಹಿಸುವುದಿಲ್ಲ. ಹಾಗೆಯೇ ನನಗೆ ಆ ಈ ಸಮಿತಿಯಲ್ಲಿ ಸದಸ್ಯನಾಗುವ ಮಹತ್ವಾಕಾಂಕ್ಷೆ ಕೂಡ ಇಲ್ಲ. ನನ್ನ ಆಯ್ಕೆ ಹೇಗೆ ಆಯಿತೆಂಬುದೂ ನನಗೆ ತಿಳಿಯದು. ಆದರೆ ಸಾಹಿತಿಗಳಾದ ಜಿ.ಆರ್. ಲಕ್ಷ್ಮಣರಾವ್ ಹಾಗೂ ಮತ್ತೆ ಕೆಲವರ ಹೆಸರನ್ನು ಮೊದಲು ಪ್ರಕಟಿಸಿ, ಆಮೇಲೆ ಕೈಬಿಟ್ಟಿರುವುದು ವಿಷಾದನೀಯ. ಇದು ಅವರಿಗೆ ಮಾತ್ರ ಮಾಡಿದ ಅವಮಾನವಲ್ಲ; ಇಡಿಯಾಗಿ ಆಯ್ಕೆ ಸಮಿತಿಗೇ ಮಾಡಿದ ಅವಮಾನವಾಗಿದೆ. ಇದನ್ನು ನಾನು ಖಂಡಿಸುತ್ತೇನೆ.

ಈ ಕುರಿತು ನಾನು ಸಂಬಂಧಿಸಿದ ಆಯುಕ್ತರಿಗೆ ಪತ್ರ ಬರೆದೆನೇ ಹೊರತು ಪತ್ರಿಕೆಗಳಿಗಲ್ಲ ಬರೆಯಲಿಲ್ಲ. ನನಗೇ ಆಸಕ್ತಿಯಿಲ್ಲದ ವಿಷಯವನ್ನು, ಕಡ್ಡಿಯನ್ನು ಗುಡ್ಡ ಮಾಡುವುದು ಮುಜುಗರದ ವಿಷಯ. ಕತೆ ಹೀಗಿದೆ ಸರ್.

ವಂದನೆ.

ನಿಮ್ಮ ವಿಶ್ವಾಸಿ

ಆರ್.ವಿ.

ಕಾರ್ಪೊರೇಟ್ ಕಾವ್ಯರೋದನ

ತಲಸ್ಪರ್ಶಿ

ಇಬ್ಬರೂ ವಿದೇಶದಲ್ಲಿದ್ದು, ಕಲಿತು ಬಂದವರು. ಬಂದ ಕೂಡಲೇ ಒಬ್ಬರು ಮಧ್ಯಮವರ್ಗದ ಪ್ರೇಕ್ಷಕ ಅಭಿರುಚಿಯ ಮೇಲೇ ದಾಳಿ ಮಾಡಿಬಿಟ್ಟರು. ಇನ್ನೊಬ್ಬರು ಕಾಲೇಜು ವಿಶ್ವವಿದ್ಯಾಲಯಗಳ ಯುವಚೈತನ್ಯದ ದಿಕ್ಕುಗೆಡಿಸಿದರು. ಹೀಗಾಗಿ ಈ ನಾಡಿನ ಅಭಿಜಾತ ಕಲೆಗಳಲ್ಲಿ ಒಂದಾದ ರಂಗ ಭೂಮಿಯನ್ನು, ಆಧುನಿಕತೆಯ ಪಾಂಡಿತ್ಯ ಶತಮಾನದ ಕಾಲ ದಿಗ್ಭ್ರಮೆಗೊಳಿಸಿತು. ವಿಪರ್ಯಾಸ ವೆಂದರೆ ಅದರ ನಡುವೆಯೇ ಎದ್ದು ಬಂದ ಯುಗಪ್ರತಿಭೆ ಮತ್ತೆ ತನ್ನತನವನ್ನ, ತಾಜಾತನವನ್ನ ಕಂಡುಕೊಳ್ಳುವ ದಿಕ್ಕಿನಲ್ಲಿ ಮುಖಮಾಡಿತು. ಇದು ಕೈಲಾಸಂ–ಶ್ರೀರಂಗ–ಬಿ.ವಿ. ಕಾರಂತರ ದೇಶ ಕಾಲ.

ಮಹಾಕಾವ್ಯ ಈ ಯುಗದ ಅಭಿವ್ಯಕ್ತಿ, ಸಂವೇದನೆಯೇ ಅಲ್ಲ ಎಂದು ಒಂದು ಕಡೆ; 'ಅರಳು ಮರಳು' ಕಾವ್ಯದ ನಂತರ ಕವಿ ಸತ್ತೇ ಹೋದ ಎನ್ನುವಂತೆ ಇನ್ನೊಂದು ಕಡೆ – ಹೀಗೆ ನವ್ಯೋದಯ ದೇಶಕಾಲವನ್ನು ಚರಿತ್ರೆಯ ಪುಟಗಳಲ್ಲಿ ಕರಾಳವನ್ನಾಗಿಸುವ ಪ್ರಯತ್ನವನ್ನು ಕೀರ್ತಿನಾಥ ಕುರ್ತಕೋಟಿ, ಯು.ಆರ್. ಅನಂತಮೂರ್ತಿಯವರು ಸತತವಾಗಿ ನಡೆಸಿದರು.

ಇವೆಲ್ಲವನ್ನು ಗಮನಿಸುತ್ತ ಬಂದವರಿಗೆ ಈ ಭಾರತೀಯ ಸಂಸ್ಕೃತಿಯಲ್ಲಿರುವ ಆಚರಣೆ ಬಗ್ಗೆ ಪುನರ್ ಆಲೋಚಿಸಬೇಕಾದ ಪ್ರಮೇಯ ಒದಗಿದೆ. ಒಬ್ಬರು ಇನ್ನೊಬ್ಬರನ್ನ ಪಾದರಕ್ಷೆಯಲ್ಲಿ ಹೊಡೆದ ಮೇಲೆ ಪ್ರಾಯಶ್ಚಿತ್ತಕ್ಕಾಗಿ ಭೂರಿಭೋಜನ ಮಾಡಿಸುವುದುಂಟು. ಸಂಸ ಅಂತಹ ವಿಶಿಷ್ಟ ನಾಟಕಕಾರರ ಬದುಕಿನಲ್ಲಿ ಹೀಗೊಂದು ಪ್ರಸಂಗ ಕಂಡುಬರುತ್ತದೆ. ಹೊರಗಿನವರನ್ನು ಸ್ವಯಂ ಹತ್ಯೆಗೆ ಪ್ರಯತ್ನಿಸಿ, ಕೊನೆಗೆ ತನಗೆ ತಾನೇ ಇಲ್ಲಗೈಯುವ ಈ ಕ್ರಿಯೆ, ಪ್ರತಿಭಾರಂಗದಲ್ಲಿ ದೇಶಕಾಲಕ್ಕೆ ಅನುಗುಣವಾಗಿ ನಡೆಯುತ್ತಲೇ ಬಂದಿದೆ.

ಶತಶತಮಾನಗಳ ಜಾನಪದರಂಗದ ಮಾತಿರಲಿ, ಬಹುಶಃ ಕರ್ನಾಟಕ ನೆಲ ಮೂಲ ಸಂಸ್ಕೃತಿಗೆ ಸೇರಿದ ಗಮಕ ಕಲೆ, ಅವಿದ್ಯಾವಂತರಿಗೆ ಶಿಕ್ಷಣ ಬೋಧನೆಯ ಸ್ವರೂಪದ್ದಾಗಿತ್ತು. ವಿದ್ಯಾವಂತರಿಗೆ ಕಾವ್ಯ ರಸಾಸ್ವಾದನೆಗೆ ಇಂಬುಗೊಟ್ಟಿತ್ತು. ಅದಕ್ಕು ಹಿಂದೆ ಆದಿಕವಿ ಪಂಪನ ಕಾಲದಿಂದಲೇ ಬರೆಯುವವರು ಒಬ್ಬರಾದರೆ ಅದನ್ನೇ ಓದುವವರು ಇನ್ನೊಬ್ಬರಾಗಿರುತ್ತಿದ್ದರು. ಹೀಗೆ ಕರ್ನಾಟಕದಲ್ಲಿ 'ಓದುವ' ಕುಟುಂಬ, ಮನೆತನವೇ ನಮ್ಮ ನಡುವೆ ಇದೆ. ಇನ್ನೂ ವಿಶೇಷವೆಂದರೆ ಇಂತಹವರನ್ನು 'ಭಾರತಿ' ಇಂಬ ಪಾರಿಭಾಷಿಕ ವೃತ್ತಿ ಶಬ್ದದಲ್ಲಿ ಗುರುತಿಸಿರುವುದೂ ಕಂಡುಬರುತ್ತದೆ.

ರಾಮಚಂದ್ರ ಶರ್ಮ, ಸುಮತೀಂದ್ರ ನಾಡಿಗ ಅಂತಹವರು ಓದುವ, ಭಾರತಿ – ಮನೆತನಕ್ಕೆ ಸೇರಿದವರೊ ಅಲ್ಲವೊ ಗೊತ್ತಿಲ್ಲ. ಆದರೆ ನವ್ಯದ ದೇಶಕಾಲದಲ್ಲಿ ಕಾವ್ಯ, ಕವಿತೆ ಓದುವುದನ್ನು ಒಂದು ಕಲೆ ಎನ್ನುವಂತೆ ಕಾಣಿಸಿದವರು. ಯಕ್ಷಗಾನದ ನಡುಗಡ್ಡೆಯಿಂದ ಬಂದ ಗೋಪಾಲಕೃಷ್ಣ ಅಡಿಗರು ಪದ್ಯವನ್ನೂ, ಭಾಷಣವನ್ನೂ ಒಂದೇ ಎಂಬಂತೆ ಕಾಪಾಡಿಕೊಂಡು ಬಂದವರು. ಇವರೆಲ್ಲರನ್ನು ಲೇವಡಿ ಮಾಡಿದವರು ನಮ್ಮ ನಡುವೆ ಈಗಲೂ ಬದುಕಿದ್ದಾರೆ.

ರೋಂ ಹತ್ತಿ ಉರಿವಾಗ ನೀರೊ ಪಿಟೀಲು ಬಾರಿಸಿದ ಪಾಶ್ಚಿಮಾತ್ಯ ಗಾದೆಯಂತೆ, ಇಡೀ ರಾಜ್ಯವೇ, ರಾಷ್ಟ್ರವೇ ಗೊಂದಲದಲ್ಲಿ, ಹಿಂಸೆಯಲ್ಲಿ, ಭಯೋತ್ಪಾದನೆಯಲ್ಲಿ ನರಳುತ್ತಿರುವಾಗ; ಇನ್ನೇನು ನೊಬೆಲ್ ಬಹುಮಾನಕ್ಕಾಗಿ ಕಾತರಿಸಿ ಕನವರಿಸಿ ಕಕ್ಕುಲಾತಿಯಿಂದಿರುವ ಯು.ಆರ್.

ಅನಂತಮೂರ್ತಿ, ಈಗ ಇದೆಲ್ಲದಕ್ಕೆ ಇದೇ ಮದ್ದು ಎನ್ನುವಂತೆ ಕಂಡುಕೊಂಡ ರಾಮಬಾಣ ಕಾವ್ಯರೋದನ. ವಿರಚನ ವಾದ, ನಿರಚನ ವಾದಗಳಲ್ಲಿ ಪಾರಂಗತರೂ ಪರಿಣತರೂ ಆದ ಮಂದಿ ಸೇರಿ; ಕಾವ್ಯ ಓದಬಾರದು, ಗಮಕ ವಾಚನ ಶುದ್ಧ ನಾನ್‌ಸೆನ್ಸ್ ಎಂದವರು ಈಗ ಕಂಡು ಕೊಂಡ ದಾರಿ ಕಾವ್ಯರೋದನ.

ಬಾಲಮುರಳಿಕೃಷ್ಣ ದಿನದಿನವೂ ಪ್ರಯೋಗ ಮಾಡುತ್ತ ಮಾಡುತ್ತ, ರಾಗಗಳನ್ನೇ ಸೃಷ್ಟಿಸಿ ಸೃಷ್ಟಿಸಿ, ಕೃತಿ ರಚಿಸಿ ರಚಿಸಿ ಕೊನೆಗೆ ಎಲ್ಲೆಲ್ಲೂ ಬಾಲಮುರಳಿಕೃಷ್ಣರನ್ನೇ ಪ್ರಯೋಗಿಸಿ–ಸೃಷ್ಟಿಸಿ–ರಚಿಸಿದ ಸಾಧಕರು ಸಿದ್ಧಿ ಪುರುಷರು. ಹೀಗಾಗಿ ಎಲ್ಲೆಲ್ಲೂ ಬಾಲಮುರಳೀಕರಣವೇ ಆಗಿ, ನಿಜ ಬಾಲಮುರಳಿ ಯಾರೋ ಎನ್ನುವ ಭ್ರಮೆ, ಸಂದೇಹವನ್ನು ಭಿತ್ತಿಬಿಟ್ಟರು.

ಪಿ. ಕಾಳಿಂಗರಾವ್, ಬಾಳಪ್ಪ ಹುಕ್ಕೇರಿ, ಮೈಸೂರು ಅನಂತಸ್ವಾಮಿ, ಶಿವಮೊಗ್ಗ ಸುಬ್ಬಣ್ಣ, ರತ್ನಮಾಲ ಪ್ರಕಾಶ್, ಜಿ.ವಿ. ಅತ್ರಿ, ಬಿ.ಆರ್. ಛಾಯಾ ಇವರು ಗಾಯಕರು ಅಂತಲ್ಲ; ಪಂಡಿತ ಪರಮೇಶ್ವರ ಹೆಗಡೆ ಹಾಡಿದ್ದು ಮಾತ್ರ ವಾಚನ. ಇನ್ನು ಮೇಲೆ ಎಲ್ಲ ಗಾಯಕರು ಹೀಗೇ ವಾಚಿಸಬೇಕು.

ಹಿಂದೊಮ್ಮೆ ಅ.ನ. ಕೃಷ್ಣರಾಯರು, ಕರ್ನಾಟಕ ನೆಲದಲ್ಲಿ ಅನ್ಯ ರಾಜ್ಯಗಳ ಸಂಗೀತ ಕಲಾವಿದರ ಹಾವಳಿ ವಿಪರೀತವೆಂದು ದಂಗೆ ಎದ್ದು, ಕರ್ನಾಟಕದ ಸ್ಥಳೀಯ ಪ್ರತಿಭೆಗೆ ಸ್ವಾಭಿಮಾನದಿಂದ ಬದುಕುವುದಕ್ಕಾಗಿ ಹೋರಾಡಿದ್ದುಂಟು. ಜೊತೆಗೆ ಆವತ್ತಿನವರೆಗೆ ಕೇವಲ ಪುಸ್ತಕದಲ್ಲಿ, ತಾಳೇಗರಿಗಳಲ್ಲಿ, ಮಠಮಾನ್ಯಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನಾ ವಸ್ತುವಾಗಿದ್ದ ಶಿವಶರಣರ ವಚನಗಳನ್ನು, ತಾವೇ ಸ್ವತಃ ಹಾಡಿ ತೋರಿಸಿ; ಮಲ್ಲಿಕಾರ್ಜುನ ಮನ್ಸೂರ, ಭೀಮಸೇನ ಜೋಶಿ, ಬಸವರಾಜ ಗುರು, ಸಿದ್ದರಾಮ ಜಂಬಲದಿನ್ನಿ – ಹೀಗೆ ಒಂದು ಪ್ರತಿಭಾಪಡೆಯನ್ನೇ ಕಟ್ಟಿದ್ದು, ನವ್ಯ ಮನಸ್ಸು ಬುದ್ಧಿಯ ಪುಟಗಳಲ್ಲಿ ದಾಖಲಾಗದ ಸಂಗತಿಗಳೇನೊ ?

ಈಗ ಪರಂಪರೆಯ ಬಗ್ಗೆ ಗೌರವವಿಲ್ಲದ, ಚರಿತ್ರೆಯ ಜ್ಞಾನವಿಲ್ಲದ ಅನಂತಮೂರ್ತಿ ಪಡೆ; ಎಲ್ಲಕ್ಕೂ ತಾವೇ ಆದ್ಯರು ಎನ್ನುವಂತೆ, ಅಥವಾ ತಾವೇ ತಮ್ಮದೇ ನವನವೋನ್ಮೇಷಶಾಲಿನಿ ಎನ್ನುವಂತೆ ಬೀದಿಗಿಳಿದಿದೆ.

ಯಾರೂ ಓದಬಹುದು. ಹೇಗೆ ಬೇಕಾದರೂ ಓದಬಹುದು. ಎಂದೂ ಓದದವರು ಇಂದೇ ಓದಬಹುದು. ಉನ್ನತ ಅಧಿಕಾರದಲ್ಲಿರುವವರು, ವಿವಿಧ ಕ್ಷೇತ್ರದ ತಾರೆಯರು ಹೇಗೂ ಓದಬಹುದು. ಆ ಮೂಲಕ ಮಾತಾಡುವ, ವಿಮರ್ಶಿಸುವ, ಸಂವಾದಿಸುವ ಹಕ್ಕನ್ನು ಸಾರಾಸಗಟಾಗಿ ಬಂದ್ ಮಾಡಿದ ಚಳುವಳಿ, ಪುಣ್ಯ ಕಾರ್ಯ ಅನಂತಮೂರ್ತಿ ಗ್ಯಾಂಗ್‌ನಿಂದ ಪ್ರಾರಂಭವಾದಂತೆ ಆಗಿದೆ.

ಏನು ಜನ, ಎಂಥ ಜನ. ಸ್ವತಃ ಬೇಂದ್ರೆ ಬೆಂಗಳೂರಿಗೆ ಬಂದಾಗಲೂ ಇಷ್ಟು ಜನ ಸೇರಿರಲಿಕ್ಕಿಲ್ಲ. ಏಕೆಂದರೆ ಪವಿತ್ರಾ ಲೋಕೇಶ್, ವಿಜಯ ಭಾರದ್ವಾಜ್, ರೇಖಾ ಹೆಬ್ಬಾರ್, ಜಯಶ್ರೀ ಕಾಸರವಳ್ಳಿ – ಇಂತಹವರನ್ನು ಜೊತೆಯಲ್ಲಿ ಕರೆದುಕೊಂಡು ಬಂದಿರಲಿಲ್ಲ. ಪಾಪ ಆಗಿದ್ದವರು ಯಾರು ? ವಿ.ಪ. ಗಾಂವಕಾರ್, ಶ್ರೀಧರ ಖಾನೋಳ್ಕರ್, ಪ್ರಹ್ಲಾದ ನರೇಗಲ್ಲ, ನಾರಾಯಣ ಸಂಗಮ, ಶೆಗೋ ಕುಲಕರ್ಣಿ, ಎನ್ಕೆ ಕುಲಕರ್ಣಿ, ಬಿ.ಎಚ್. ಶ್ರೀಧರ – ಇಂತಹವರನ್ನು ನೋಡಲು ಯಾವ ಜನ ತಾನೇ ಜಮಾಯಿಸಿಯಾರು?

ಇಷ್ಟಕ್ಕೂ ಆಗ ಜಯಂತ ಕಾಯ್ಕಿಣಿ, ಎಸ್. ದಿವಾಕರ್ ಅಂತಹ ಪಬ್ಲಿಕ್ ರಿಲೇಷನ್ ಆಫೀಸರ್‌ಗಳು ಇದ್ದಿರಲಿಲ್ಲವೆಂದು ಕಾಣುತ್ತದೆ. ಇದ್ದಿದ್ದರೆ : "ಸತ್ಯ ಅಷ್ಟು ಸುಂದರವಾಗಿ ಕಾಣುವುದಿಲ್ಲ. ಏಕೆಂದರೆ ಅದು ಸತ್ಯವಾಗಿರುತ್ತದೆ. ಬೇಂದ್ರೆ ಬೇಂದ್ರೆಯೇ ಆಗಿದ್ದರೆ ಯಾರಿಗೂ ಏನೂ ಅನ್ನಿಸುವುದಿಲ್ಲ.

ಪುಟ್ಟಪ್ಪನಾಗಿದ್ದರೆ ಓಹೋ ಇವನ್ಯಾರು ಅನ್ನುತ್ತಾರೆ" ಎಂದು ವ್ಯಕ್ತಿತ್ವ, ಸಂಸ್ಕೃತಿ, ಪರಂಪರೆ, ಚರಿತ್ರೆಯನ್ನು ಹರಾಜಾಕಬಹುದಾಗಿತ್ತು. ಆ ಮೂಲಕ ಜಾತೀಯತೆ, ಮತೀಯತೆ ಬೀಜ ಆವತ್ತೇ ಭಿತ್ತಿ, ಹಿಂದೂ ಧರ್ಮದ ಸ್ಥಾಪನೆ ಮಾಡಬಹುದಾಗಿತ್ತು. ಇಲ್ಲದಿದ್ದರೆ ಬೇಂದ್ರೆ, ಬೇಂದ್ರೆ ಆಗದೆ ಪುಟ್ಟಪ್ಪ ಯಾಕೆ ಆಗಬೇಕು? ಇಷ್ಟಕ್ಕು ಪುಟ್ಟಪ್ಪ ಅವರನ್ನು ಓಹೋ ಇವನ್ಯಾರು ಅನ್ನುವಷ್ಟು ಕೇವಲ, ವಿಚಿತ್ರ ವ್ಯಕ್ತಿಯೆ? ಬೇಂದ್ರೆ ಆಗಲಿ, ಜಯಂತ ಕಾಯ್ಕಿಣಿ ಆಗಲಿ ಪುಟ್ಟಪ್ಪ ಅವರನ್ನು ಕುವೆಂಪು ಆಗಿಸಿಲ್ಲ. ಬೇಂದ್ರೆ, ಅಂಬಿಕಾತನಯದತ್ತರಾಗಿ ನಿಂತಂತೆಯೇ, ಕುವೆಂಪು ಕೂಡ ದೇಶಕಾಲದಿಂದ ಎದ್ದುಬಂದು ನಿಂತವರು. ಜಯಂತ – ಜಯಂತನಾಗಿಯೇ ನಿಲ್ಲಬೇಕೇ ಹೊರತು, ವಿವೇಕರ ಮೂಲಕ ಶ್ಯಾನುಭೋಗರ ಮೂಲಕ ಕಾಣಿಸಿಕೊಳ್ಳಬಾರದು. ಹಿಂದೊಮ್ಮೆ ಲಂಕೇಶರು ತಮ್ಮ ಪತ್ರಿಕೆಯಲ್ಲಿ ಬರೆದಂತೆ ಸೂಳೆಯರಿಗೂ ಕರಪತ್ರ ಬರೆದುಕೊಡುವ ಕೆಲಸ, ಸಾಂಸ್ಕೃತಿಕ ಲೋಕದಲ್ಲಿ ನಿರುದ್ಯೋಗಿಗಳು ಮಾಡಬಾರದು.

ಬೇಂದ್ರೆ ರೋದನದಲ್ಲಿ ಕುವೆಂಪು ಅವರನ್ನು ವಾಚಾಮಗೋಚರಗೊಳಿಸುವುದು, ಕುವೆಂಪು ರೋದನಕ್ಕೆ ಇದೇ ಜಯಂತಕಾಯ್ಕಿಣಿಯನ್ನು ಕರೆದರೆ ಮಾಸ್ತಿಯವರನ್ನೋ ಕಾರಂತರನ್ನೋ ಹೀಗಳೆಯುವುದು ಕನ್ನಡದ ಪ್ರಜ್ಞಾವಂತಿಕೆಗೆ ತಕ್ಕುದಲ್ಲ.

ಈ ಎಲ್ಲದರ ನಡುವೆ ನಿಜವಾದ, ನಿರಂತರವಾದ ಕಾವ್ಯ ಮಂಡಲ ಪ್ರೇಮಿ ಕಿ.ರಂ. ನಾಗರಾಜ ಅವರು, ಕಾವ್ಯ ವಾಚನವನ್ನು ಈ ಮಟ್ಟಕ್ಕೆ ಇಳಿಸಿದರೆ? ಏಕಾಂತದಲ್ಲಿ, ಕೌಟುಂಬಿಕ ನೆಲೆಯಲ್ಲಿ ಬದುಕು ಬೇರೆ ಕಾವ್ಯ ಬೇರೆ ಎಂದು ಎಂದೂ ಭಾವಿಸದ ಋಷ್ಯಶೃಂಗ ಹೀಗೆ ಕಾವ್ಯ ಬೆತ್ತಲೆಯಾಗುವುದನ್ನು ಬಯಸಿದರೆ? ಹುಟ್ಟು ಮಾತ್ರ ನನ್ನ ಕೈಯಲ್ಲಿ ಬೆಳವಣಿಗೆ ಸಾವುಗಳಿಗೆ ನಾನು ಹೊಣೆಯಲ್ಲ ಅನ್ನುವ ಪೋಷಕರಂತೆ, ಪ್ರಾರಂಭಕ್ಕೆ ನಾನಿದ್ದೇನೆ ಮುಂದಿನ ಆಗುಹೋಗು ನನ್ನದಲ್ಲ ಎನ್ನುತ್ತಾರೆಯೇ ಕಿ.ರಂ. ಅವರು ?

ದಿನದಿನವೂ ಬೀದಿಬೀದಿಯಲ್ಲಿ ತಲೆ ಎತ್ತಿ ನಡೆಯುವ ಸಂಘಸಂಸ್ಥೆಗಳು; ಅಧಿಕಾರಿಗಳು, ಸಿನಿಮಾದವರು, ರಾಜಕಾರಣಿಗಳು – ಹೀಗೆ ಬಣ್ಣಬಣ್ಣದ ವೇಷಧಾರಿಗಳನ್ನು ಮುಂದುಮಾಡಿಕೊಂಡು; ಈಗಾಗಲೇ ಕುಲಗೆಟ್ಟು ಎಕ್ಕುಟ್ಟು ಹೋಗಿರುವ ಸಾಂಸ್ಕೃತಿಕ ಲೋಕದ ದಂಧೆಗೆ, ಇದೂ ಒಂದನ್ನು ಜೋಡಿಸಿ, ಮಹತ್ವದ ಸಾಧನೆಯಾಯಿತೆಂದು ಪರಿಗಣಿಸಿಬಿಟ್ಟರೆ! ಬೇಂದ್ರೆ, ರಾಜರತ್ನಂ, ಕುವೆಂಪು – ಕುಟುಂಬದವರಿಂದ ಮಾರಾಟ – ಉತ್ಪಾದನೆ ವಸ್ತುವಾಗಿರುವ ಸಾಂಸ್ಕೃತಿಕ ಲೋಕವನ್ನು, ಸಮಾಜದಿಂದ ದೂರಮಾಡಿ, ಎಲೈಟ್ ಜನರ ಹೈಲೈಟ್ ಸಂಸ್ಕೃತಿ, ಕಾರ್ಪೊರೆಟ್ ರಸಿಕತೆ, ಬೇಜವಾಬ್ದಾರಿಯ ಆಸ್ವಾದನೆ, ತಮಾಷೆಯ ತೆವಲಿಗೆ ತಳ್ಳುವುದು ನ್ಯಾಯವೆ?

ಅದೇ ದಿನವೆ ಮಲ್ಲೇಶ್ವರದ ಆಟದ ಮೈದಾನದಲ್ಲಿ ಕೋಮುಸೌಹಾರ್ದ ವೇದಿಕೆಯವರು ಬಾಬಾ ಧತ್ತಪೀಠದ ಬಗ್ಗೆ ಅರಿವಿನ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈ ಅನಂತಮೂರ್ತಿ ಅಲ್ಲಿಯೇ ತನ್ನ ಪರಿವಾರದೊಂದಿಗೆ ಕಾವ್ಯ ರೋದಿಸಬಹುದಿತ್ತಲ್ಲಾ? ಅಥವಾ ದರೋಜಿ ಈರಮ್ಮ ಅಂತ ಜಾನಪದ ಕಲಾವಿದರನ್ನು ಕರೆಸಿ ರಾತ್ರಿ ಹಗಲು ಕಾವ್ಯ ಕೇಳಿಸಬಹುದಿತ್ತಲ್ಲಾ? ಬಹುಶಃ ಜ್ಞಾನಪೀಠಧಾರಿ ಗ್ಯಾಂಗ್‌ಗೆ, ಜಿ.ಎಸ್. ಶಿವರುದ್ರಪ್ಪ ಅವರಿಗೆ 'ರಾಷ್ಟ್ರಕವಿ' ಪ್ರಶಸ್ತಿ ಬಂದದ್ದನ್ನು ಸಾಂಕೇತಿಕವಾಗಿ ವಿರೋಧಿಸುವ ಒಂದು ಅವಕಾಶ ರೂಪಿಸಲು ಹೂಡಿದ ಹುನ್ನಾರ ಇದ್ಯಾಕೆ ಆಗಿರಬಾರದು ?

ದೇಶ ಕಾಲವೇ ನ್ಯಾಯ ನಿರ್ಣಯಕ್ಕೆ ಸಜ್ಜಾಗಬೇಕಾಗಿದೆ.

❑

ಪ್ರಜಾಸಾಹಿತ್ಯ

ಬಳಗ...

ಶಂ.ಗು. ಬಿರಾದಾರ	ಕಮಲಕುಂಜ, ಶಾಸ್ತ್ರಿನಗರ ತೊರವಿ ರಸ್ತೆ, ವಿಜಾಪುರ ೫೮೬ ೧೦೧
ಕೋ. ಚೆನ್ನಬಸಪ್ಪ	೧೨೭, ವೆಸ್ಟ್ ಆಫ್ ಕಾರ್ಡ್ ರೋಡ್ ೧ನೇ ಮುಖ್ಯರಸ್ತೆ, ಮಹಾಲಕ್ಷ್ಮಿಪುರ ಬೆಂಗಳೂರು ೫೬೦ ೦೮೬
ಬಿ.ಎಂ. ರೋಹಿಣಿ	ಪಂಚಾಯತ್ ಕಛೇರಿ ಬಳಿ ಕುಡುಪು, ಮಂಗಳೂರು ೫೭೫೦೨೮
ಕಮಲಾ ಹಂಪನಾ	೧೦೭೬, ಸ್ವನಿಮಾ, ೧೮ 'ಎ' ಮೈನ್ ರಾಜಾಜಿನಗರ ೫ನೇ ಬ್ಲಾಕ್, ಬೆಂಗಳೂರು ೫೬೦ ೦೧೦
ಸಾತವಲ್ಲಿ ಜಾಗೃತಿಪ್ರಿಯ	C/o ಪ್ರಜಾಸಾಹಿತ್ಯ ಕಛೇರಿ
ಡಿ.ಎನ್. ಶಂಕರ ಭಟ್	ನೀನಾಸಂ, ಹೆಗ್ಗೋಡು. ಸಾಗರ ೫೭೭ ೪೧೭
ಬಿ.ಬಿ. ರಾಜಪುರೋಹಿತ	೭೧೬, ೧೬ನೆ ಮೈನ್ ಸರಸ್ವತೀಪುರ, ಮೈಸೂರು ೫೭೦ ೦೦೯
ಜಯಪ್ರಕಾಶ ಮಾವಿನಕುಳಿ	ಮಾವಿನಕುಳಿ ಮನೆ, ಮೂಡಬಿದರೆ ೫೭೪೧೯೭
ಆರ್.ವಿ. ಭಂಡಾರಿ	ಕೆರೆಕೋಣ, ಅರೆ ಅಂಗಡಿ ಅಂಚೆ ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ೫೮೧ ೪೩೦
ತಲಸ್ಪರ್ಶಿ	C/o ಪ್ರಜಾಸಾಹಿತ್ಯ ಕಛೇರಿ

ಶ್ರೀ ಹರಿಹರಪ್ರಿಯರನ್ನು ಹಲವು ವರ್ಷಗಳಿಂದ ಬಲ್ಲೆ. ಅವರು ಒಳ್ಳೆಯ ಮಾತುಗಾರರು, ಬರಹಗಾರರು, ಕಾರ್ಯಸಾಧಕರು, ಪುಸ್ತಕಪ್ರಿಯರು. ಅಪರೂಪದ ಪುಸ್ತಕಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ಜೋಡಿಸಿದ್ದು ಎಲ್ಲರಿಗೂ ದೊರೆಯುವಂತೆ ಮಾಡಿ ಪುಸ್ತಕ ಮನೆಯನ್ನೇ ಕಟ್ಟಿದವರು. ಇಂಥವರು ಮಾಸಪತ್ರಿಕೆಯನ್ನು ಹೊರತರುವಲ್ಲಿ ಉತ್ಸಾಹ ತಾಳಿ, ಕಾರ್ಯರೂಪಕ್ಕೆ ತಂದು ಪ್ರತಿತಿಂಗಳೂ ಕರಾರುವಾಕ್ಕಾಗಿ ಗ್ರಾಹಕರ ಕೈಸೇರುವಂತೆ ಮಾಡಿ ಪ್ರಿಯರಾಗಿದ್ದಾರೆ. ಇದುವರೆಗೆ ಹೊರಬಿದ್ದಿರುವ ನಾಲ್ಕು ಸಂಚಿಕೆಗಳಲ್ಲೂ ಉತ್ತಮ ಲೇಖನಗಳಿವೆ. ಸಂಪಾದಕೀಯಗಳೂ 'ಖಾರ'ವಾಗಿದ್ದು ಮಾಮೂಲು ಬರವಣಿಗೆಗಿಂತ ಭಿನ್ನವಾಗಿವೆ. ಹರಿಹರಪ್ರಿಯರ ಸಾಧನೆ ಹಿರಿದಾಗುತ್ತಾ ಮೈದುಂಬಿಕೊಂಡು ಕನ್ನಡದಲ್ಲೊಂದು ವಿಶೇಷ ರೀತಿಯ ಮಾಸಪತ್ರಿಕೆಯಾಗಿ ಹೊರಹೊಮ್ಮಲಿ.

ಬಿ.ಪಿ. ರಾಧಾಕೃಷ್ಣ

ಕೇಂದ್ರ ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – ೫೬೦ ೦೦೧.
ದೂರವಾಣಿ : ೨೨೨೪೫೧೫೨

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು

- ಆ ದೀರ್ಘ ಮೌನ (ಇಂಗ್ಲಿಷ್ ಮೂಲ : ಶಶಿ ದೇಶಪಾಂಡೆ, ಅನು : ವಿಜಯ ಕಣೇಕಲ್) ೧೨೦.೦೦
- ಆರು ಅಡಿ ಭೂಮಿ (ಉರ್ದು ಮೂಲ : ಅಬ್ದುಸ್ಸಮದ್; ಅನು : ಪಂಚಾಕ್ಷರಿ ಹಿರೇಮಠ) ೧೫೦.೦೦
- ಅರ್ಧನಾರೀಶ್ವರ (ಹಿಂದಿ ಮೂಲ : ವಿಷ್ಣುಪ್ರಭಾಕರ್; ಅನು : ಎಸ್.ಎಮ್. ರಾಮಚಂದ್ರಸ್ವಾಮಿ) ೨೫೦.೦೦
- ನೀಲಿಚಂದಿರ (ಹಿಂದಿ ಮೂಲ : ಶಿವಪ್ರಸಾದ ಸಿಂಹ; ಅನು : ಪಿ. ಶಶಿಕಲಾ) ೩೫೦.೦೦
- ಚಿಟ್ಟಾಲಹು (ಪಂಜಾಬೀ ಮೂಲ : ನಾನಕ್ ಸಿಂಗ್; ಅನು : ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) ೮೫.೦೦

ಕಥಾ ಸಂಕಲನ

- ಸ್ವರ್ಣ ಕಮಲಗಳು (ತೆಲುಗು ಮೂಲ : ಇಲ್ಲಿಂದಲ ಸರಸ್ವತೀದೇವಿ; ಅನು: ಪಿ. ವೇಣುಗೋಪಾಲ್) ೩೦೦.೦೦
- ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು: ಅಶೋಕ್ ಕುಮಾರ್) ೩೦೦.೦೦
- ದೇವರ ಮನೆ ಇತರ ಕತೆಗಳು (ಒರಿಯಾ; ಅನು: ಸೀತಾರಾಮಯ್ಯ ಸೋಮನಾಥ್) ೧೨೫.೦೦
- ತಂದೆಯ ಸ್ನೇಹಿತ (ತಮಿಳು : ಅಶೋಕ ಮಿತ್ರನ್; ಅನು : ಶೇಷನಾರಾಯಣ) ೧೦೦.೦೦
- ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು
  (ಸಂ.ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ) ೧೫೦.೦೦
- ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು: ಸ್ನೇಹಲತಾ ರೋಹಿಡೇಕರ್) ೧೬೦.೦೦

ಕಾವ್ಯ

- ಕನ್ನಡ ಸಾನೆಟ್ ಸಂಗ್ರಹ (ಸಂ. ಹೆಚ್.ಎಸ್. ವೆಂಕಟೇಶಮೂರ್ತಿ) ೮೫.೦೦
- ಶಬ್ದಗರ್ಭಿತ ಆಕಾಶ (ಒರಿಯಾ ಮೂಲ : ಸೀತಾಕಾಂತ್ ಮಹಾಪಾತ್ರ : ಅನು : ಕಮಲಾ ಹೆಮ್ಮಿಗೆ) ೯೦.೦೦
- ಸಂಬಂಧ (ಇಂಗ್ಲಿಷ್ ಮೂಲ : ಜಯಂತ ಮಹಾಪಾತ್ರ; ಅನು : ಪಿ. ಲಕ್ಷ್ಮೀನಾರಾಯಣಭಟ್) ೫೦.೦೦
- ತಮಿಳು ಕವಿತೆಗಳು (ಸಂಪಾದಕರು : ಚಂದ್ರಶೇಖರ ಕಂಬಾರ ಮತ್ತು ಓ.ಎಲ್. ನಾಗಭೂಷಣಸ್ವಾಮಿ) ೪೦.೦೦
- ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ ;
  ಅನು : ಅರ್ಕಸಾಲಿ ವೃಷಭೇಂದ್ರಾಚಾರ್) ೨೦೦.೦೦
- ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು : ಸಿ. ರಾಘವನ್) ೧೨೫.೦೦

ಇತರ

- ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ. : ಹೆಚ್.ಎಸ್. ಶ್ರೀಮತಿ) ೬೦೦.೦೦
- ತತ್ವಮಸಿ (ಮಲಯಾಳಂ ಮೂಲ : ಸುಕುಮಾರ್ ಅಳಿಕ್ಕೋಡ್, ಅನು : ವಿ. ಗೋಪಾಲಕೃಷ್ಣ) ೨೦೦.೦೦
- ಭಾರತೀಯ ಇಂಗ್ಲಿಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು : ಬಸವರಾಜ ನಾಯ್ಕರ್) ೨೦೦.೦೦
- ತೆಲುಗು – ಕನ್ನಡ ನಿಘಂಟು (ಸಂ. ಪಾಣ್ಯಂ ರಾಮಶೇಷ ಶಾಸ್ತ್ರಿ) ೧೫೦.೦೦
- ಟೀಕಾ ಸ್ವಯಂವರ : ಮರಾಠಿ ವಿಮರ್ಶಾ ಕೃತಿ (ಭಾಲಚಂದ್ರ ನೇಮಾಡೆ; ಅನು : ಚಂದ್ರಕಾಂತ ಪೋಕಳೆ) ೧೮೦.೦೦
- ಪಂಡಿತ ತಾರಾನಾಥರು ಬದುಕು ಮತ್ತು ಬರಹ (ಎಂ. ಧ್ರುವನಾರಾಯಣ) ೭೫.೦೦

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ. ೨೫.೦೦)

• ವ. ರಾ (ವ. ರಾಮಸ್ವಾಮಿ) • ನಿರಂಜನ • ಸರ್ವಜ್ಞ • ಮಹಾಕವಿ ಶ್ರೀ ಶ್ರೀ
• ರಾಚಕೊಂಡ ವಿಶ್ವನಾಥಶಾಸ್ತ್ರಿ • ಜೆ.ಪಿ. ರಾಜರತ್ನಂ